THE BOOK WAS DRENCHED

DAMAGE BOOK

TEXT LITE WITHIN THE BOOK ONLY

UNIVERSAL
LIBRARY
OU_200506
UNIVERSAL
LIBRARY

smania University Library

?4.4
15G

Accession No. PGK 748

should be returned on or before the date last

ಶ್ರೀ ಅರವಿಂದ ಗ್ರಂಥಾಲಯ ಪ್ರಕಟಣೆ ೭೫

# ಗರತಿಯ ಬಾಳಸಂಹಿತೆ

ಸಿಂಪಿ ಲಿಂಗಣ್ಣ

ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ ಸಹಾಯಧನ
ಪಡೆದು ಪ್ರಕಟಗೊಂಡದ್ದು,

ಶ್ರೀ ಅರವಿಂದ ಗ್ರಂಥಾಲಯ
ಚಡಚಣ. ಜಿ-ವಿಜಾಪುರ

Printed & Published with the aid of Karnatak Janapad Hagu Yakshagan Akademi Bangalore

ಪ್ರಕಾಶಕರು:-

ಪ್ರಾ|| ವಿ. ಎನ್. ಸಿಂಪಿ ಎಂ.ಎ.
ಶ್ರೀ ಅರವಿಂದ ಗ್ರಂಥಾಲಯ,
ಚಡಚಣ. ಜಿ. ವಿಜಾಪುರ

GARATIYA BALA SAMHITE
Appreciaticn of the way of life
as seen in Kannada folk songs
[Kannada Medium] by Simpi Lingana
Published by-Shri Aurbindo Granthalaya
CHADCHAN 586 205 Dt. Bijapur.
Page-102+16 Price- Rs. 10/-

ಪ್ರಥಮ ಮುದ್ರಣ ೧೯೮೫
ಬೆಲೆ-ರೂಪಾಯಿ ಹತ್ತು
ಪ್ರತಿಗಳು-೧೦೦೦

ಮುದ್ರಕರು:-
ಶ್ರೀಮತಿ ಪಿ. ಎಂ. ತೋಳನೂರ
ರವಿಕಿರಣ ಪ್ರಿಂಟಿಂಗ ಪ್ರೆಸ್,
ಚಡಚಣ ಜಿ. ವಿಜಾಪುರ

# ಮುನ್ನುಡಿ

ಮಿತ್ರರಾದ ಸಿಂಪಿಲಿಂಗಣ್ಣನವರು ರಸಿಕರು, ಗುಣಗ್ರಾಹಿಗಳು. ಸ್ವಾಭಾವಿಕವಾಗಿ ಬೆಳೆದುನಿಂತ ಜನಪದಸಾಹಿತ್ಯವೆಂಬ ಸುಂದರಬನದಿಂದ ಘಮಘಮಿಸುವ ನಾನಾತರದ ಹೂಗಳನ್ನಾಯ್ದು "ಗರತಿಯ ಬಾಳಸಂಹಿತೆ" ಎಂಬ ಮಾಲೆಯನ್ನು ಹೆಣೆದಿದ್ದಾರೆ. ಇದನ್ನು ಅಳವಡಿಸಿಕೊಂಡವಳೇ ಗರತಿ

ಮಹಿಳೆ ಒಂದೇ ಜನ್ಮದಲ್ಲಿ ನಾಲ್ಕು ಅವತಾರಗಳನ್ನು ತಳೆಯುತ್ತಾಳೆ. ಹುಟ್ಟಿದ ಮನೆಗೆ ಮಗುವಾಗಿ. ಕೊಟ್ಟಮನೆಗೆ ಸೊಸೆಯಾಗಿ. ಪತಿಗೆ ಸತಿಯಾಗಿ ತಾನು ಜನ್ಮಕೊಟ್ಟ ಮಗುವಿಗೆ ತಾಯಾಗಿ - ಹೀಗೆ ಲೇಖಕರು ಗರತಿಯ ಚತುರವತಾರದ ಅದ್ಭುತಪವಾಡವನ್ನು ಇಲ್ಲಿ ಬಣ್ಣಿಸಿದ್ದಾರೆ. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆಹೋಗಿ ಅಲ್ಲಿಯ ಪರಿಸರಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು ಸುಲಭವೇ? ಅದೆಷ್ಟು ಭಾವನೆಗಳ ತಿಕ್ಕಾಟ, ಅದೆಷ್ಟು ಮಾನಸಿಕ ಒತ್ತಡ ಆಕೆಗೆ! ಈ ಸ್ಥಿತ್ಯಂತರದಲ್ಲಿ ಆಕೆ ಅನುಭವಿಸಿದ ನೋವು-ನಲಿವು, ಕಷ್ಟ-ಕಾರ್ಪಣ್ಯ, ಹಿಗ್ಗು-ಮುಗ್ಗುಗಳನ್ನು ಗರತಿಯು ಹಾಡಿನ ರೂಪದಲ್ಲಿ ವ್ಯಕ್ತಪಡಿಸಿದ್ದಾಳೆ. ಒಂದು ಸಹಜ ಕ್ರಮವೆಂಬಂತೆ ಗರತಿ ಅವುಗಳನ್ನು ಎದುರಿಸಿದ್ದಾಳೆ.

ಆಕೆಯ ಪ್ರಯತ್ನಕ್ಕೆ ಒಂದೊಂದು ಸಲ ಯಶದೊರೆತಿರಲಿಕ್ಕಿಲ್ಲವ ಆಗೀಗ ಅವಳು ಎಡವಿರಲೂಬಹುದು. ಆದರೆ ಒಮ್ಮೆಯೂ ಆಕೆ ತನ್ನ ಕರ್ತವ್ಯಪಾಲನೆಯಿಂದ ಮುಖತಿರುಹಿಲ್ಲ. ಆದೆಷ್ಟೋ ಸಾರೆ ಪುರುಷನು ಬದುಕನ್ನು ಎದುರಿಸಲಾರದೆ ಪಲಾಯನ ಮಾಡಿದ್ದುಂಟು. ಈ ಮಾತನ್ನು ಲೇಖಕರು ಬಹುಮಾರ್ಮಿಕವಾಗಿ ಹೇಳಿದ್ದಾರೆ.-

"ಜಗತ್ತಿನಲ್ಲಿಯೇ ಪ್ರಖ್ಯಾತರಾದ ಅನೇಕ ಮಹಾಶಯರು ಬಾಳ ಜಂಜಡವನ್ನು ತೊಲಗಿಸುವೆನೆಂದು ಹೇಳಿ, ಬಾಳನ್ನೇ ತೊರೆದು ಅರಣ ಸೇರಿದರು."

ಆದರೆ ಗರತಿ ಈ ಜಂಜಡದಲ್ಲಿಯೇ ಉಳಿದು ಅದನ್ನ ಮರಿಸಿ ತಿಳಿಗೊಳಿಸುವುದೇ ತನ್ನ ಬಾಳಧರ್ಮವೆಂದು ಬಗೆದಿದ್ದಾಳೆ. ಆಕೆ ಸಂಸಾರದ ಅಡಿಗಲ್ಲು. ಕುಟುಂಬ ಸಂಸ್ಥೆಯ ಅಧ್ಯಕ್ಷೆ ಈ ಸಂಸಾರ ಚಕ್ರದ ಮಧ್ಯದಲ್ಲಿ ಮೇಟಿಕಂಬವಾಗಿ, ಜ್ಯೋತಿತಪ್ಪದಂತೆ ಸ್ಥಿರವಾಗಿ ನಿಂತಿದ್ದಾಳೆ.

ಇತರ ಪಾತ್ರಗಳೆಲ್ಲ ಅವಳ ಸುತ್ತಲು ತಿರುಗುತ್ತವೆ. ಈ ದೃಷ್ಟಿಕೋನವನ್ನು ಲೇಖಕರು ಗರತಿಹಾಡಿದ ತ್ರಿಪದಿಗಳಿಂದಲೇ ಬಹುಕಲ್ಮಾತ್ಮಕವಾಗಿ ನಿರೂಪಿಸಿದ್ದಾರೆ. ಅದು ಇಂದಿನ ಮಹಿಳೆಯರಿಗೆ ಬಾಳಸಂಹಿತೆಯಾಗಿ ಮಾರ್ಗದರ್ಶನ ಮಾಡುವಂತಿದೆ.

ಶ್ರೀ ಸಿಂಪಿ ಅವರ ಆಯ್ಕೆಯಲ್ಲಿ ಒಂದು ಕ್ರಮವಿದೆ. ಗರತಿಯು ಬದುಕಿನ ವಿವಿಧರಂಗಗಳಲ್ಲಿ ತನ್ನ ಪಾತ್ರವನ್ನು ಹೇಗೆ ಆತ್ಮವಿಶ್ವಾಸದಿಂದ ನಿರ್ವಹಿಸುತ್ತಾಳೆ-ಎಂಬುದನ್ನು ಈ ಹಾಡುಗಳು ಸ್ಪಷ್ಟಪಡಿಸು-ತ್ತವೆ. ಪುರುಷ ಕಮಲಪತ್ರದಂತೆ ಸಂಸಾರಸಾಗರದ ಹೊರಗೇ ಇರುವ-ವನು. ಸಂಸಾರದ ಜಂಜಡದಲ್ಲಿ ಸದಾ ಕಾಲ ಸುತ್ತಾಡುವವಳು ಮಹಿಳೆಯೇ. ಬಾಲ್ಯದಲ್ಲಿ ತಾಯಿತಂದೆಗಳಿಗೆ ಅಕ್ಕರೆಯ ಮಗುವಾಗಿ ಬೆಳೆದಿರುತ್ತಾಳೆ. ತನ್ನ ಸಖಿಯರೊಡನೆ ಹರ್ಷದಿಂದ ಕಾಲಕಳೆದಿರುತ್ತಾಳೆ. ವಯಸ್ಸಿಗೆಬಂದ ಕೂಡಲೇ ಪ್ರೀತಿಯ ಬಂಧುಬಾಂಧವರನ್ನೆಲ್ಲ ತೊರೆದು ಮೊದಲಗಿತ್ತಿಯಾಗಿ ಪತಿಯಮನೆಗೆ ತೆರಳಬೇಕು. ಅಲ್ಲಿ ಅತ್ತೆ-ನಾದಿನಿಯರಿಗೆ ಅಂಜುತ್ತ ಅಳುಕುತ್ತ ಕಾಲಕಳೆಯಬೇಕು. ಹೊಸಮನೆ, ಹೊಸಜನ, ಹೊಸ ವಾತಾ-ವರಣ ಹೆಚ್ಚು ಮಾತಾಡಲು ಆಕೆಗೆ ಸಂಕೋಚ. ಏನು ಮಾಡಲು ಭಯ. ತಾಯಿಯ ನೆನಹು ತವರಿನ ಹಂಬಲ ಈ ಕಾಲಕ್ಕೆ ತೀವ್ರವಾಗಿರುತ್ತದೆ. ತಾನು ಅತ್ತೆಯ ಮನೆಗೆ ಬರುವಾಗ ತನ್ನ ತಾಯಿಹೇಳಿದ ಬುದ್ಧಿಯ-ಮಾತು ಸದಾಸ್ಮರಣೆಯಲ್ಲಿರುತ್ತದೆ.

**ಅತ್ತೀ(ಯು ಮನಿಯಾಗ ಹತ್ತಾರು ಬಯ್ದರ**
**ಉತ್ತರಬ್ಯಾಡ ನನಮಗಳ! ನಿಮ್ಮತ್ತೆ**
**ಉತ್ತಮರ ಮಗಳೆಂದು ನುಡಿದಾಳು॥**

ಅತ್ತೆಯಬಾಯಿಂದ ತಾನು ಉತ್ತಮರ ಮಗಳೆಂದು ಅನಿಸಿಕೊಳ್ಳುವಲ್ಲಿ ಸೊಸೆಯ ಜೀವನಕ್ಕೆ ಸಾರ್ಥಕ್ಯವಿದೆ.

**ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾದೆ।ನಾ ಹುಟ್ಟಿ ಮನೆಗೆ**
**ಎರವಾದೆ। ಹಡೆದವ್ವ। ನೀಕೊಟ್ಟ ಮನೆಗೆ ಹೆಸರಾದೆ''**

ಎಂಬ ಮಾತು ಆಕೆಯ ಹೃದಯದಿಂದ ಹೊರಹೊಮ್ಮಿದೆ. ಅತ್ತೆಯ ಕೈಯಲ್ಲಿ ಬೇಸರವಿಲ್ಲದೆ ದುಡಿಯುತ್ತಾಳೆ. ತನ್ನ ಆಲಸ್ಯವನ್ನು ಬದಿಗೊತ್ತಿ ಪತಿಯಸೇವೆ ಮಾಡುತ್ತಾಳೆ. ತವರಿನ ನೆನಹು ಒತ್ತರಿಸಿದರೂ ಹೊರಗೆ ಅದನ್ನು ತೋರಗೊಡುವದಿಲ್ಲ.

**ಅತ್ತೆ ಮಾವನಿಗಂಜಿ ಸುತ್ತೇಳು ನೆರೆಗಂಜಿ**
**ಮತ್ತೆ ನಲ್ಲನ ದನಿಗಂಜಿ।ನಡೆದರ**
**ಎಂಥ ಉತ್ತಮರ ಮಗಳಂದ॥**

ಒಮ್ಮೆ ತವರಿಗೆ ಹೋಗುವಬಗ್ಗೆ ತನ್ನ ಪತಿಯೊಡನೆ ಮೆಲ್ಲಗೆ ಮಾತೆತ್ತುತ್ತಾಳೆ. ಆತನಿಗಾದರೊ ಇನ್ನೂ ಹರೆಯದ ಹಬ್ಬ. ಹೆಂಡತಿಯನ್ನು ಅಗಲಿ ಇರಲಾರ. ತನ್ನನ್ನು ನೋಡಿ ತವರು ಮರೆಯೆನ್ನುತ್ತಾನೆ. ಆಕೆಗೆ ಸಿಟ್ಟು ಬರುತ್ತದೆ. ಹಟಮಾಡುತ್ತಾಳೆ. ಆಗ ಆತನು ಮನಸ್ಸಿಲ್ಲದ ಮನಸ್ಸಿನಿಂದ ಕೊನೆಯ ಉಪಾಯ ಕೈಕೊಳ್ಳುತ್ತಾನೆ.

**ಮಡದೀನ ಬಡಿದಾನ ಮನದಾಗ ಮರಗ್ಯಾನ**
**ಒಳಗ್ಹೋಗಿ ಸೆರಗ ಹಿಡಿಯೂತ। ಕೇಳ್ಯಾನ।**
**ನಾ ಹೆಚ್ಚೊ ನಿನ್ನ ತವರ್‍ಹೆಚ್ಚೋ॥**

ಹೀಗೆ ಸರಸ ವಿರಸಗಳಿಂದ ಕೂಡಿದ ಬದುಕನ್ನು ಎದುರಿಸುತ್ತಾಳೆ. ಮುಂದೆ ಬಯಕೆ, ಬಸಿರು, ಹೆರಿಗೆ, ಮಗುವಿನ ಲಾಲನೆ, ಪಾಲನೆ ಹೀಗೆ ಸಂಸಾರದ ಹಲವಾರು ಎಡರು-ತೊಡರುಗಳನ್ನು ಎದುರಿಸುತ್ತ. ವೈಮುರಿದು ದುಡಿಯುತ್ತಾಳೆ. ದುಡಿಮೆಯಲ್ಲಿ ಸಣ್ಣಾಗುತ್ತಾಳೆ, ಹಣ್ಣಾಗುತ್ತಾಳೆ. ಆದರೆ ಅದಕ್ಕೆ ಬೇಸರಪಡುವದಿಲ್ಲ. ಸಂಕಟಗಳಿಗಂಜಿ ಬದುಕನ್ನೇ ತೊರೆದು ಓಡಿಹೋಗುವ ಸನ್ಯಾಸಿಯ ಮನೋಭಾವ ಆಕೆಯಲ್ಲಿ ಎಂದೂ ಸುಳಿಯುವದಿಲ್ಲ. ಸಂಕಟಗಳನ್ನು ಎದುರಿಸಲು ಬಲಕೊಡು—ಎಂದು ಭಗವಂತನಲ್ಲಿ

ಹೇಳುತ್ತಾಳೆ. "ಆಸರಿಕೆ ಆರದಿಟ್ಟು, ಬ್ಯಾಸರಿಕೆ ಬರದಿಟ್ಟು, ಚಿಂತಿ ಕಾಲಾ ತುಳದಿಟ್ಟೆ" ಎಂದು ನುಡಿಯುವಷ್ಟು ಆತ್ಮವಿಸ್ವಾಸ ಅವಳಲ್ಲಿ.

ಅಂತಃಪುರದಲ್ಲಿ ಸಕಲರಾಜ ವೈಭವದಿಂದ ಮೆರೆಯಬೇಕಾದ ಸೀತಾದೇವಿಯು ಹೆರಿಗೆಯ ಕಾಲಕ್ಕೆ ಪಟ್ಟ ವನವಾಸ ಅಷ್ಟಿಷ್ಟಲ್ಲ. ವಾಲ್ಮೀಕಿ ರಾಮಾಯಣವನ್ನು ಬರೆದಿದ್ದರೆ, ಕನ್ನಡದ ಗರತಿ ಸೀತಾಯಣವನ್ನು ಬರೆದಿದ್ದಾಳೆ.

**ಅಡವಿ ಅರ್ರ್ಯಾಣದಾಗ ಹಡೆದಾಳ ಸೀತಮ್ಮ**
**ತೊಡಿಯ ತೊಡಿಯಾಕ ನೀರಿಲ್ಲ। ಹನುಮಂತ।**
**ಸೇತು ಕಟ್ಟ್ಯಾನ ಸಮುದರಕ॥**

ರಾಮಾಯಣವನ್ನು ಕಂಡತೆ ವಾಲ್ಮೀಕಿ ಸೀತಾಯಣವನ್ನು ಕಾಣಲಿಲ್ಲ ಎಂದು ಲೇಖಕರ ಅಭಿಪ್ರಾಯ.

ಕನ್ನಡ ನಾಡಿನ ಗರತಿ ಬಡತನದಲ್ಲಿ ಬೆಳೆದುಬಂದವಳು. ಆದರೂ ಸ್ವಾಭಿಮಾನಿ. ಪ್ರಸಂಗ ಬಂದರೆ ಪ್ರಾಣವನ್ನೇ ಕೊಟ್ಟಾಳು. ಸ್ವಾಭಿಮಾನವನ್ನು ಎಂದಿಗೂ ಮಾರಿಕೊಳ್ಳಲಾರಳು. ಒಮ್ಮೆ ಓರ್ವ ಚೆಲುವೆ ಎತ್ತಿನ ಮೇಲೆ ಕುಳಿತು, ಅತ್ತೆಯಮನೆಗೆ ಹೊರಟಿದ್ದಳು. ದಾರಿಯಲ್ಲಿ ಕಿತ್ತೂರ ದೊರೆಯ ಕಣ್ಣು ಅವಳ ಮೇಲೆ ಬಿದ್ದಿತು. ಅವಳ ಚಲುವಿಕೆ ಆತನ ಮನಸ್ಸನ್ನು ಆಕರ್ಷಿಸಿತು. "ಕಾಮಾತುರಾಣಾಂ ನಭಯಂ ನ ಲಜ್ಜಾಂ"–ಎನ್ನುವಂತೆ ಆತ ಕೇಳಿಯೇ ಬಿಟ್ಟ–

**ಅತ್ತೆಯ ಮನೆ ಸೊಸೆ ಎತ್ತೇರಿ ಬರುವಾಗ**
**ಕಿತ್ತೂರ ದೊರೆಯು ನೆದರಿಟ್ಟು । ಕೇಳ್ಯಾನ**
**ಹತ್ತು ರೂಪಾಯಿ ಮೊಗದೋರ ॥**

**ಅವಳ ಪ್ರತಿಕ್ರಿಯೆಯನ್ನು ಲೇಖಕರ ಮಾತಿನಲ್ಲಿಯೇ ಕೇಳೋಣ–**

**"ಆ ಮಾತು ಕೇಳಿ ಆಕೆ ಬೆದರಲೂ ಇಲ್ಲ, ಬೆಚ್ಚಲೂ ಇಲ್ಲ. ನಾಚಿಕೊಂಡು ಮುಖ ತಗ್ಗಿಸಲೂ ಇಲ್ಲ. ದೋಚಿಕೊಂಡು ಓಡಿ ಹೋಗಲೂ ಇಲ್ಲ ಚೊಕ್ಕಟವಾದ ಮಾತಿನಲ್ಲಿ ಮರು ನುಡಿದಳು."**

ಹತ್ತು ನಿನರೂಪಾಯಿ ನತ್ತೀನ ಬೆಲೆಯಿಲ್ಲ.
ಅತ್ತೀ ಹೊಟ್ಟೀಲಿ ಅರ್ಜುನ । ಕಾಲಾನ
ಮೆಟ್ಟಿನ ಬೆಲೆಯು ನಿನಗಿಲ್ಲ ।।

"ಅಭಿಮಾನಿಗಳ್, ಅತ್ಯುಗ್ರರ್. ಗಭೀರಚಿತ್ತರ್; ವಿವೇಕಿಗಳ್ ನಾಡವ-ರ್ಗಳ್" ಎಂದು ಪ್ರಾಚೀನ ಕವಿ ನುಡಿಯುವಾಗ, ಈ ಗರತಿಯಂಥ ಮಹಿ-ಳೆಯರು ಆತನ ಗಮನದಲ್ಲಿರಬೇಕು.

ಮಗು ಎಂದರೆ ತಾಯಿಗೆ ಎಲ್ಲಿಲ್ಲದ ಹಿಗ್ಗು. ಮಗುವಿಗಾಗಿ ಏನೆಲ್ಲ ತೊಂ-ದರೆ ಸಹಿಸಲೂ ಸಿದ್ಧಳು. ನೂರೊಂದು ಆಡಿಸುತಾಳೆ. ನೂರೊಂದು ವಿಧವಾ-ಗಿ ರಂಬಿಸುತ್ತಾಳೆ. "ಹೆಣ್ಣಿನ ಹಂಬಲವೆಲ್ಲ ಕುದಿಕುದಿದು ಅದು ಕಂದನಾಗಿ ಅವತರಿಸಿ ಬಂದಾಗ ಆಕೆಗಾಗುವ ಆನಂದ–ಅಚ ರಿ ಬಣ್ಣಿಸಲು ಸಾಧ್ಯವೇ ? ಬೇಂದ್ರೆಅವರು ಅನ್ನುತ್ತಾರೆ.

" ನನ್ನ ಮನಸಿನ ಹಂದರದಲ್ಲಿದ್ದ ಒಲವಿನ ಮಿಡಿಯೇ
ನನ್ನ ಕನಸಿನ ಗುಡಿಯಲ್ಲಿದ್ದ ನಲವಿನ ನುಡಿಯೇ
ನನ್ನ ನನಸಿನ ಬಸಿರಲ್ಲಿದ್ದ ಚೆಲುವಿನ ಕೈಪಿಡಿಯೇ
ನನ್ನ ಬಯಕೆಗಳ ಬಸಿರಲ್ಲಿ ಮೊಳೆದ,
ನನ್ನ ಬಸಿರಿನ ಬಯಕೆಯಲ್ಲಿ ಹೊಳೆದ
ಮುದ್ದು ಮಗುವೇ, ಬಂದೆಯಾ ಇಂದು ಕಂದನಾಗಿ ನನ್ನೊಡಲಲ್ಲಿ?"

ಲೇಖಕರ ಮಾತಿನಲ್ಲಿ ಹೇಳುವಬೇಕಾದರೆ –ಮಗುವೆಂದರೆ ಅವ್ಯಕ್ತ ಲೋಕದ ಬಾಲನಟ. ತಾಯಿಹೊಟ್ಟೆಯೇ ಆತನಿಗೆ ಬಣ್ಣದಕೋಣೆ, ಅಲ್ಲಿ ವೇಷತೊಟ್ಟು ರಂಗಭೂಮಿಗೆ ಬರುತ್ತಾನೆ." ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಗರತಿ ಹಾಡುತ್ತಾಳೆ–

ತೊಟ್ಟಿಲದೊಳಗೊಂದು ತೊಳೆದ ಮುತ್ತನೆಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ। ಕಂದೈಗ।
ಮುತ್ತಿನ ದೃಷ್ಟಿ ತೆಗೆದೇನ।।

ಮಗು ತನ್ನ ಒಡನಾಡಿಗಳೊಡನೆ ಅಂಗಳದಲ್ಲಿ ಆಡಿ, ಮೈಮುಖ ಕೈಲ್ಲ ಮಣ್ಣು ಬಳಿದುಕೊಂಡು ಬರುತ್ತಾನೆ. ಆದರೆ ತಾಯಿಗೆ ಆತನ ಕೈಕಾಲು ಮುಖ ತೊಳೆಯಲು ಬೇಸರವೇ ಇಲ್ಲ.

ಆಡಿ ಬಾ ಎನಕಂದ ಅಂಗಾಲ ತೊಳದೇನ
ತೆಂಗೀನಕಾಯಿ ತಿಳಿನೀರ| ತಕ್ಕೊಂಡು|
ಬಂಗಾರ ಮಾರಿ ತೊಳದೇನ||

ಒಂದೊಂದು ಸಲ ಮಗು ಹಟಮಾಡುವುದಂ ಸ್ವಾಭಾವಿಕ. ಏನಂ ಕೊಟ್ಟರೂ ಸಮಾಧಾನವಿಲ್ಲ. ಮಗುವಿನ ಹಟ ತಾಯಿಬಾಯಿಂದಲೇ ಕೇಳಬೇಕು.–

ಕಂದನ ಕಿರಿಕಿರಿ ಇಂದೇನ ಹೇಳಲಿ
ಬಿಂದೀಗಿ ಹಾಲು ಸುರುವೆಂದ| ಭಂಜೀಯು
ಚಂದ್ರಮನ ತಂದು ನಿಲಿಸೆಂದ||

ಲೇಖಕರು, ಒಬ್ಬ ಒಕ್ಕಲಿಗನ ಜೀವನವನ್ನೂ, ತನ್ನ ದುಡಿಮೆಯಲ್ಲಿ ಆತ ಪಡೆಯುವ ಆನಂದವನ್ನೂ ಬಹು ರಮ್ಯವಾಗಿ ಬಣ್ಣಿಸಿದ್ದಾರೆ.

ಭೂಮಿ ತಾಯಿಯ ಚೊಚ್ಚಲಮಗನೆನಸಿದ ಒಕ್ಕಲಿಗನ ಐಶ್ವರ್ಯದ ಮುಂದೆ ಅರಮನೆಯ ಸಡಗರವನ್ನು ನಿವಾಳಿಸಬೇಕು. ಐಶ್ವರ್ಯವೆನ್ನುವುದು ಈಶ್ವರನ ಅಕ್ಷಯಸಾನಿಧ್ಯ. ದುಡಿಮೆಗೆ ಹಿಂಜರಿಯದ ಸಾಮರ್ಥ್ಯ ಕಟ್ಟು ಹಾಲು ಹಯನಗಳಿಂದ ಕೈ ತೊಳಕೊಳ್ಳುವ ಸಿರಿಯೊಟ್ಟು ಯಾವುದಕ್ಕೂ ಅವನ ಕೈಮೇಲೆ ಕೊಡುಗೈ ಗೊರೆಯೆಂದರೆ ಅವನೇ. ಹೊಲ. ಉತ್ತಲಿ, ತೋಟದಲ್ಲಿ ಮೊಟ್ಟೆ ಹೊಡೆಯಲಿ, ಬೀಳು ಭೂಮಿಯಲ್ಲಿ ದನ ಮೇಯಿಸಲಿ, ಕುರಿದಡ್ಡಿಯಲ್ಲಿ ನಾಯಿಗಳ ಜೊತೆಗೆ ಮಲಗಿಕೊಳ್ಳಲಿ–ಎಲ್ಲವೂ ಚಂದವೇ ಯಾವ ಕೆಲಸಕ್ಕೆ ನಿಂತರೂ ಮುಖ ಅರಳುವದು ಅದನ್ನು ಕಂಡ ಅಕ್ಕ-ತಂಗಿಯರು ಹಿರಿ–ಹಿರಿ ಹಿಗ್ಗುವರು.

ಅವನಿಗೆ ದುಡಿಮೆ–ಉದ್ಯೋಗ ಬರೀ ಹೊಟ್ಟೆಯ ಪಾಡಲ್ಲ. ಕೈಲಾಸದ ಸುಖ ತಂದು ಒದಗಿಸುವ ಉಪಾಯ. ತೋಟಕ್ಕೆ ಹೋದ ಅಣ್ಣನು, ತನ್ನ ಕೆಲಸದಲ್ಲಿ ಊಟದ ಹಂಬಲವನ್ನೇ ಮರೆಯುವನು. ಮನೆಗೆ ಹೊರಟರೆ ಬರುವಾಗ ಯಾಲಕ್ಕಿಯ ಗೊನೆಗಳ ಬಾನಿನಿಂತು ಹಾಲು ಸುರಿಯುವವಂತೆ. ಆ ಬಗ್ಗೆ ತ್ರಿಪದಿಗಳನ್ನು ಗರತಿ ಹಾಡಿದ್ದುಂಟು. ದನಕರುಗಳೆಂದರೆ ಒಕ್ಕಲಿನ ಮನೆಯವರಿಗೆಲ್ಲ ತಮ್ಮ ಕುಟುಂಬದ ಸದಸ್ಯರಿದ್ದಂತೆ, ಅಷ್ಟು ಮಮತೆ

ಅಷ್ಟು ಮೋಹ ಅವುಗಳ ಮೇಲೆ. ತನ್ನ ತಮ್ಮನ ಎತ್ತು ಅಂದರೆ ಅಕ್ಕನಿಗೆ ಅದೆಷ್ಟು ಅಭಿಮಾನ !

ಹಂತೀಯ ನಮ್ಮ ತಿತ್ತು ಹಂತೀಲಿ ಬಂದರ
ಸೆರಗೀಲಿ ಸುಂಕ ಒರಸೀನಿ। ತಮ್ಮನ
ಹಂತೀಯ ಎತ್ತು ಹದಿನಾರು ॥

ನಮ್ಮ ಗರತಿ ಭಾವುಕಳು. ಭಗವಂತನಲ್ಲಿ ಭಕ್ತಿಶ್ರದ್ಧೆ ಉಳ್ಳವಳು. ಬೆಳಗಿನ ಜಾವ ಎದ್ದ ಕೂಡಲೇ ಭೂಮಿ ತಾಯಿಗೂ ಶಿವಪಾರ್ವತಿಯರಿಗೂ ಗುರುಗಳಿಗೂ ವಂದಿಸಿ ತನ್ನ ದೈನಂದಿನ ಕಾರ್ಯ ಆರಂಭಿಸುತ್ತಾಳೆ. ಒಮ್ಮೆ ಭಕ್ತಿಯ ಪರವಶತೆಯಲ್ಲಿ ತೆಗೆದ ಉದ್ಗಾರ ಇಂತಿದೆ—

ಇಂದು ನನ್ನಂಗಳ ಶ್ರೀಗಂಧ ನಾತಾವ
ಬಂದಿದಾನೇನ ಶ್ರೀಹರಿ । ನನ ಮನೆಗೆ ।
ಗಂಧದ ಮುಡುವ ತುಳಕೂತ ॥

ಈ ನುಡಿಯ ಮರ್ಮವನ್ನು ಲೇಖಕರು ಎರಡು ದೃಷ್ಟಾಂತಗಳಿಂದ ಬಹು ಮಾರ್ಮಿಕವಾಗಿ ನಿರೂಪಿಸಿದ್ದಾರೆ. ಸಾಧಕ ಜೀವನ ಸಾಗಿಸುತ್ತಿರುವ ಅವರಿಗೆ ಈ ನುಡಿಯ ಸಂಕೇತ ನಿಚ್ಚಳವಾಗಿದೆ. ಅಧರಸೇನ ಎಂಬ ಬಂಗಾಲಿ ಸದ್‌ಗ್ರಹಸ್ಥರು ಕಲೆಕ್ಟರ ಆಗಿದ್ದರು. ಅವರು ಶ್ರೀ ರಾಮಕೃಷ್ಣ ಪರಮಹಂಸರ ಭಕ್ತರೂ ಅಗಿದ್ದರು.ಗುರುಗಳು ಅವರ ಮನೆಗೆ ಬಂದಾಗಲೆಲ್ಲ ಮನೆಯು ಸುವಾಸನೆಯಿಂದ ಇಡುಗುತ್ತಿತ್ತಂತೆ. ಇನ್ನೊಂದು ದೃಷ್ಟಾಂತ ಎಂದರೆ– ಲೋಣಿ ಇಂಡಿ ತಾಲೂಕಿನಲ್ಲಿಯ ಒಂದು ಚಿಕ್ಕ ಗ್ರಾಮ. ಧಾರವಾಡ ತಪೋವನದ ಶ್ರೀ ಕುಮಾರಸ್ವಾಮಿಗಳು ಪ್ರತಿವರ್ಷ ಆ ಊರಿಗೆ ಭೆಟ್ಟಿ ಕೊಟ್ಟು ತಿಂಗಳೊಪ್ಪತ್ತು ಅಲ್ಲಿ ವಾಸಿಸುತ್ತಿದ್ದರು. ಅವರಿಗಾಗಿ ಭಕ್ತರ ಮನೆಯಲ್ಲಿ ಒಂದು ಕೋಣೆ ಕಾಯ್ದಿಡಲಾಗಿತ್ತು. ಅದನ್ನು ಯಾರೂ ಉಪಯೋಗಿಸುತ್ತಿದ್ದಿಲ್ಲ. ಯಾವಾಗಲೂ ಕೋಣೆಗೆ ಬೀಗ ಇರುತ್ತಿತ್ತು. ಆಗೀಗ ಕಸಗುಡಿಸಿ ಸ್ವಚ್ಛ ಮಾಡಲು ಮಾತ್ರ ಅದನ್ನು ತೆರೆಯುತ್ತಿದ್ದರು. ಆಗ ಕೋಣೆಯ ತುಂಬೆಲ್ಲ ಸುವಾಸನೆ ಇರುತ್ತಿತ್ತಂತೆ. ಮಹಾಪುರುಷರ ಸಾನ್ನಿಧ್ಯಕ್ಕೂ ಸುವಾಸನೆಗೂ ಒಂದು ಅವಿನಾಭಾವಿ ಸಂಬಂಧ ಇದ್ದಂತೆ ತೋರುತ್ತದೆ. ಇದೊಂದು ಶ್ರೇಷ್ಠತರವಾದ ಆಧ್ಯಾತ್ಮಿಕ ಸತ್ಯವಾಗಿದೆ. ಆಧ್ಯಾತ್ಮಿಕ ಶ್ರೇಣಿಯಲ್ಲಿ ಮನ-

ಕ್ಕಿಂತಲೂ ಹೆಚ್ಚು ಉನ್ನತವಾದ ಒಂದು ಹಂತ ತಲುಪಿದಾಗ ಇಂಥ ಆಧ್ಯಾತ್ಮಿಕ ಅನುಭವಗಳು ಉಂಟಾಗುವವೆಂದು ಪಾಂಡಿಚೇರಿಯ ಶ್ರೀಮಾತೆಯವರೂ ಶ್ರೀ ಅರವಿಂದರೂ ಹೇಳುತ್ತಾರೆ. ಇಂಥ ಅನುಭವ ಪಡೆದ ಕನ್ನಾಡ ಗರತಿ ಅನುಭಾವಿಯೇ ಆಗಿರಬೇಕು ಎಂದು ಲೇಖಕರು ಸರಿಯಾಗಿ ಗುರುತಿಸಿದ್ದಾರೆ.

ಹೀಗೆ ಲೇಖಕರು ಗರತಿಯ ಜೀವನದ ಸಮಗ್ರ ದರ್ಶನವನ್ನೇ ಈ ಗ್ರಂಥದಲ್ಲಿ ಮೂಡಿಸುತ್ತಾರ. ಕೊನೆಗೆ ಬಹು ಬೆಲೆಯುಳ್ಳ ಮಾತನ್ನು ಹೇಳಿದ್ದಾರೆ:

"ಯುದ್ಧರಂಗದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಿಸಿದಂತೆ, ಶ್ರೀಕೃಷ್ಣನ ತಂಗಿ ಸುಭದ್ರೆಯು ಗರತಿಗಾಗಿ ಕುಟುಂಬರಂಗದಲ್ಲಿ ಸಂಸಾರ ಗೀತವನ್ನು ತ್ರಿಪದಿಗಳ ರೂಪದಲ್ಲಿ ಒದಗಿಸಿದಳೆಂದು ತೋರುತ್ತದೆ. ಗರತಿಯ ಹೃದಾಯಾಳದಿಂದ ಬರುವ ಈ ಹಾಡುಗಳು ಮಂತ್ರಗಳಿದ್ದಂತೆ. ಅಂತೆಯೇ ಅವು ಸಂಸಾರವೇದವೆನಿಸಿವೆ"

ಶ್ರೀ ಸಿಂಪಿ ಲಿಂಗಣ್ಣವರಿಗೆ ಜಾನಪದಸಾಹಿತ್ಯ ಕರತಲಾಮಲಕವಾಗಿದೆ. ಜನಪದಸಾಗರದಲ್ಲಿ ಅವರು ಬಹು ಲೀಲಾಜಾಲವಾಗಿ ಈಸಾಡಬಲ್ಲರು. ಪ್ರತಿಯೊಂದು ಹಾಡಿನ ಹಿನ್ನಲೆಯನ್ನು ಬಹುಸರಸವಾಗಿ ನಿರೂಪಿಸಿದ್ದಾರೆ. ಗಂಡ-ಹೆಂಡಿರ ಪ್ರೀತಿ-ಕಲಹ, ಮೋಹ ಮುನಿಸು, ಸಂಸಾರದ ಸರಸ-ವಿರಸ, ಮಕ್ಕಳಆಟ ಕಂಡಾಗ ತಾಯಿಗುಂಟಾಗುವ ಹರುಷ, ಅತ್ತೆಸೊಸೆಯರ ಇರಸು ಮುರಸು ಇವೆಲ್ಲ ಈ ಗ್ರಂಥದಲ್ಲಿ ಬಹುರಮ್ಯವಾಗಿ ಮೂಡಿಬಂದಿವೆ. ಶ್ರೀ ಸಿಂಪಿ ಅವರದು ಸಿದ್ಧ ಲೇಖನಿ. ಈ ಲೇಖನಿಯಿಂದ ಮೂಡಿ ಬಂದುದೆಲ್ಲ ಸರಸಸಾಹಿತ್ಯವೇ ಆಗಿದೆ.

**ಚಡಚಣ** — **ಎಂ. ಆರ್. ಜಹಗೀರದಾರ**

ದಿ. ೧೪-೩-೧೯೮೫ — **M.A. B.Ed.**

ನಿವೃತ್ತ ಮುಖ್ಯಾಧ್ಯಾಪಕ

# ನಲ್ನುಡಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಜಾನಪದ ಸಾಹಿತ್ಯಕ್ಷೇತ್ರವನ್ನು ಚೆನ್ನಾಗಿ ಕೃಷಿ ಮಾಡಿದ ಖ್ಯಾತ ಸಾಹಿತಿ ಶ್ರೀ ಸಿಂಪಿ ಲಿಂಗಣ್ಣನವರು ಈ "ಗರತಿಯ ಬಾಳ ಸಂಹಿತೆ" ಯಲ್ಲಿ ಸಂಚಿಯ ಹೊನ್ನಮ್ಮಳಿಗಿಂತಲೂ ಒಂದು ಕೈ ಮೇಲಾಗಿ ಹೆಣ್ಣನ ಮಹತ್ವ ಎತ್ತಿ ಹೇಳುತ್ತ ಅವಳ ಜೀವನದ ಸರಸ-ವಿರಸಗಳನ್ನು ತೋರಿಸಿದ್ದಾರೆ. ಇಷ್ಟೇ ಅಲ್ಲ ಭಾರತೀಯ ಸಂಸ್ಕೃತಿ ಅವಳಿಂದಲೇ ಉಳಿದಿದೆ ಎಂದು ಸ್ಪಷ್ಟ ಪಡಿಸಿದ್ದಾರೆ.

ಪ್ರತಿಯೊಂದು ನಾಡಿನ ಜನತೆಯ ನೆನಪು, ಮಾತುಕತೆ ಮತ್ತು ನಡುವಳಿಕೆಯಲ್ಲಿ ಪರಂಪರೆಯಿಂದ ಅನೇಕ ಸಂಗತಿಗಳನ್ನು ಹೊತ್ತು ತರುತ್ತಿರುತ್ತದೆ ಎಂಬುದನ್ನೇ ಶ್ರೀ ಸಿಂಪಿಯವರು ತಮ್ಮ ೧೦೨ ಪುಟದ ಈ ಚಿಕ್ಕ ಹೊತ್ತಿಗೆಯಲ್ಲಿ ೧೭೦ ತ್ರಿಪದಿಗಳ ಉದಾಹರಣೆಗಳೊಂದಿಗೆ ಬಿಂಬಿಸಿದ್ದಾರೆ. ಮಧ್ಯದಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟ ಪಡಿಸಲು ಅದೆಷ್ಟೋ ತ್ರಿಪದಿಯ ಸೆಳಕುಗಳು ಸುಳಿದು ಬಂದಿವೆ.

ಇಲ್ಲಿಯ ೨೦ ತಲೆಕಟ್ಟುಗಳು ಜಾನಪದ ಮಾದರಿಯಲ್ಲಿಯೇ ಇದ್ದು ೨೦ ಹೊಸ ವಿಚಾರಗಳನ್ನು ಹೊತ್ತು ತಂದು ಓದುಗರಿಗೆ ತಲೆ ತುರುಸುವಂತೆ ಮಾಡಿ ಬೆರಳು ಕಚ್ಚಿಸುತ್ತಿವೆ.

ಆದರಲ್ಲಿಯೂ ಒಂದೊಂದು ಪದರು ಒಂದೊಂದು ನೂತನ ಸಂಗತಿಯನ್ನು ಹೊರಗೆ ಹಾಕುತ್ತದೆ. ಈ ಕ್ರಮ ಜಾನಪದ ಇತಿಹಾಸ ಕ್ಷೇತ್ರದಲ್ಲಿ ಹೊಸ ಆಯಾಮ ವೆನಿಸುತ್ತದೆ ಆಡು ಭಾಷೆಯಲ್ಲಿ ಆಡಿದ ಮಾತುಗಳು ಅನುಭವದ ಆಗಾರಗಳಾಗಿವೆ ಎಂಬುದನ್ನು ಸಿದ್ಧ ಪಡಿಸಿದ್ದಾರೆ. ತ್ರಿಪದಿ ಎಂತಹ ದೇಶಿಯ ಮಟ್ಟುಗಳ ಮುಖಾಂತರ ತಮ್ಮ ಸಶಕ್ತ ಸಾಹಿತ್ಯಕ ರೂಪವನ್ನು ಕಂಡು ಕೊಂಡರೆಂಬುದನ್ನು ಎಳೆ ಎಳೆಯಾಗಿ ಹಿಂಜುತ್ತ ತೋರಿಸಿಕೊಟ್ಟಿದ್ದಾರೆ. ಈ ರೀತಿಯಾಗಿ ಈ "ಗರತಿಯ ಬಾಳ ಸಂಹಿತೆ" ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಗುವದೆಂದು ಧಾರಾಳವಾಗಿ ಹೇಳಬಹುದು.

ಮಹಾತ್ಮಾ ಟಾಲ್‌ಸ್ಟಾಯ್‌ರು ಹೇಳುವಂತೆ–

"ಧರ್ಮ ಎಂದರೆ ದೇವರು ಮಾನವನಿಗೆ ಕೊಟ್ಟಿರುವ ಒಂದು ವಿಶೇಷ ದಿವ್ಯ ಜ್ಞಾನ. ಈ ಜ್ಞಾನಕ್ಕೆ ಅನುಗುಣವಾಗಿ ತನ್ನ ದೇವರನ್ನು ಪೂಜಿಸುವುದೇ ಧರ್ಮಎನ್ನುವುದರ ಮೊದಲನೆಯ ಅರ್ಥ."

ಈ ಧರ್ಮದ ವಿಶಾಲ ಅರ್ಥವನ್ನು ಗರತಿಯಲ್ಲಿ ನಾವು ಚನ್ನಾಗಿ ಕಾಣಬಹುದೆಂದು ಸಾಹಿತಿ ಶ್ರೀ ಸಿಂಪಿ ಲಿಂಗಣ್ಣನವರು ತಿಳಿಯ ಪಡಿಸಿದ್ದಾರೆ. ಒಂದೊಂದು ತ್ರಿಪದಿಯ ಹಿಂದಿರುವ ಒಂದೊಂದು ಒಳ ವಿಶಾಲ ಅರ್ಥವನ್ನು ಬಿಂಬಿಸಿದ್ದಾರೆ. ಅದುವೆ ಮಾನವ ಧರ್ಮ ಎಂದು ಸಾರಿದ್ದಾರೆ.

**ಕಾಶೀಗಿ ಹೋಗಲಕ ಏಸೊಂದು ದಿನ ಬೇಕ**
**ತಾಸೊತ್ತಿನ್ಹಾದಿ ತವರೂರ। ಮನಿಯಾಗ**
**ಕಾಶಿ ಕುಂತಾಳ ಹಡೆದವ್ವ ॥**

ಎನ್ನುವ ಈ ತ್ರಿಪದಿಯಲ್ಲಿ ಅದೆಂಥ ಅದ್ಭುತ ಅರ್ಥವನ್ನು ನಾವು ಕಾಣಬಹುದು. ಹಡೆದವ್ವಳೇ ಜಗಜ್ಜನನಿ ಎಂದು ಹೇಳುವುದರಲ್ಲಿ ಹೊಸ ವಿಚಾರ. ಹೊಸ ಜ್ಞಾನ. ಹೀಗೆ ಶ್ರೀ ಸಿಂಪಿ ಲಿಂಗಣ್ಣನವರು ಒಂದೊಂದೇ ಅರ್ಥವನ್ನು ಸುಂದರವಾಗಿ ತಿಳಿಯಾಗಿ ಸ್ಪಷ್ಟ ಪಡಿಸಿದ್ದಾರೆ. ಈ ರೀತಿಯಾಗಿ ನೋಡಿದರೆ ಇದೊಂದು ಸಂಶೋಧನಾ ಗ್ರಂಥವೆಂದೇ ಹೇಳಬಹುದು.

ಒಟ್ಟಿನಲ್ಲಿ ಜಾನಪದ ಸಾಹಿತ್ಯಾಚಾರ್ಯರೆನಿಸಿದ ಸಿಂಪಿ ಲಿಂಗಣ್ಣನವರ ಈ "ಗರತಿಯ ಬಾಳ ಸಂಹಿತೆ" ಜಾನಪದ ಸಾಹಿತ್ಯಾಕಾಶದಲ್ಲಿ ಹೊಳೆವ ಬೆಳ್ಳಿ ಚಿಕ್ಕೆಯಂತೆ ಜಾನಪದ ಸಾಹಿತ್ಯಾಭ್ಯಾಸಿಗಳಿಗೆ ಒಂದು ಕೈ ದೀವಿಗೆಯಾಗಿದೆ. ಇವರಿಂದ ಇಂಥ ಇನ್ನೂ ಹತ್ತಾರು ಕೃತಿಗಳು ಹೊರಬಂದು ಸಾಹಿತ್ಯಾಭ್ಯಾಸಿಗಳಿಗೆ ಹೊಸ ಬೆಳಕು ನೀಡಲೆಂದು ಹಾರೈಸುತ್ತೇನೆ.

**ಚಡಚಣ** — **ಮ. ನಿ. ತೋಳನೂರ**
೨೦-೩-೮೫ ಎಂ.ಎ.(ಕನ್ನಡ) ಎಂ.ಎ. (ಹಿಂದಿ)

# ಅರಿಕೆ

ಪ್ರಥಮ ಪಂಕ್ತಿಯ ಹಾಗೂ ಪ್ರಥಮ ದರ್ಜೆಯ ತ್ರಿಪದಿ ಸಂಗ್ರಹವಾದ "ಗರತಿಯ ಹಾಡು" ಪುಸ್ತಕಕ್ಕೆ ದಿ. ದೃಷ್ಟಾರ ಕವಿ ಬೇಂದ್ರೆಯವರು ಬರೆದ ಪರಿಚಯದಲ್ಲಿ– "ಮಗಳು, ಸೊಸೆ; ಹೆಂಡತಿ, ತಾಯಿ" ಹೀಗೆ ಹೆಣ್ಣಿನ ನಾಲ್ಕು ಜನ್ಮ ,ನಾಲ್ಕು ಅವತಾರಗಳಲ್ಲಿ ಅವಳನ್ನು ಬಣ್ಣಿಸಬೇಕೆಂದು ಸಂಕಲ್ಪವಿತ್ತು. ಆದರೆ ಕೆಲವು ಕಾರಣಗಳ ಮೂಲಕ ಅದು ಸಾಧ್ಯವಾಗಲಿಲ್ಲ." ಎಂದು ಬರೆದಿದ್ದರೂ, "ಸುಮಾರಾಗಿ ಅದನ್ನೇ ಹೋಲುವಂತೆ ಈ ಸಂಗ್ರಹವನ್ನು ರಚಿಸಲಾಗಿದೆ" ಎಂದು ತೃಪ್ತರಾದದ್ದುಂಟು. ಆದರೆ ನಾನು, ನನಗೆ ತಿಳಿದ ಮಟ್ಟಿಗೆ ಹೆಣ್ಣಿನ ನಾಲ್ಕು ಅವತಾರಗಳನ್ನು ಕುರಿತು ಹಾಗೂ ಆಕೆಯ ಸೌಜನ್ಯ ಸಿದ್ಧಿಯನ್ನು ಕುರಿತು ಗೀಚುಗೆರೆಯಲ್ಲಿ ಮೂಡಿಸಲು ಯತ್ನಿಸಿದ್ದೇನೆ ಈ "ಗರತಿಯ ಬಾಳ ಸಂಹಿತೆ" ಯಲ್ಲಿ.

ಕರ್ನಾಟಕ ಜನಪದ ಹಾಗೂ ಯಕ್ಷಗಾನ ಅಕಾಡೆಮಿಯ ಸಹಾಯ ಧನ ಸಿಕ್ಕಿದ್ದರಿಂದ "ಗರತಿಯ ಬಾಳ ಸಂಹಿತೆ" ಯ ಪುಸ್ತಕರೂಪವನ್ನು ತಳೆಯುವುದಕ್ಕೆ ಸಾಧ್ಯವಾಯಿತು. ಅದರ ಶ್ರೇಯಸ್ಸು ಅಕಾಡೆಮಿಯರಿಗೆ ಸಲ್ಲಬೇಕು. ಮಿತ್ರರಾದ ಎಂ. ಆರ್. ಜಹಗೀರದಾರ ಅವರು ಚೆಲುವಾದ ಮುನ್ನುಡಿ ಬರಕೊಟ್ಟು ಅದರ ಸಿಂಗಾರವನ್ನು ಹೆಚ್ಚಿಸಿದ್ದಾರೆ. ಶ್ರೀ ಮ. ನಿ. ತೋಳನೂರ ಅವರು ಚಿಕ್ಕ-ಚೊಕ್ಕ ನಲ್ನುಡಿಯ ಉಡುಗೊರೆ ಒದಗಿಸಿದ್ದಾರೆ ಆದಕ್ಕಾಗಿ ಅಕಾಡೆಮಿಯವರಿಗೆ ನಾನು ಉಪಕೃತನಾದಂತೆ, ಈ ಹಿರಿ-ಕಿರಿಯ ಮಿತ್ರರಿಗೆ ಕೃತಜ್ಞನಾಗಿದ್ದೇನೆ.

ನಮ್ಮ ಪ್ರಕಟನಾ ಕಾರ್ಯಕ್ಕೆ ಇನ್ನು ಮಂಗಲ ಹಾಡುವುದೇ ಸೂಕ್ತವೆನ್ನುವಂಥ ಪರಿಸ್ಥಿತಿಯೊದಗಿತೆನ್ನುವಷ್ಟರಲ್ಲಿ ಎಲ್ಲಿಯದೋ ಅಯಾಚಿತವಾದ ನೆರವು ಅಚಾನಕವಾಗಿ ಬರುವುದನ್ನು ಗಮನಿಸಿದಾಗ ದೈವೀ ಸಂಕಲ್ಪದ ಅರ್ಥವನ್ನು ಗ್ರಹಿಸಿ ಅಚ್ಚರಿಯೀವ ಸಾಹಿತ್ಯಶಾರದೆಯ ಅಡಿಯಲ್ಲಿ ತಲೆ ಬಾಗುತ್ತದೆ. ಬರೆಯುವುದು ನನ್ನ ಕೈಯೊಳಗಿನ ಕೆಲಸ. ಸಹಾಯ ನೀಡುವುದು ನನ್ನವರ ಎದೆಯೊಳಗಿನ ಮಮತೆ. ಪುಸ್ತಕ ಕೊಂಡೋದುವುದು ರಸಿಕರ ಔದಾರ್ಯ. ಈ ಮೂರು ಒಂದು ಹುರಿಯಲ್ಲಿ ಸಂಗಳಿಸಿದರೆ ಸಾಹಿತ್ಯ ಪೂಜೆಗೆ ಸುಗಮತೆ ಉಂಟಾಗುತ್ತದೆ.

ಈ ವರೆಗಿನ ನಮ್ಮ ಪ್ರಕಟನೆಗಳನ್ನು ಮೆಚ್ಚಿಕೊಂಡ ಕನ್ನಡ ಬಾಂಧವರು ಇದನ್ನು ಅಕ್ಕರಯಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ. ಪುಸ್ತಕವನ್ನು ಅಚ್ಚುಕಟ್ಟಾಗಿ ಸಕಾಲಕ್ಕೆ ಮುದ್ರಿಸಿಕೊಟ **ರವಿಕಿರಣ ಪ್ರೆಸ್ಸಿನ** ಮಿತ್ರರಿಗೆ ಅಭಿನಂದಿಸುತ್ತೇನೆ.

ಚಡಚಣ

**೧೫-೩-೮೫** **— ಸಿಂಪಿ ಲಿಂಗಣ್ಣ**

# ಪರಿವಿಡಿ


| ವಿಷಯ | | ಪುಟ |
|---|---|---|
| ೧) | ಮುನ್ನುಡಿ | 3 |
| ೨) | ನಲ್ನುಡಿ | 11 |
| ೩) | ಅರಿಕೆ | 13 |
| ೪) | ಧರ್ಮವೊಂದು ಪುರುಷಾರ್ಥ | ೧ |
| ೫) | ಚತುರವತಾರ | ೫ |
| ೬) | ಕುಟುಂಬ ಸಂಸ್ಥೆ | ೧೧ |
| ೭) | ದುಡಿತ-ಮಿಡಿತ | ೧೫ |
| ೮) | ಬಾಳ-ಜಂಜಾಟ | ೧೯ |
| ೯) | ಆತ್ಮ ಪೋಷಣಕಾಗಿ | ೨೩ |
| ೧೦) | ಮನಸ್ತರವನು ಮೀರಿ | ೨೮ |
| ೧೧) | ಪ್ರೇಮ ವಿಕಾಸದ ಪಾಠ | ೩೨ |
| ೧೨) | ತನ್ನಂತೆ ಪರರ ಬಗೆದಡೆ | ೩೮ |
| ೧೩) | ಅತ್ತೆ ಮನೆಯ ಅರಸಿ | ೪೪ |
| ೧೪) | ಸಮರಸದತ್ತ | ೪೮ |
| ೧೫) | ಕೊಡಹಾಲಿನಲ್ಲಿ ಹರಳುಪ್ಪು | ೫೫ |
| ೧೬) | ತನ್ನಂಗ ನೋಡಿದರೆ | ೬೦ |
| ೧೭) | ಬಾಳ ಪ್ರಸಾದ | ೬೬ |
| ೧೮) | ಕರ್ತಾರನ ಕಮ್ಮಟ | ೭೨ |
| ೧೯) | ದುಡಿಮೆಗೆ ಹೇಸಿಕೆಯೇ | ೭೮ |
| ೨೦) | ಮನೆಯೊಂದು ಆಶ್ರಮ | ೮೩ |
| ೨೧) | ಒಲ್ಲದ ಒಗೆತನ | ೮೮ |
| ೨೨) | ಬೇಕಾಗಿ ಇರಬೇಕು | ೯೩ |
| ೨೩) | ಸೌಜನ್ಯ ಸಿದ್ಧಿ | ೯೭ |

ನವ ಪ್ರಕಟಣೆಗಳ ಕುರಿತು —

# ಅ ಭಿ ಪ್ರಾ ಯ ಗ ಳು

## ಥಾಳಿಸಿದ ದೀಪ–

"ಈ ಸಂಗ್ರಹದಲ್ಲಿರುವ ೫೭ ಕಥೆಗಳಲ್ಲಿ ಯಾವ ಕಥೆಯನ್ನೋದಿದರೂ ಅದರ ಹಿಂದಿರುವ ಧನಿಯು ಮುಂಡಕೋಪನಿಷತ್ತಿನ ಸಾರವಾಗಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ಮುಂಡಕೋಪನಿಷತ್ತನ್ನು ಕುರಿತು, ಚಡಚಣದಲ್ಲಿ ಪ್ರವಚನ ಮಾಡುವಾಗ ವಿಷಯವನ್ನು ನಿಚ್ಚಳಗೊಳಿಸುವ ಸಲುವಾಗಿ ಉದಾಹರಿಸಿದ ಕಥೆಗಳೇ ಇಲ್ಲಿ ಸಂಕೇತ್ರಗಳೆನಿಸಿವೆ. ಉಕ್ಕಿನ ಕಡಲೆಯಂತಿರುವ ತತ್ತ್ವಜ್ಞಾನವನ್ನು ಸಾಂಕೇತಿಕ ಕಥೆಗಳ ಮೂಲಕ ಮೃದುಗೊಳಿಸಿ ಎಲ್ಲರೂ ಮೆಲ್ಲುವಂತೆ, ಮೆದ್ದು ಆರಗಿಸಿ ಕೊಳ್ಳುವಂತೆ ಎಲ್ಲ ಹಿರಿ–ಕಿರಿಯರಿಗೆ ತಿಳಿಯುವ ಸುಲಭ ಭಾಷೆಯಲ್ಲಿ ಸಿಂಪಿ ಲಿಂಗಣ್ಣನವರು ಜ್ಞಾನ ದೂಟವನ್ನು ಬಡಿಸಿದ್ದಾರೆ"

— "**ಆನಂದ**" ವಾರ ಪತ್ರಿಕೆ

## ರಾಮತೀರ್ಥರ ಪತ್ರಗಳು—

"**ಮಹಾನುಭಾವರಾದ** ಶ್ರೀ ರಾಮತೀರ್ಥರ ಹೃದಯದಿಂದ ಹೊರ ಹೊಮ್ಮಿದ ಕಿಡಿ-ನುಡಿಗಳಲ್ಲಿ ಚಿರಂತನವಾಗಿ ಉಳಿಯುವ ಮಾನವೀಯ ಮೌಲ್ಯಗಳಿವೆ. ತತ್ತ್ವಜ್ಞಾನವಿದೆ. ಸಂಸ್ಕೃತಿಯ ಪರಿಮಳವಿದೆ. ಇಲ್ಲಿ ತೀರ್ಥ ರಾಮನು ರಾಮತೀರ್ಥರಾದ ನಿಚ್ಚಳ ನಿದರ್ಶನ ದೊರೆಯುತ್ತದೆ. ಹಿಮಾಲಯದೊಳಗಿನ ಪವಿತ್ರ ಸ್ಥಳಗಳ ವರ್ಣನೆಗಳನ್ನು ನೋಡಿದರೆ ಅವು ಪ್ರತ್ಯಕ್ಷ ನೋಡಿದಂತೆಯೇ ಓದುಗರಿಗೆ ಭಾಸವಾಗುತ್ತವೆ. ಲಿಂಗಣ್ಣನವರು ಈ ಪತ್ರಗಳನ್ನು ಅತ್ಯಂತ ಸರಳ ಸುಂದರ ಶೈಲಿಯಲ್ಲಿ ಕನ್ನಡಕ್ಕಿಳಿಸಿದ್ದಾರೆ. ಸ್ವಾಮಿಗಳ ದಿವ್ಯವ್ಯಕ್ತಿತ್ವವನ್ನು ಈ ಪತ್ರಗಳ ಮೂಲಕ ಕನ್ನಡಿ ಹಿಡಿದು ತೋರಿಸಿದ್ದಾರೆ."

"**ಪುಸ್ತಕ ಪ್ರಪಂಚ**" ಮೈಸೂರ

# ಗರತಿಯ ಬಾಳಸಂಹಿತೆ.

## ೧. ಧರ್ಮವೊಂದು ಪುರುಷಾರ್ಥ.

ಧರ್ಮವೆನ್ನುವುದು ನಾಲ್ಕು ಪುರುಷಾರ್ಥಗಳಲ್ಲಿ ಒಂದಾಗಿದೆ. ಅದು ಪುರುಷಾರ್ಥವೆನಿಸಿದರೂ, ಪುರುಷರಿಗಷ್ಟೇ ಮೀಸಲಾಗಿಲ್ಲ. ಸ್ತ್ರೀಯರೂ ಆ ಪೌರುಷವನ್ನು ಸಾಧಿಸಬಹುದಾಗಿದೆ. ತಿರುಗಿ ಕೇಳಿದರೆ, ಸ್ತ್ರೀಯರೇ ಅದನ್ನು ಸಹಜಕ್ರಮದಿಂದ ಸಮರ್ಪಕವಾಗಿ ಸಾಧಿಸಿತೋರಿಸಿದ್ದಾರೆ. ಅದಕ್ಕಾಗಿಯೇ ಅವರು ಗರತಿಯರೆನಿಸಿದ್ದಾರೆ. ಗರತಿ ಹಾಡುವ ಮತ್ತು ಹಾಡಿದ ಹಾಡುಗಳೆಂದರೆ ಆ ಧರ್ಮಸಿದ್ಧಿಯ ಸಂಹಿತೆಯೇ ಆಗಿದೆ. ಗರತಿಯ ಧರ್ಮಕ್ಕೆ ಸತ್ತಬಳಿಕ ಸಿಗಬಲ್ಲ, ಜೀವವಿಮಾ ಪದ್ಧತಿಯ ಮೋಕ್ಷದ ಗುರಿಯಿಲ್ಲ. ಆಕೆಯದು ಬಾಳಧರ್ಮ. ಜಗತ್ತಿನಲ್ಲಿಯೇ ಪ್ರಖ್ಯಾತರಾದ ಅನೇಕ ಮಹಾಶಯರು ಬಾಳಜಂಜಡವನ್ನು ತೊಲಗಿಸುವೆನೆಂದು ಹೇಳಿ, ಬಾಳನ್ನೇ ತೊರೆದು ಅರಣ್ಯಸೇರಿದರು. ಸಂಸಾರಕ್ಕೆ ಬೆನ್ನುತೋರಿಸಿ ಸನ್ಯಾಸಿಯಾದರು. ಸಂಸಾರಬಿಟ್ಟವರಿಗೆ ಸಂಸಾರಧರ್ಮದ ಸಿದ್ಧಿಯಾಗಬಲ್ಲದೇ ಎಂದು, ಇಂದು ಜಗತ್ತು ಕೇಳುವಂತಾಗಿದೆ. ಈಸ ಬರುವ ವರೆಗೆ, ಮಡುವಿನಲ್ಲಿ ಬೀಳಬೇಡ ಎನ್ನುವ ಹಿತೋಕ್ತಿಯನ್ನು ಅನುಸರಿಸಿದವನು ಎಂದೆಂದಿಗೂ ಈಸಬಲ್ಲವನಾಗಲಾರನು. ಅಂಗಳದಲ್ಲಿಯೋ ಪಡಸಾಲೆಯಲ್ಲಿಯೋ ಈಸ ಕಲಿತವರು ಯಾರಿದ್ದಾರೆ ? ತೇಲಲಿ ಮುಳುಗಲಿ ಮಡುವಿಗೆ ಬಿದ್ದವನೇ ಈಸ ಕಲಿಯಬಲ್ಲನು. ಈಸಬಲ್ಲವನೇ ಜೈಸಬಲ್ಲನೂ ಆಗಬಲ್ಲನು. ಆ ಕೆಲಸವನ್ನು ಗಂಡಸರಿಗಿಂತ ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿ ಮಾಡಿದ್ದು ಕಂಡು ಬರುತ್ತದೆ.

ಸಂಸಾರದೊಡನೆ ಅಸಹಕಾರ ಮಾಡಿದವರಲ್ಲಿ ಗಂಡಸರೇ ಹೆಚ್ಚು ಸಂಸಾರದ ಕಾರ್ಯ ಭಂಗಮಾಡಿದವರ ಸಂಖ್ಯೆಯೂ ಗಂಡಸರದೇ ಹೆಚ್ಚು ಹೆಂಗಸರು ಬಹುತರವಾಗಿ ಆ ಅಡ್ಡದಾರಿ ತುಳಿದದ್ದು ಕಡಿಮೆ. ಸಂಸಾರವನ್ನು ಉದಾತ್ತಗೊಳಿಸುವ ಪತ್ತ್ಯಾಗಡೆ ನಡೆಯಿಸಿ ಸಾವಿಲ್ಲದ ಕೇಡಿಲ್ಲದ ಪತಿಯನ್ನು ಪಡೆದು, ದಿವ್ಯಸಂಸಾರವನ್ನು ಸಂಗಳಿಸಿದ ಅಕ್ಕಮಹಾದೇವಿಯಂಥವರು ಅಲ್ಲೊಬ್ಬರು ಇಲ್ಲೊಬ್ಬರು ಇರಬಹುದು. ಹಗಡಯಾಟವನ್ನೇ ಬಿಟ್ಟು ಕೊಟ್ಟು, ಅದರ ಘರ್ಷಣೆ ತಪ್ಪಿಸಿಕೊಳ್ಳುವುದಕ್ಕಿಂತ ಹಗಡೆಯನ್ನು ಕ್ರೀಡಾ ಮನೋಭಾವದಿಂದ ಆಡಿ ಜಂಜಾಟಕ್ಕೆ ಆಸ್ಪದವೇ ಇಲ್ಲದಂತೆ ಮಾಡಿಕೊಳ್ಳುದರಲ್ಲಿ ಹಿರಿಮೆಯಿದೆ, ಜಾಣ್ಮೆಯಿದೆ.

ಹೆಂಗಸು ಅಕ್ಷರಗಳಲ್ಲಿ ಸ್ವರವಿದ್ದ ಹಾಗೆ, ಗಂಡಸು ವ್ಯಂಜನ. ಮಗುಗಳು ಸ್ವರದಲ್ಲಿಯೂ ಸೇರದ, ವ್ಯಂಜನದಲ್ಲಿಯೂ ಸೇರದ ಆಯೋಗವಾಹ. ಅಂದರೆ ಅಂ ಅಃ. ಸ್ವರಗಳಿಗೆ ಸ್ವತಂತ್ರೋಚ್ಚಾರವಿದೆ, ವ್ಯಂಜನಗಳಿಗೆ ಹಾಗಿಲ್ಲ, ಸ್ವರ ಸೇರಿಸಿದಾಗಲೇ ಅವುಗಳಿಗೆ ಅಸ್ತಿತ್ವ. ಬಾಳಿನಲ್ಲಿ ಹೆಂಗಸೇ ನಿಜವಾದ ಸೂತ್ರಧಾರಿಯಾಗಿದ್ದರೂ, ನಟಿಯೆನಿಸಿಕೊಳ್ಳುವದರಲ್ಲಿ ಆಕೆಗೆ ಪರಮ ಸಂತೋಷ, ಪೂರ್ಣ ಸಂತೃಪ್ತಿ. ಸೃಷ್ಟಿಕರ್ತನಾದ ದೇವನು ಆದಿಯಲ್ಲಿ, ತಾಯಿ ತಂದೆಗಳಿಲ್ಲದ ಕಂದ–ಸ್ವಯಂಭೂ ಆಗಿದ್ದರೂ ಸಾಂಬ(ಸ+ಅಂಬ) ನೆನಿಸುತ್ತಾನೆ. ಲೀಲೆ ತಪ್ಪಿದಲ್ಲಿ ಸ್ವಯಂಭೂವೆನಿಸಿದವನೆ, ಲೀಲೆಯಾದರೆ ಉಮಾಪತಿಯೆನಿಸುವನಲ್ಲವೇ ? ಉಮೆಯಿಲ್ಲದೆ ಪತಿಗೆ ಅಸ್ತಿತ್ವವೆಲ್ಲಿ? ಉಮೆಯನ್ನು ಮುಂದುಮಾಡಿಕೊಂಡು ಹೊರಟವನೇ ಉಮಾಪತಿ. ಶಿವನ ಶಕ್ತಿಯೇ ಆಗಿದ್ದರೂ ಆಕೆಯದು ಶಿವಶಕ್ತಿಯೆನಿಸಿದೆ.

ಹೆಣ್ಣು ಮಾಯೆಯೂ ಅಲ್ಲ ಮಾರಿಯೂ ಅಲ್ಲ. ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ಶರಣರು ಕಂಡು ಓಡಿದರು, ಮನಗಂಡರು. ೧೨ನೇ ಶತಮಾನದಲ್ಲಿ. ಅಂದಿನಿಂದಲೇ ಕಾಮಿನೀ–ಕಾಂಚನಗಳ ಬಗ್ಗೆ ಇದ್ದ ತಿರಸ್ಕಾರವು ಅರ್ಥ ಮೆತ್ತಗಾಯಿತು, ಸಪ್ಪಗೂ ಆಯಿತು. ಇಪ್ಪತ್ತನೇ ಶತಮಾನದಲ್ಲಂತೂ ಹೆಂಡತಿಯನ್ನು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನನೆಂದು ಬಗೆದು, ಭಾವಿಸಿ, ಬಾಳಿದವರು ಅನೇಕರಿದ್ದಾರೆ. ಶ್ರೀ ರಾಮಕೃಷ್ಣ

ಪರಮಹಂಸರು ಕೈಹಿಡಿದ ಸತಿಯನ್ನು ಜಗಜ್ಜನನಿಯ ಪ್ರತಿನಿಧಿಯೆಂದು ಮನ್ನಿಸಿದರು. ಪೂಜಿಸಿದರು. ಮ.ಗಾಂಧಿ ಅವರಿಗೆ ಪಡುವಣದ ಅತಿಥಿಯೊಬ್ಬರು, ಕಸ್ತೂರಿಬಾ ಅವರನ್ನು ತೋರಿಸಿ ಕೇಳಿದರಂತೆ- "ಇವರು ನಿಮ್ಮ ತಾಯಿಯೇ" ಎಂದು. ಅದಕ್ಕೆ ಗಾಂಧಿಯವರು ನಕ್ಕು- "ಅಹುದು, ನನ್ನನ್ನು ಕಸ್ತೂರಬಾ ಚಿಕ್ಕಂದಿನಿಂದಲೂ ತಾಯಿಯಾಗಿ ಹೊಟ್ಟೆ ಬೆನ್ನು ನೋಡುತ್ತಾ ಬಂದಿದ್ದಾರೆ" ಎಂದು ನುಡಿದರಂತೆ. ಶ್ರೀ ಅರವಿಂದರಾದರೋ ಪತಿಯ ಸಂಕಲ್ಪವು ಸತಿಯಲ್ಲಿ ಮಾರ್ದನಿಗೊಡಬೇಕೆಂದು ಅಪೇಕ್ಷಿಸಿ ಆ ಎತ್ತುಗಡ ನಡೆಸಿದರು.

ಧರ್ಮವೆನ್ನುವದು ಒಂದು ದರ್ಶನವೆಂದು ಭಾವಿಸಿಲ್ಲ ಹೆಣ್ಣು. ಆಕೆ ಧರ್ಮ ಮೂಲವಾದ ದಯೆಯನ್ನೇ ಪರಾಂಬರಿಸಿದವಳು.ಅರ್ಥ-ಕಾಮಗಳನ್ನು ಆಧರ್ಮಕ್ಕೆ ಆಧೀನಗೊಳಿಸಿದವಳು,ಮೋಕ್ಷವನ್ನು ಲೆಕ್ಕಕ್ಕೆ ತಂದವಳೇ ಅಲ್ಲ. ಹುಟ್ಟು ಬಂಧ ಮುಕ್ತಳೆಂದು ಬಗೆದವಳು. ಬಂಧಿತರೆಂದು ಬಗೆದವರಿಗೇ ಬಿಡುಗಡೆಯ ಅಥವಾ ಮೋಕ್ಷದ ಚಿಂತೆ.ಅರ್ಥ-ಕಾಮಗಳನ್ನು ಧರ್ಮಕ್ಕೆ ಅಳವಡಿಸಿಕೊಳ್ಳುವುದು ಬಂಧ ಮುಕ್ತರಿಗೆ ಮಾತ್ರ ಸಾಧ್ಯ. ಅವರು ಸಾಧಿಸಬೇಕಾದದ್ದು ಧರ್ಮವನ್ನು ದಯೆಯೇ ಆ ಧರ್ಮಕ್ಕೆ ಮೂಲ ಎನ್ನುವದು ಅವರಿಗೆ ಗೊತ್ತಿದೆ. ಹೆಣ್ಣು ತನ್ನ ಸಂತಾನಕ್ಕೆ ಬಾಳಿನಲ್ಲಿ ಧರ್ಮಶಿಕ್ಷಣ ನೀಡುವುದಕ್ಕೆ ಬಾಳಧರ್ಮದ ಸಿದ್ಧಿಯನ್ನು ಮಾತ್ರ ಪಡೆದರೆ ಸಾಕಾಗದು. ದೈವಿಕೃಪೆಯನ್ನೂ ಪಡೆದವಳಾಗಬೇಕು. ಮೇಲಿನ ಭಾಗವತ ಶಕ್ತಿ ತಾಯಿಹಕ್ಕಿಯಂತೆ ಕೆಳಗಿಳಿದು ಬರುವಂತೆ, ಅಂತರಂಗದ ಕೂಸು ಮರಿಯಾಗಿ, ಮಗುವಾಗಿ ಕೂಗಬೇಕು.ಮಗುವಿನಂತಲ್ಲ, "ಕೂಗು ಕೂಗು ಮನವೇ, ಮಾತೆಯ ಕೂಗುವ ರೀತಿಯಲಿ" ಎಂದು ರಾಮಕೃಷ್ಣ ಪರಮಹಂಸರು ತಾವು ಹೇಳುವಬೋಧನೆಯನ್ನು ಅವರು ಬಹುಶಃ ಹೆಣ್ಣು ಮಕ್ಕಳಿಂದಲೇ ಕಲಿತುಕೊಂಡಿರಬೇಕು, ಮಾಸ್ತಿ ಶ್ರೀನಿವಾಸರು "ನಿನ್ನ ಮಕ್ಕಳು ನಿನ್ನ ಕರೆವ ದನಿ ಯಾವದೋ ಅದನ್ನು ನನಗೆ ನೀಡು ಕೃಷ್ಣಕೇಶವಾ" ಎಂದು ಪ್ರಾರ್ಥಿಸಿಕೊಂಡಿದ್ದಾರೆ, ಆ ಭಾವವು ಅವರಿಗೆ ತಾಯಿ ಮೊಲೆ ಹಾಲಿನೊಂದಿಗೆ ಮೈಗೂಡಿರಬೇಕಲ್ಲವೇ?

ನಾವೆಲ್ಲರೂ ಪೃಥ್ವಿಯ ಮಕ್ಕಳು, ಪೃಥ್ವಿಯು ಒಂದು ನೆಲವನ್ನೂ ಮೂರು ಜಲವನ್ನು ಧರಿಸಿದೆ. ಗಂಡು ನೆಲಕ್ಕೆ ಪ್ರತೀಕವಾದಂತೆ, ಹೆಣ್ಣು-ಜಲವನ್ನು ಪ್ರತಿನಿಧಿಸುತ್ತದೆ. ಭೂಮಾತೆಯೆನಿಸಿದ ಪೃಥ್ವಿಯೇ ಒಂದು-ಮಹಾತಾಯಿ, ನಿಜವಾಗಿ ನೋಡಿದರೆ ನಾವೆಲ್ಲರೂ ಹೆಣ್ಣಿನ ಮಕ್ಕಳು. ತಪ್ಪಿ ಗಂಡುಸಾಗಿದ್ದೇವೆ, ಕವಿ, ಮುನಿ, ತಪಸ್ವಿ, ವೀರ, ವಿಜ್ಞಾನಿ, ಇವರೆಲ್ಲರೂ ಹೆಣ್ಣಿನ ತಳಿಯೇ, ಪೃಥ್ವಿಯು ಎರಡು ಕ್ರಿಯೆಗಳನ್ನು ನಿರ್ವಹಿಸುತ್ತದೆ. ತನ್ನ ಮೈ ಸುತ್ತ ತಿರುಗುವುದು ಒಂದು ಕ್ರಿಯೆಯಾದರೆ, ಸೂರ್ಯನ ಸುತ್ತು ತಿರುಗುವುದು ಇನ್ನೊಂದು ಕ್ರಿಯೆ. ಪೃಥ್ವಿಯ ಮಕ್ಕಳಾದ ನಮಗೂ ಆ ಎರಡು ಕ್ರಿಯೆಗಳು ಅನಿವಾರ್ಯವಾಗಿವೆ. ಮೈ ಸುತ್ತು ತಿರುಗಿ ಹಗಲು ರಾತ್ರಿಗಳನ್ನು ಬರಮಾಡಿಕೊಳ್ಳುವಂತೆ ಪೃಥ್ವಿಯು ಸೂರ್ಯನ ಸುತ್ತು ತಿರುಗಿ ಋತುಮಾನಗಳನ್ನು ಒದಗಿಸಿಕೊಳ್ಳುತ್ತದೆ. ಹಗಲು-ರಾತ್ರಿಗಳು ಎಚ್ಚರು ನಿದ್ರೆಗಳಿಂದ ನವಜನ್ಮ-ನಿತ್ಯಮರಣಗಳನ್ನು ಎರೆಯುತ್ತವೆ. ಋತುಮಾನಗಳು ಚಳಿ-ಮಳೆ-ಬಿಸಿಲುಗಳಿಂದ ನವಜೀವನವನ್ನು ಪವಣಿಸುತ್ತವೆ. ಒಂದು ವೈಯಕ್ತಿಕವಾಗಿದ್ದರೆ ಇನ್ನೊಂದು ಸಾಮುಸ್ತಿಕವಾಗಿದೆ. ಅವೆರಡನ್ನೂ ಹೊಂದುಗೂಡಿಸಿ ಒಂದುಗೊಳಿಸುವುದೇ ಬಾಳಧರ್ಮ.

ತನ್ನನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುತ್ತದೆಂದು ಹೇಳಲಾಗುತ್ತದೆ, ಹೊಂದಿ ಒಂದಾಗುವದೇ ಧರ್ಮ. ಹೊರೆಯೊಳಗಿನ ಕಟ್ಟಿಗೆಗಳು ಒಂದು ಕಟ್ಟಿನಲ್ಲಿದ್ದರೂ ಆ ಹೊಂದು ಗೂಡಿಕೆ ನಿರ್ಜೀವವಾಗಿದೆ. ಹಿಂಡಿನೊ-ಳಗಿನ ಕುರಿಗಳು ಒಂದು ಗುಂಪಿನಲ್ಲಿದ್ದರೂ ಆ ಹೊಂದಾಣಿಕೆಗೆ ತಿಳುವಳಿಕೆಯಿಲ್ಲ. ಹೊಂದಾಣಿಕೆಗೆ ತಿಳುವಳಿಕೆ ಹಾಗೂ ಸಜೀವತೆ ಎರಡು ಬೇಕು. ಅರಿತು ಜೀವತುಂಬಿ ಒಂದಾಗುವದೇ ಧರ್ಮ. ಅಂಥ ಧರ್ಮ ಸಾಧನೆಗಾಗಿಯೇ ನಮ್ಮ ಗರತಿ ಮೈದಾಳಿ ಬಂದಿದ್ದಾಳೆಂದು ತೋರುತ್ತದೆ.

ಗಂಡಾ ಗುಂಡಿನ ಗಂಡಿಗೆ ಆತನ ವ್ಯಂಜನ ಸ್ವಭಾವಕ್ಕೆ ಹೆಣ್ಣು-ಗಂಡು ಗಾಡಿಯು ಸ್ವರವನ್ನು ಸಂಯೋಜಿಸಿ. ಜಗತ್ತನ್ನು ಸಮತೋಲದಲ್ಲಿ ಇರಿಸಲು ಯತ್ನಿಸುತ್ತ ಬಂದಿದೆ. ಹುಟ್ಟಿ ಬರುವ ಒಂದು ಕೂಸಿಗಾಗಿ ಎರಡು ಸ್ತನಗಳಲ್ಲಿ ಹಾಲು ತುಂಬಿರಿಸಿ ಪಾಲಿಸುವ ಹಾಗೂ ಮುದ್ದಿಟ್ಟು ಲಾಲಿಸುವ

ಕ್ರಮವನ್ನು ಮುಂದುವರಿಸಿಕೊಂಡು ಬಂದಿದೆ. ಹೊಸ ಮೈ ಹೊತ್ತು ಅದಕ್ಕೆ ರಕ್ತದಾನ ಮಾಡಿ, ಮುಗುಳುದುಟಿಗೆ ಮಾತಿನ ಮುದ್ರೆ ಹಾಕಿ, ಮನುಷ್ಯನನ್ನು ಮಾನವಮರಿಯನ್ನಾಗಿ ಮಾಡುವ ಅಖಂಡ ಕ್ರಮವನ್ನು ಬೇಸರಿಯದೆ, ಆಸಡ್ಡೆ ಮಾಡದೆ ಸಾಗಿಸಿಕೊಂಡು ಬಂದ ಶಿವಶಕ್ತಿ ಗರತಿಯಲ್ಲಿ ಅವಿತಿದೆ. ಮನ್ವಂತರದ ಮರಿಯನ್ನು ಕಂಡು ಹಾಡಿ ಹಿಗ್ಗುವುದೂ, ಹಿಗ್ಗಿಗಾಗಿ ಹಾಡುವುದೂ ಅನಿವಾರ್ಯವಾದಂತೆ ವಾಸ್ತವಿಕವೂ ಆಗಿದೆ. ಮಾಟವನ್ನು ಆಟವಾಗಿಸಿ, ಆಕಾಶದೆತ್ತರದಲ್ಲಿ ಹಾರುತ್ತಿರುವ ಗಾಳಿಪಟವನ್ನು ಕೈಮೀರದಂತೆ ಕೈಜಾರದಂತೆ ಹಿಡಿದು ನಿಲ್ಲಿಸಲು ನೂಲೆಳೆ ಮಾತ್ರ ಸಾಕಾಗದೆ, ಅದನ್ನು ಹಿಡಿದುಕೊಂಡು ನಿಂತವನೊಬ್ಬನು ಇರಲೇಬೇಕೆಂಬುದನ್ನು ಗರತಿ ಮರೆತಿಲ್ಲ. ಇದೇ ಆಕೆಯ ವೈಶಿಷ್ಟ್ಯ.

## ೨–ಚತುರವತಾರ

“ಸತಿ ಪತಿಯರು ಕೂಡಿ, ರತಿಕ್ರೀಡೆಗಳನಾಡಿ ಪತನವಾದಿಂದ್ರಿಯ ಪ್ರತಿಮೆಯ ದೇಹ” ವಾದರೂ ಅದನ್ನು ತೊಟ್ಟು-ಬಂದ ಹೆಂಗೂಸು ಹುಟ್ಟಿದ ಮನೆಗೆ ಮಗಳಾಗಿ, ಕೊಟ್ಟ ಮನೆಗೆ ಸೊಸೆಯಾಗಿ, ಕೊಟ್ಟವನಿಗೆ ಸತಿಯಾಗಿ; ಹುಟ್ಟಿದ ಮಗುವಿಗೆ ತಾಯಾಗಿ ಒಂದೇ ಜನ್ಮದಲ್ಲಿ ನಾಲ್ಕು ಅವತಾರಗಳನ್ನು ತಳೆಯುತ್ತದೆ. ಇವೆಲ್ಲ ಜೀವಿತ ಮರಣಗಳೇ ಸೈ. ಹುಟ್ಟಿದ ಮನೆ, ಹಡೆದ ತಾಯಿತಂದೆ, ಬಂಧು ಬಳಗ, ನೆರೆಹೊರೆ ಮೊದಲಾದ ಸಂಬಂಧಗಳನ್ನು ಬಿಟ್ಟುಕೊಡುವುದಾಗಲಿ ಅವುಗಳನ್ನು ಅಗಲುವುದಾಗಲಿ ಮರಣಕ್ಕಿಂತ ಕಠಿಣ. ಸಾಯುವುದೇ ಸುಲಭ. ಸಾವನ್ನಪ್ಪಿದಾಗ ಉಳಿದ ಸಂಬಂಧಗಳೆಲ್ಲ ತಾವಾಗಿ ಕಳಚಿ ಬೀಳುವವು. ಆದರೆ ಜೀವ ಉಳಿಸಿಕೊಂಡು ಸಂಬಂಧಗಳನ್ನು ತೊರೆಯುವದೆಂದರೆ ದುರ್ಮರಣವನ್ನು ಅಪ್ಪಿದಂತೆ. ಮದುವಣಗಿತ್ತಿ ಮೊದಲುಗಿತ್ತಿಯಾಗಿ ಅತ್ತೆಯ ಮನೆಯನ್ನು ಪ್ರವೇಶಿಸಿ. ಸೊಸೆಯಾಗಿ ಹೊಸ್ತಿಲಿಗೆ ಶುಭವನ್ನು ಬರೆಯುವಳು. ಕೈ ಹಿಡಿದ ನಲ್ಲನಿಗೆ ಅರ್ಧಾಂಗಿಯಾಗಿ, ಜೀವನದ ಜೊತೆಗಾತಿಯಾಗಿ; ಮಾರ್ಪಡುವದೆಂದರೆ ಅದ್ಭುತ ರಸಾಯನದ ಪರಿಪಾಕವೇ ಸರಿ, ಮುಂದೆ ಮಗುವಿನ ತಾಯಿಯಾಗುವ ರೀತಿಯು ಕೊಡದಲ್ಲಿ ಕುಂಬಳ ಬೀಜವೂರಿ ಬಳ್ಳಿಯೆಬ್ಬಿಸಿ ಕುಂಬಳ ಕಾಯಿ

ಪಡೆಯುವಂಥ ದುಸ್ಸಾಧ್ಯ ಕಮ್ಮಟವೇ ಆದಾಗಿದೆ. ಅದು ದುರ್ಮರಣ-ಆತ್ಮಹತ್ಯೆಗಳಿಗಿಂತ ಕ್ರೂರ-ಕಠೋರವೆಂದು ತೋರಿದರೂ ಶಿವಶಕ್ತಿಯ ಕೈಚಳಕದಿಂದ ಅದೊಂದು ಆಟ ಊಟವಾಗಿಯೇ ತೋರ್ಪಡುವದು. ಈ ಎಲ್ಲ ಕ್ರಿಯೆಗಳನ್ನು ಬಗೆದೇ ಗರತಿ ಹಾಡಿದ್ದಾಳೆ-

**ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದೆ**
**ನಾ ಹುಟ್ಟಿ ಮನೆಗೆ ಎರವಾದೆ । ಹಡೆವವ್ವ ।**
**ನೀ ಕೊಟ್ಟ ಮನೆಗೆ ಹೆಸರಾದೆ ॥**

ತವರು ಮನೆಯೆ ತಾವರೆಯ ಕೊಳ, ಗಂಡನ ಮನೆ ದೇವಾಲಯ. ಅತ್ತೆ-ಮಾವ, ಗಂಡ-ಮೈದುನ ಮೊದಲಾದವರೆಲ್ಲ ಅದರೊಳಗಿನ ದೇವತೆಗಳು. ದೇವತೆಗಳಿಗೆ ನೆರಳು ನೀಡಿದ ತಾವರೆ ಮರಳಿ ತಾವರೆ ಕೊಳ್ಳಕ್ಕೆ ಹೋಗಬೇಕಿಲ್ಲ. ಆದರೆ ಕುಂಜರವು ವನವ ನೆನೆವಂತೆ, ಹೆಣ್ಣು ಹರೆಯಳಿದ ಹಣ್ಣು-ಮುದಿಕೆಯಾದರೂ ತವರನ್ನು ಮರೆಯುವಂತಿಲ್ಲ, ಸಂಬಂಧ ತಪ್ಪಿಸುವಂತಿಲ್ಲ. ನೆನೆಯುತ್ತಲೆ ಇರುತ್ತಾಳೆ. ತಾವರೆ ಹುಟ್ಟಿದ ಕೊಳ್ಳಕ್ಕೆ ಅದೊಂದು ಪರಮ ಶ್ರೇಯಸ್ಕರವಾದ ಸಂಗತಿಯೇ ಆಗಿದೆ. ಅದು ಅತ್ತೆಮನೆಯ ದೇವತೆಗಳಿಗೆ ನೀಡಿದ ನೆರಳು; ರಮಣೀಯವಾದದ್ದು. ಆ ತಾವರೆಯ ಹಿರಿಮೆ, ಮೇಲ್ಮೆ-ಸಹಜ ಕ್ರಮದಲ್ಲಿ ಅರಳಿದ್ದು. ಹೂ ಅಂದರೆ ಭಕ್ತಿಯ ಸ್ಥೂಲ ರೂಪವಂತೆ. ಅದು ದೇವ ಪೂಜೆಗೆ ಅರ್ಪಿತವಾದರ ಕಟ್ಟೆಯ ಕಲ್ಲು ಕಟ್ಟೆಗೆ ಕುಳಿತಂತೆ; ಕೆರೆಯ ನೀರು ಕೆರೆಗೆ ಕೂಡಿದಂತೆ. ತಾವರೆ ಮರಳಿ ಕೊಳದ್ದಾಗಲಾರದೆಂದರೂ ಅದು ಕೊಳ್ಳವನ್ನು ಹೃನ್ಮಂದಿರದಲ್ಲಿ ಕಳಕಳಿಸುತ್ತಲೇ ಇರುತ್ತದೆ. ಆರು ಜನ ಸೊಸೆಯಂದಿರನ್ನು ನಡೆಯಿಸಿಕೊಳ್ಳುವ ಅತ್ತೆಯಾದರೂ ಆಕೆಯಲ್ಲಿ ತವರಿನ ಹಂಬಲ ಗರಿಗೆದರಿಯೇ ನಿಂತಿರುತ್ತದೆ; ಹಸುರಾಗಿಯೇ ಉಳಿದಿರುತ್ತದೆ. ತವರು ಮನೆಯ ಹಂಗ ನೂಲು ಆಕೆಯ ಕೊರಳಿಗೆ ಕೊಂಡಿಯಾಗಿ ಚಿರಕಾಲ ಸಂಗಡಿಸುವದು.

**ಕಣ್ಣಂಜಲ ಕಾಡಿಗೆ ಬಾಯೆಂಜಲವೀಳ್ಯವ**
**ಯಾರೆಂಜಲುಂಡಿ ಹನಮುನಸೇ। ಹಡೆದವ್ವ**
**ಬಾಯೆಂಜಲುಂಡು ಬೆಳೆದೇನ ॥**

ಎನ್ನುವ ನೆನಹು ಹೆಣ್ಣಿನೆದೆಯಲ್ಲಿ ಕೊರೆದು ಬರೆದಂತಾಗಿರುತ್ತದೆ. ಅಂತೆಯೇ ಆಕೆ ತಂದೀಯು ನೆನೆದರೆ ತಂಗೂಳ ಬಿಸಿಯಾಗುವ ದೆಂದೂ, ಗಂಗಾದೇವಿ ನನ್ನ ಹಡೆದವ್ವನ ನೆನೆದರೆ ಮಾಸಿದ ತಲೆ ಮಡಿಯಾ-ಗುವದೆಂದೂ ಬಗೆದುಂಬಿದ್ದಾಳೆ. ಲೆಕ್ಕವಿಲ್ಲದ ಬಳಗವೆಲ್ಲ ಒಲೆಯೊಳಗಿನ ಸಾವಿರಕೊಳ್ಳಿಗಳೆಂದೂ, ತಾಯಿ ಮಾತ್ರ ಜ್ಯೋತಿಯೆಂದೂ ಆಕೆ ಭಾವಿಸಿ-ದ್ದಾಳೆ. ರಾಗಿಯ ಒಣ ರೊಟ್ಟಿ, ರಾಜಗೋಳಿಯಪಲ್ಲೆ ತಿನ್ನುವ ಬಡತನದ-ನೆಲೆಯಾದರೂ, ತವರಿಗೆ ಹೋಗಿ ನಾಲ್ಕುದಿನ ಇದ್ದು ಬರಬೇಕೆನ್ನುವ ಬಯಕೆ ಯಾವಾಗಲೂ ಹಸಿರಾಗಿರುತ್ತದೆ, ಆಕೆಯಲ್ಲಿ. " ತಾಯಿಯು ಮನೆಗ್ಹೋಗಿ-ಬಾಯಿಬೇಡಿದ್ದುಂಡೆ " ನೆಂದೇ ಹೇಳುವದರಲ್ಲಿ ಅತಿಶಯೋಕ್ತಿಯಿರಬಹುದು. ಆದರೆ ಅದು ಸುಳ್ಳುಸಂಗತಿಯೇನಲ್ಲ. ಶಾವಿಗಿ-ಸ್ಯೆದಾನ ಉಣ್ಣುವಾಗ-ಹಡೆದವ್ವನ ಮುಖ ಕಂಡರೆ ಮೊಲೆಹಾಲು ಉಂಡಂತಾಗುವದೆಂಬ ಅನುಭ-ವವು, ಬರಿ ಅನುಭವ ಮಾತ್ರ ಆಗಿರದೆ, ಉದಾತ್ತ ಅನುಭಾವವೂ ಆಗಿದೆಯೆಂದು ಎದೆತಟ್ಟಿ ಹೇಳಬಹುದಾಗಿದೆ. ಏನಾದರೂ ಅದು ಹಾಲುಂಡ ತವರಲ್ಲವೇ ?

ತಾಯಿ ಕಟ್ಟಿದ ಬುತ್ತಿಯೆಂದರೆ ತರತರದ ಯಾಲಕ್ಕಿಯದು. ಅದನ್ನು ಬಿಚ್ಚಿ ಉಣ್ಣುವುದಕ್ಕೆ ಭೀಮರತಿಯ ತೀರವೇ ತಕ್ಕತಾಣ. ತವರು ಮನೆಯ ದೀಪವನ್ನು ತವರೇರಿ ನೋಡಿ ಹತ್ತುಬೆರಳು ಹಣೆಗೆ ಹಚ್ಚಿ ಶರ-ಣೆನ್ನದೆ ಹೆಣ್ಣು ಇರಬಹುದೇ ? ಗಂಜೀಯು ಕುಡಿದರೂ ಗಂಡನ ಮನೆಲೇಸು-ಎನ್ನುವಳು, ತವರುಮನೆಯನ್ನು ಹರಸದೆ ಇರಲಾರಳು,

ತವರು ಮನೆಯನ್ನು ಮರೆತು, ಅತ್ತೆ ಮನೆ ಅಳವಡುವ ವರೆಗಿನ ನಡುಗಾಲವೆಂದರೆ ಸಂಧಿಕಾಲವೇ ಸರಿ. ಅದು ಮೂರು ಸಂಜೆ ಆಗಿರಬಹುದು ಇಲ್ಲವೇ, ಮುಸುಕಿನ ಮುಂಜಾವು ಆಗಿರಬಹುದು. ಆದರೆ ಅದು ಹಗಲೂ ಅಲ್ಲ, ರಾತ್ರಿಯೂ ಅಲ್ಲ. ಒಮ್ಮೆ ಹಗಲಿನ ಆವೇಶ ಕಾಣಿಸಿದರೆ, ಇನ್ನೊಮ್ಮೆ ರಾತ್ರಿಯ ಆಭಾಸ ಗೋಚರಿಸುವದು. " ಎಂಥಾ ಮಗಳಿಗೆ ಎಂಥಾ ಮನೆ ಸಿಕ್ಕಿತು. " ಎಂದು ಕನವರಿಸುವ ಪ್ರಸಂಗದಂತೆ, "ಇಂಥ ಮಗಳಿಗೆ ಅಂಥದು ಸಿಗದೆ ಇನ್ನೆಂಥದು ಸಿಕ್ಕೀತು." ಎಂದು ಹರ್ಷಿಸುವ ಸಂದರ್ಭವೂ ತಾಯಿ ಯಾದವಳಿಗೆಬಾರದೆ ಹೋಗಲಾರದು.

ಅತ್ತಿಗೆ ಹಡೆಯಲಿ ಹೆತ್ತಮ್ಮ ಕರೆಯಲಿ
ಹೊತ್ತಲಬಾಳಿ ಚಿಗಿಯಲಿ। ಅತ್ತೆಂದು।
ಅತ್ತಿಗೆಯು ಮಗಳು ಕರೆಯಲಿ॥

"ಒಲ್ಲದ ಒಗೆತನ ಎಲ್ಲಿತ್ತೋ ಮಗಳೀಗಿ
ಬೆಲ್ಲಕ ಬೇವು ಕಲತಂಗ। ಅಡವ್ಯಾನ।
ಕಲ್ಲೀಗಿ ಧಾರಿ ಎರೆಧಂಗ॥

ಮಲ್ಲೀಗಿಯಂಥಾ ಮಗಳೀಗಿ ಎಲ್ಲಿತ್ತೊ ಒಗೆತನ
ಹುಲ್ಯಾಗ ಬೆಂಕಿ ಒಗೆಧಂಗ। ಗುಡ್ಡದ
ಕಲ್ಲೀಗಿ ಧಾರಿ ಎರೆಧಂಗ॥
ಅತ್ತಿಮನಿಯು ಊಟ, ಮಟ ಮಟ ಮಧ್ಯಾಣ"

ಇಂಥ ಪರಿಸ್ಥಿತಿಯು ಸುಳುಹುಕಾಣುವ ಮಗಳು, ಅತ್ತೆಯು ಮನೆಗೆ ಹೋಗುವ ಪ್ರಸಂಗದಲ್ಲಿ, "ಹೋಗಂದ್ರ ಹೋಗ್ಗಳು, ಹೊಸ್ತಿಲ್ಲ ದಾಟಳು. ಮಾರಿ ನೋಡಿ ನೋಡಿ ಅಳತಾಳ। ಹ್ಯಾಂಗತ್ತಿ ಮನ್ಯಾಗೆ ಕಳುಹಾಲೀ?" ಎಂದು ಕವಳಿಸುವ ಅನುಭವ ಪಡೆದವರೆಷ್ಟಿಲ್ಲ? ತಾಯಿ ಹೇಳುತ್ತಾಳೆ–

"ಸೋದರ ಮಾವನ ಸೊಸೆಯಾಗು ನನ ಮಗಳ। ಬಿಸಿಲಾಗ ನೀರ ತರಗೊಡನ" ಅದು ಸಾಧಿಸಿದಂತೆ, ಅಣ್ಣನ ಮನೆಯು ಇದಿರುಗುಂಬಸ ಸಾಧಿಸಿದರೆ ತಾಯಿಯು ಹೊತ್ತಲ್ಲದ ಹೊತ್ತಿನಲ್ಲಿ ಬೀಸಲು ಕುಳಿತು, "ಕಣ್ಣ ಮೂಗಿಲೆ ನನ್ನ ಹೆಣ್ಣು ಮಗಳು ಚೆಲುವಿ। ಬಣ್ಣಕ ನನ್ನ ಸೊಸಿ ಚೆಲುವಿ" ಎಂದು ಹಾಡಿಯೇ ಹಾಡುವಳು. ಆದರೆ ಬೆಳಗಾಗಿ ಬಿಸಿಲು ಬಿದ್ದರೂ ಮುಸುಕುಹಾಕಿ ಮಲಗಿಕೊಂಡಿರುವ ಮಗಳನ್ನು ಎಬ್ಬಿಸುವ ರೀತಿಯೇ ಬೇರೆ, ತಾಯಿಯೆಂದು–

ವಾರೀಗಿ ಪುರುಷರ ತೋಳಮ್ಯಾಲಿನ ನಿದ್ದಿ
ಏಳ ನನಮಗಳ ಬೆಳಗಾಗಿ। ದೊಡ್ಯಾನ।
ಕೀಲ ಕರುಗೋಳು ಮೊಲೆಯುಂಡು॥

ಅದರಂತ ಸೊಸೆಯಾಗಿ ಬಂದ ಅಣ್ಣನ ಮಗಳಿಗೆ ಹೇಳಿಕೊಡುವ ನಯ–ನೀತಿಯ ರೀತಿ ಎಂಥದೆಂದರೆ—

ನನ್ನ ಅಣ್ಣನ ಮಗಳ, ನನ್ನ ಹೋಲಲಿಬ್ಯಾಡ
ನನ್ನಲ್ಲಿ ಭಾರಿಗುಣವಿಲ್ಲ। ಹೇಮರಡ್ಡಿ।
ಮಲ್ಲಮ್ಮಗ್ಹೋಲ ನನಸೊಸಿಯೇ॥

ಇನ್ನೊಬ್ಬ ತಾಯಿಯ ಕಳವಳವೇ ಬೇರೊಂದು ಬಗೆಯದು.

ಸೊಸಿಯು ಬರತಾಳಂತ ಖುಷಿಭಾಳಮನದಾಗ
ಸೊಸಿಬಂದು ಮಗನ ಕಸುಗೊಂಡು । ಬಾಳ್ವಾಗ
ಮುಗಿಲೀಗಿ ಬಾಯಿ ತಗದಾಳ ॥

ಮಲ್ಲಾಡಕ್ಕೆ ಹೆಣ್ಣು ಕೊಡಬಾರದಂತೆ. ಯಾಕೆಂದರೆ ಅಲ್ಲಿ ನೀರು ಹೊತ್ತು ಹೊತ್ತು ತಲೆ ದಡ್ಡವಾಗುವದು; ಭತ್ತ ಕುಟ್ಟಿ-ಕುಟ್ಟಿ ಕೈ ದಡ್ಡವಾಗುವದು.

" ಮಗನನ್ನು ಕಸುಗೊಳ್ಳುವಳೇನೋ ಸೊಸಿ " ಎಂದು ತಾಯಿಯ ಎದೆ ಧಡ-ಧಡಿಸುತ್ತಿರುವಾಗ, ಮೊದಲಗಿತ್ತಿಯು ರಾಯರ ಹಚ್ಚಡ ಪದರೊಳಗಿನ ಅಚ್ಚಮಲ್ಲಿಗೆ ಹೂವಿನ ಸಂಪರ್ಕ ಸುಖದಲ್ಲಿ ತವರುಮನೆಯನ್ನು ಮರೆಯತೊಡಗುವಳು. " ರಾಯರನ ಬಿಟ್ಟು ಹ್ಯಾಂಗ ಬರಲೇ ಹಡೆದವ್ವ " ಎಂದು ಕೇಳುವಳು. ಸತಿಪತಿಗಳೊಂದಾಗುವ ರಸಾಯನವೇ ಒಂದು ವ್ಯೈಜ್ಞಾನಿಸುವ ಅದ್ಭುತಕುದಿತವಾಗಿದೆ.

ಮಡದಿ ತವರಿಗೆ ಹೋಗಿಯಾಳೆಂದರೆ— " ಅಡಗೀಯ ಮನಿಯಾಗ ಮಡದೀಯ ಸುಳುವಿಲ್ಲ। ಅಡಗಿ ಬಾಯೀಗಿ ರುಚಿಯಿಲ್ಲ " ಎಂದು ಮಗನು ಅವ್ವನಿಗೆ ಬಾಯಿಬಿಚ್ಚಿ ಹೇಳದೆ ಗತ್ಯಂತರವಿಲ್ಲದಾಗುವದು. ಅದರಂತೆ, ಮಡದಿಯನ್ನು ಬಿಟ್ಟು ಪರನಾಡಿಗೆ ಹೊರಟ ಗಂಡನಲ್ಲಿ ಹುಟ್ಟಿಕೊಂಡ ಹಗರಣ ಹೇಳುವಂತಿದೆ.— " ಊರೀಗೆ ಹೋಗುವರ ಮಾರ್ಯಾಕ ಬಾಡ್ಯಾವ। ಗೀರಗಂಧ್ಯಾಕ ಬೆವತಾವ " ಎನ್ನುವ ಮಾತಿನಲ್ಲಿ ಅತಿಶಯೋಕ್ತಿ ಎಷ್ಟು ಇಲ್ಲ. " ಎಂದ ಬರತೀರಿ ನನ್ನ ಗಂಧದ ರತಿಗಾರ " ಎಂದು ಕೇಳಬೇಕೆಂದರೆ ಧೈರ್ಯಸಾಲದು ಹೆಂಡತಿಗೆ. ಆವಾಗ ಬೀಸುವ ಕಲ್ಲಿನ ಮುಂದೆ ಕುಳಿತು, ಬೀಸುವ ನೆವದಲ್ಲಿ ಈ ಹಾಡು ಕರೆಯದೆ ಬರುತ್ತದೆ ಆಕೆಯ ಬಾಯಿಂದ.

ಕಮಳದ ಹೂ ನಿನ್ನ ಕಾಣದೆ ಇರಲಾರೆ
ಮಲ್ಲಿಗೆ ಮಾಯಿ ಬಿಡಲಾರೆ। ಕೇದಿಗೆ
ಗರಿ ನಿನ್ನನಗಲಿ ಇರಲಾರೆ॥

ಆಗಲಿದ ಪತಿ ಸತಿಯು ಪಾಲಿಗೆ ಕಮಳದ ಹೂ! ಮಲ್ಲಿಗೆ!! ಕೆದಿಗೆಯ ಗರಿ!!! ಅದೇ ಆಕರ್ಷಣೆ ಸತಿಪತಿಗಳನ್ನು ಒಂದಾಗಿಸುವ ಕ್ರಿಯೆ ನಡೆಸುತ್ತದೆನ್ನಬೇಕು.

ನಿನ್ನೆಯೇ ಬರಬೇಕಿತ್ತು ಪತಿರಾಯ, ಬರಲಿಲ್ಲ. ಹಲ್ಲಿಗೆ ಜಾಜೇಲಿ ಹಚ್ಚುವ ಮುಂಬೆಳಗಿನಿಂದ ಆರಂಭವಾದ ಆತುರದ ನಿರೀಕ್ಷೆಯು ಆಲಸ್ಯವಾಗಿ ಪರಿಣಮಿಸಿ- "ಇಂದಿನ ರಾತ್ರಿ ಹ್ಯಾಂಗ ಕಳೆಯಲೇ?" ಎನ್ನುವ ದಂದುಗಕ್ಕೆ ಈಡಾಗುತ್ತಾಳೆ. ಓರಗೆಯ ಪುರುಷನೆಂದರೆ, ಹಣಚಿ ಬಟ್ಟಿನ ಮೇಲೆ ಹರಿ_ದಾಡುವ ಕುಂಕುಮವಂತೆ. ಹಣಚಿ ಬಟ್ಟು ಒತ್ತಟ್ಟಿಗೆ, ಕುಂಕುಮ ಒತ್ತಟ್ಟಿಗೆ ಆದರೆ ಗತಿಯೇನು? ತಿಂಗಳಿಗೊಮ್ಮೆ ತಪ್ಪದೆ ಮೂಡಿ ನಿಲ್ಲುವ ಚಂದ್ರಾಮ ತಡೆಯುವ ಕಾರಣವೇನು?

ಸತಿಯು ಪಾಲಿಗೆ ಬಳಗವೆಲ್ಲ ಬಂಗಾರದೊಡವೆಗಳಂತಾಗಿದ್ದರೆ, ಪತಿ-ಮಾತ್ರ ಆದರೊಳಗಿನ ಗುಳದಾಳಿ.

ಅತ್ತೆ ಅತ್ತಿಕಾಯಿ ಮಾವ ಮಲ್ಲಿಗೆ ಹೂ
ಭಂಗಾರಗೋಲ ಹಿರಿಭಾವ! ನನ ಮನಿಯ
ಅರಿಸೀಣ ಕೆನೆಯು ಅರಸರು||

ಹೀಗೆ ಒಂದೊಂದು ಶಬ್ದದಲ್ಲಿ ಬಳಗದ ಒಳಚಿತ್ರವನ್ನು ರೇಖಿಸಿ ಕೊಟ್ಟಿದ್ದಾಳೆ, ಆ ಗರತಿ. ಅರ್ಧಾಂಗಿಯು ತಾಯಾಗಿ ಬಿಟ್ಟರೆ "ನಡೆದಾಡುವ ಭೂಮಿ" ಎನಿಸುತ್ತಾಳೆ.

ಹೆಣ್ಣಿನ ನಾಲ್ಕು ಅವತಾರಗಳನ್ನು ಕುರಿತು ಹೆಚ್ಚು ವಿವರಿಸಲು ಇಲ್ಲಿ ಅವಕಾಶವಿಲ್ಲ. ದಶಾವತಾರಗಳನ್ನು ಕುರಿತು ನಾವೆಲ್ಲರೂ ಕೇಳಿದ್ದೇವೆ. ಅವುಗಳನ್ನು ಬಿಟ್ಟು ಈ ನಾಲ್ಕು ಅವತಾರಗಳು ಎಲ್ಲಿಂದ ಬಂದವು? ಅವು ಬಾಳಕಮ್ಮಟದ ದುರ್ದಶಾವತಾರಗಳೇ?ಅರಹುದು ಧರ್ಮಗ್ಲಾನಿಯಾದಾಗಲೆಲ್ಲ ಧರ್ಮವನ್ನು ಕಾಪಾಡುವುದರ ಸಲುವಾಗಿ ಪರಮಾತ್ಮನು ಅವತಾರ ತೊಟ್ಟು ಬರುವನಂತೆ. ಅದೆಷ್ಟು ಧರ್ಮಗ್ಲಾನಿಯಾದರೂ ಅವತಾರಿಯು ಕಾಪಾಡುವ ಮಟ್ಟಿಗಾದರೂ ಧರ್ಮಾಂಶವು ಉಳಿದಿರಲೇಬೇಕಲ್ಲವೇ? ಅಷ್ಟೂ ಧರ್ಮಾಂಶ ವಿಲ್ಲದಿದ್ದರೆ, ಅವತಾರಿಗೆ "ತ್ರೊಲಗು" ಎಂದು ಕೆಂಪುಬಾವುಟ ತೋರಿಸಬೇಕಾ-ಗುತ್ತದೆ. ಆದರೆ ನಮ್ಮ ಹೆಣ್ಣಿನ ಚತುರವತಾರಗಳು, ಬಾಳಧರ್ಮವನ್ನು

ಬಿತ್ತಿಬೆಳೆದು ತೋರಿಸುವಂಥ ಪ್ರಾತ್ಯಕ್ಷಿಕೆಯೇ ಆಕೆಯ ಅವತಾರೋದ್ದೇಶ ವಾಗಿದೆ. ಆ ಉದ್ದೇಶವನ್ನು ಪುರುಷಾವತಾರಗಳು ಸಾಧಿಸಲಾರವೆಂದು, ಸ್ತ್ರೀ ಅವತಾರಗಳು ಮನೆಮನೆಗೂ ಇಳಿದುಬರಬೇಕಾಗಿದೆ. ಹೆಣ್ಣಾಗಿ ಹುಟ್ಟಿದ್ದಕ್ಕೆ ಇದೇ ಸಾರ್ಥಕತೆ.

ಹತ್ತು ಗಂಡ್ಹಡೆದರು ಮತ್ತೆ ಬಜೆಂಬರು
ದಟ್ಟೀಯ ಉಡುವ ಧರಣೇಯ ।ಹಡೆದರೆ
ಮಕ್ಕಳ ತಾಯೆಂದು ಕರೆದಾರ ॥

ಹೆಣ್ಣು ಹಡೆದವಳೇ ಮಕ್ಕಳ ತಾಯೆನಿಸುವಾಗ ಆಕೆಯ ಹೆಣ್ಣು ಸಂತಾನದ ನಾಲ್ಕು ಸ್ವರೂಪಗಳು ಏಕಾಗಲಾರವು ?.

## ೩– ಕುಟುಂಬ ಸಂಸ್ಥೆ

ಜಗತ್ತಿನ ಸಂಕ್ಷೇಪರೂಪವೆಂದರೆ ಕುಟುಂಬ ಸಂಸ್ಥೆ. ಅದು ಲೋಕವೃಕ್ಷದ ಒಂದು ಬೀಜವೆಂದೂ ಹೇಳಬಹುದು. ಮಾನವೈಕ್ಯದ ತರಬೇತಿ ಕೇಂದ್ರವೇ ಅದಾಗಿದೆ, ಕುಟುಂಬ ಅಂದರೆ ಮನೆತನ. ಅದೊಂದು ಬಂಗಾರದ ಭರಣಿ, ಅದರಲ್ಲಿ ಬೆಟ್ಟದನೆಲ್ಲಿ, ಸಮುದ್ರದ ಉಪ್ಪು ಒಟ್ಟಿಗೆ ಬೆರೆತು ಉಪ್ಪಿನ ಕಾಯಿ ಆಗಬೇಕಾಗಿದೆ, ಉಪ್ಪಿನಕಾಯಿ ಊಟಕ್ಕೆ ಮೊದಲು ಎನಿಸಿದೆ. ಅದೇ ಜಗತ್ತಿನ ಸಾರಸರ್ವಸ್ವದಲ್ಲಿ ಸ್ವಾರಸ್ಯ ಹುಟ್ಟಿಸುವಂಥದು. ಪ್ರೇಮವನ್ನು ವಿಸ್ತರಿಸುವ ಉಪಾಯವೇ ಮದುವೆಯ ಉದ್ದೇಶವೆಂದು ಹೇಳಲಾಗಿದೆ. ಅದು ಸತಿಯಿಂದ ಮಾತ್ರ ಸಾಧ್ಯ. ತನ್ನಂತೆ ಪರರ ಬಗೆಯುವ ರೂಢಿ ಮಾಡಿಸುವುದೇ ಸಂತಾನದಿಂದ ಬಯಸತಕ್ಕ ಪರಿಣಾಮ. ಒಟ್ಟಿನಲ್ಲಿ ಕುಟುಂಬ ಸಂಸ್ಥೆಗೆ ಏಕತೆ ಯ ಪಾಠವನ್ನು ಕಲಿಸಿಕೊಡುವ ಪಾಠಶಾಲೆಯನ್ನಲು ಅಡ್ಡಿಯಿಲ್ಲ. ಕುಟುಂಬ ಎಂಬ ಶಬ್ದಕ್ಕೆ ಎರಡು ಅರ್ಥಗಳಿವೆ.— ಮನೆತನ ಮತ್ತು ಹೆಂಡತಿ ಎಂದು. ಮುಖದಲ್ಲಿ ಬಾಯಿ ಮುಖ್ಯವಾದುದರಿಂದ ಅದಕ್ಕೂ ಮುಖವೆಂದು ಹೇಳು-ತ್ತಾರೆ. ಇಡಿಯ ಶರೀರದಲ್ಲಿ ಹೊಟ್ಟೆಯು ಮುಖ್ಯವಾದುದರಿಂದ ಶರೀರವು ಒಡಲೆನಿಸಿದಂತೆ ಹೊಟ್ಟೆಯೂ ಒಡಲನಿಸಿದೆ. ಅದೇ ವಿಧವಾಗಿ ಕುಟುಂಬದಲ್ಲಿ ಮಹತ್ತ್ವದ ಪಾತ್ರವಾದುವುದರಿಂದ ಸತಿಗೆ ಕುಟುಂಬವೆನ್ನುತ್ತಾರೆಂದು ಹೇಳ ಲಡ್ಡಿಯಿಲ್ಲ. ಪತಿಯು ಕುಟುಂಬದಲ್ಲಿ ಗೃಹಸ್ಥಮಾತ್ರ. ಮನೆತನದವ ಎಂಬರ್ಥ ಅದಕ್ಕೆ.

ಮನೆತನವು ಏಕತೆಯನ್ನು ಸಾಧಿಸುವ ಸಾಧನೆಯ, ಪ್ರಯೋಗಶಾಲೆಯೆಂದೂ ಹೇಳಬಹುದಾಗಿದೆ. ಗಂಡಹೆಂಡಿರನ್ನು ಒಂದುಗೂಡಿಸುವ ಮದುವೆ, ಪ್ರೇಮವಿಸ್ತರಣಕ್ಕೆ ನಾಂದಿಯಾದಂತೆ, ಅಲ್ಲಿ ಹುಟ್ಟಿಬಂದ ಸಂತಾನವು ಆ ಗಂಡ ಹೆಂಡಂದಿರಿಗೆ ಅಂದರೆ ತನ್ನ ತಾಯಿ-ತಂದೆಗಳಿಗೆ ತನ್ನಂತೆ ಪರರ ಬಗೆಯುವ ಬಗೆಯನ್ನು ಆಡಾಡುತ್ತ ಕಲಿಸುತ್ತದೆ. ಇದೆಲ್ಲ ಏಕತೆಯ ರಸಾಯನವೇ ಆಗಿದೆ. ಭರಣಿಯೊಳಗಿನ ಉಪ್ಪಿನಕಾಯಿ ಒಮ್ಮೊಮ್ಮೆ ಇಲ್ಲವೆ ಬಹಳಸಾರೆ ಕೈತಪ್ಪಿನಿಂದಲೋ ಕಣ್ತಪ್ಪಿನಿಂದಲೋ ಕೆಟ್ಟು ಹೋಗುವುದನ್ನು ಕಂಡಿದ್ದೇವೆ. ಹುಳುಗಳು ಹುಟ್ಟಿಕೊಂಡು ಅದರಲ್ಲಿ ಬುಜಗುಡುವುದೂ ಉಂಟು. ಸಾವಿರಗಟ್ಟಲೇ ಹುಳುಗಳು ಹುಟ್ಟಿಕೊಳ್ಳುವುದು ಸಗಣಿಯಲ್ಲಿ ಮಾತ್ರ. ಇಲ್ಲಿ "ಸಗಣಿಯಲ್ಲಿ ಸಾವಿರ ಹುಳುಗಳು ಹುಟ್ಟವೇ ಅಯ್ಯ" ಎನ್ನುವ ಬಸವವಾಣಿಯನ್ನು ಸ್ಮರಿಸಿಕೊಳ್ಳಬಹುದು. ಹೀಗೆ ಉಪ್ಪಿನಕಾಯಿಯ ಭರಣಿ ನರಕದ ಕುಂಡವೇ ಆಗಿಬಿಟ್ಟು ಮೂಲೋದ್ದೇಶವನ್ನೇ ವಿಫಲಗೊಳಿಸುವುದನ್ನು ಬಹಳಕಡೆ ಕಾಣುತ್ತೇವೆ. ಬಹುಮಟ್ಟಿಗೆ ವಿಫಲತೆಯನ್ನೇ ಕಾಣಲಾಗುವದೆಂದು, ಅದರ ಉದ್ದೇಶವೇ ತಪ್ಪೆಂದು ಬಗೆಯಲಾಗದು. ಕುಣಿಯಬಾರದಿದ್ದವನು ಅಂಗಳವೇ ಡೊಂಕು ಎನ್ನುವನು. ತಾನು ಹೊರಬೇಕಾದ ತಪ್ಪನ್ನು ಅಂಗಳ ಮೇಲೆ ಹೇರುವ ವಿಧಾನದಂತೆ, "ಸಂಸಾರೆಂಬುದು ಬಲುಕೆಟ್ಟ, ಇದನಾವ ಸೂಳೆಮಗ ಮಾಡಿಟ್ಟ." ಎಂದು ತಂತಿಬಾರಿಸಿದರೆ, ಕೆಟ್ಟಿದ್ದು ಸರಿಪಡುವದಿಲ್ಲ. ವೇಗ ಪೂರಿತ ಸೈಕಲ್ ಇರಿಸಿಕೊಂಡವನು, ಅದಕ್ಕೆ ಸುಸಮರ್ಥವಾದ ಬ್ರೆಕ್‌ನ್ನು ಸಂಗಳಿಸಲು ಮರೆಯಬಾರದು.

ಕೀರ್ತಿಕಾಯರಾದ ಶ್ರೀ ಬೇಂದ್ರೆಯವರು ಹೇಳುತ್ತಾರೆ-" ಬೀದರ ಹೈದ್ರಾಬಾದಗಳ ಉತ್ತರ ತುದಿಯಿಂದ ನೀಲಗಿರಿ, ಕೊಯಿಮುತ್ತೂರಿನ ದಕ್ಷಿಣ ತುದಿಯ ವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನವು ಗರತಿಯ ಹಾಡುಗಳಲ್ಲಿದೆ" ನಾಡು ಒಂದೆಂಬುವ ನಿದರ್ಶನವು ಗರತಿಯ ಹಾಡುಗಳಲ್ಲಿದ್ದರೆ, ಅವುಗಳ ಉದ್ದೇಶವೂ ಅವು ಇರಿಸಿಕೊಂಡ ಗುರಿಯೂ ಒಂದೇ ಆಗಿದೆಯೆನ್ನಲು ಅಡ್ಡಿಯೇನು? ಆ ಉದ್ದೇಶ ಆ ಗುರಿ ಯಾವುದೆಂದರೆ, ಕುಟುಂಬ ಸಂಸ್ಥೆಯಲ್ಲಿ ಏಕತೆಯನ್ನು ಅಳವಡಿಸುವುದು.

ಪ್ರತಿಯೊಬ್ಬ ಗೃಹಿಣಿಯು ಅಭೀಷ್ಟ ಪಡುವದೇನಂದರೆ-ಮುತ್ತೈಯಿದ್ದ ತನಕೊಡು, ಮಕ್ಕಳಕೊಡು, ಮಾರಾಯರ ಮುಂದೆ ಮರಣಕೊಡು, ಇದೇ ಸುಸಮೃದ್ಧ ಜೀವನದ ಹಾರಯಿಕೆ. ನಿಜವಾದ ಅರ್ಥದಲ್ಲಿ ಅಕ್ಷರಶಃ ಮುತ್ತೈಯಿದ್ದಯಾಗಿ ಗಂಡ ಹಾಗೂ ಮಕ್ಕಳೊಡನೆ ನೂರುವರುಷಬಾಳುವುದು ಅಂಥ ಮನೆತನದಲ್ಲಿ ನೂರು ವರುಷ ಕಾಲವು ಒಡನೂರು ವರ್ಷಗಳೆನಿಸುವುದರಲ್ಲಿ ಸಂಶಯವೇನು? ಒಡನೂರುವರ್ಷಗಳನ್ನು ಹರುಷದಿಂದ ಕಳೆಯಬಲ್ಲ ಮನೆತನವು ಏಕತೆಯನ್ನು ಸಾಧಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದ ನಿಶ್ಚಯವೆಂದೇ ಹೇಳಬೇಕಾಗುತ್ತದೆ.

ಆದಿ ಯಂತ್ರದ ಮೂಲ ಮಂತ್ರದಂತೆ ಕುಟುಂಬಕ್ಕಿರುವ ಮಹತ್ವಾದ ಪ್ರಾರ್ಥನೆಯಾವುದೆಂದರೆ–

ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳಂಗ। ನೋಡಿದರ
ಕಣ್ಣ ಮುಂದಾದ ಕೈಲಾಸ।।

ಗೃಹಿಣಿಯು ಈ ಮಹಾಮಂತ್ರವನ್ನು ಬೆಳಗಿನ ಜಾವದಲ್ಲಿ ಬೀಸುಕಲ್ಲಿನ ಮುಂದೆ ಸ್ವರದೊಡನೆ ಹಾಡಿ ಉದ್ಘೋಷಿಸುತ್ತಾಳೆ. ನಿತ್ಯದ ಮರಣವಾದ ನಿದ್ರೆಯಿಂದ ಎಚ್ಚತ್ತು ಪುನರ್ಜನ್ಮವನ್ನು ಪಡೆದ ಬಳಿಕ ಮೊಟ್ಟಮೊದಲನೇ ಮಾತೆಂದರೆ ಅದೇ ಆ ಮಹಾಮಂತ್ರ. ಶುಭ ಹಾರೆಯಿಕೆಯಿಂದ ಆರಂಭವಾದ ಇಡಿಯ ದಿನವು ಶುಭಪ್ರದವಾಗಿ ಪರಿಣಮಿಸಲಿಕ್ಕೆ ದಾರಿಯಾಗುತ್ತದೆಂದು ಎದೆತಟ್ಟಿ ಹೇಳಬಹುದಾಗಿದೆ.

ಈ ಕೆಳಗಿನ ತ್ರಿಪದಿಗಳು ಕುಟುಂಬದ ಏಕತೆಗೆ ಅದೆಷ್ಟು ಸಹಾಯಕವಾಗಿವೆ ನೋಡಿರಿ.—

**ಅತಿಗೆಯ ಅರಸೇನ ತಾಯಿ ಕುಮಾರೇನ**
**ಮಕ್ಕಳಿಗಿ ಮಾವ ನನಗಣ್ಣ। ಬಂದರ।**
**ನಿತ್ಯದೀವಳಿಗಿ ಮನಿಯಾಗ॥**
**ಮಗಳ ಮಾವಬಂದ ಸೊಸಿಯ ಅಪ್ಪಬಂದ**
**ಯಾರಿಟ್ಟು ಯಾರ ಕಳುಹಲಿ। ನನ್ನಣ್ಣ।**
**ಮಗಳಿಟ್ಟು ಸೊಸಿಯ ಕರೆದೊಯ್ಯೋ॥**

ಅತ್ತಿಗೆಯ ಅರಸು, ತಾಯಿಕುಮಾರ, ಮಕ್ಕಳಿಗೆ ಮಾವ, ಮಗಳ-ಮಾವ, ಸೊಸಿಯ ಅಪ್ಪ ಬೇರೆಬೇರೆ ಅಲ್ಲ, ಒಬ್ಬನೇ. ಬೆರಳುಗಳು ಬೇರೆ-ಬೇರೆ ಆಗಿದ್ದರೂ ಒಂದೇ ಕೈಗಿರುವ ಅನುಪಮ ಪಲ್ಲವಗಳೇ ಆಗಿವೆ. ಮಗಳು ಮತ್ತು ಸೊಸೆ ಇಬ್ಬರೂ ಅದಾವ ಕಾರಣದಿಂದಲೋ ಒತ್ತಟ್ಟಿಗಿರುವಾಗ ಆಕೆಯ ಅಣ್ಣನು ಹಬ್ಬಕ್ಕೆಂದು ಕರೆಯಬರುವನು. ಯಾರನ್ನು? ತನ್ನ ಮಗಳನ್ನೋ? ಅಕ್ಕನಮಗಳನ್ನೋ? ಯಾರಿಟ್ಟು ಯಾರಕಳುಹಲೆಂದು ಅಕ್ಕ ಅನು-ಮಾನಿಸಿದರೂ, ಮಗಳಿಟ್ಟು ಸೊಸಿಯ ಕರೆದೊಯ್ಯಲು ಹೇಳುತ್ತಾಳೆ, ಈ ಮಾತಿನಲ್ಲಿಯೂ ಮೋಡಿಯಿದೆ. ಯಾರ ಮಗಳನ್ನಿಡುವುದು ? ತನ್ನ ಮಗಳನ್ನೋ ಅಣ್ಣನ ಮಗಳನ್ನೋ? ಯಾರ ಸೊಸೆಯನ್ನು ಕರೆದೊಯ್ಯುವುದು? ತನ್ನ ಸೊಸೆಯನ್ನೋ ಅಣ್ಣನ ಸೊಸೆಯನ್ನೋ ? ಯಾರನ್ನು ಕರೆದೊಯ್ದರೂ ಸಂತೋಷವೇ. ಒಂದು ಮನೆಗಲ್ಲ ಎರಡೂ ಮನೆಗೆ ಸಂತೋಷ, ಹಿಗ್ಗು. ಇಂಥ ನಡವಳಿಕೆಯಲ್ಲಿಯೂ ಏಕತೆಯ ಉಸಿರು ಮಿಡಿಯುತ್ತಿಲ್ಲವೇ?

ಕುಟುಂಬದ ನೆಮ್ಮದಿಗೂ ಏಕತೆಗೂ ತ್ಯಾಗವೇ ಮಹತ್ವದ ಉಪಾಯವೆಂದು ಮಹಾನುಭಾವರು ಹೇಳುತ್ತಾರೆ. ಆ ತ್ಯಾಗವು ಅರಣ್ಯವಾಸಿಗಳಾದ ಸನ್ಯಾಸಿಗಳದಲ್ಲ. ಗ್ರಾಮವಾಸಿಯಾದ ಗೃಹಸ್ಥಾಶ್ರಮದವರ ಕಟ್ಟಾಚರಣೆ ಆಗಿದೆ.

**ಹೆಣ್ಣನ ಕಾಯುವ ಮಣ್ಣು ಮಾಡಲಿ ಬೇಕ**
**ಸುಣ್ಣಧರಳಾಗಿ ಸುಡಬೇಕ। ಈ ಜನುಮ।**
**ಮಣ್ಣು ಮಾಡಿ ಮೃತ್ಯು ಗೆದಿಬೇಕ॥**

ಈ ತ್ಯಾಗವು ಮರಣದ ಪಾದರಿಯಲ್ಲ; ಸಾವಿನ ದಾರಿಯೂ ಅಲ್ಲ. ಬದುಕಿ-ಸಾಯುವ ಅಥವಾ ಸತ್ತೂ ಬದುಕುವ ಪರಮೋಪಾಯ, ಅದರಲ್ಲಿ ದುಡಿತ-ವಿದೆ. ಇಡಿಯ ಮನೆತನಕ್ಕೆ ಸುಖವಾಗಲೆನ್ನುವ ತುಡಿತವಿದೆ, ಏಕತೆಯ ಮಿಡಿತವಿದೆ, ಹಿಡಿತವೂ ಇದೆ. ಗೃಹಿಣಿ ಮನಸ್ಸು ಮಾಡಿ, ಮಹಾಸತಿಯಾಗುವುದಕ್ಕೆ ಸನ್ನದ್ಧಳಾದರೆ, ಏಕತೆಯು ಮನೆತನವನ್ನು ಅರಸುತ್ತ ಬರುವದು. ಅಷ್ಟೇ ಸಾಧಿಸಿದರೂ ಅದು ನಾಡಿನೊಂದಿಗೆ ಮಾನವ ಕುಲವನ್ನೂ ಕೆಲವಂಶದಲ್ಲಿ ಮೇಲಕ್ಕೆತ್ತಿದಂತೆಯೇ. ಇದೇ ಸಹಜವಾದ ಸಾರ್ಥಕಜೀವನ. ಎಡಹುವಅಂಜಿಕೆ ನಡೆವವನಿಗಿರುವುದಲ್ಲದೆ, ಕುಳಿತವನಿಗಲ್ಲ. ಕುಳಿತು ಕೆಡುವುದಕ್ಕಿಂತ ಮಾಡಿ

ಕೆಡುವದೇ ಒಳ್ಳೆಯದು, ಸಾಹಸದ ಕಾಲು ದಾರಿಯಲ್ಲಿ ಇದೇ ಊರು-ಗೋಲಾಗಬಲ್ಲದು. ಮುಕ್ಕಾಲಿನಲ್ಲಿ ನಡೆಯುವ ರೀತಿಯಿದು, ಮೂರು ಪಾದಗಳಿಂದ ಮೂಲೋಕವನ್ನೇ ಆಳೆಯುಲಿಲ್ಲವೇ ವಾಮನ ಮೂರ್ತಿ. ಅದೊಂದು ಅವತಾರ ಕಾರ್ಯ, ಅವತಾರಿಯ ಯುಕ್ತಿ,

## ೪ ದುಡಿತ ಮಿಡಿತ

ದುಡಿತವು ದುಡ್ಡಿನತಾಯಿ; ಅಷ್ಟೇ ಅಲ್ಲ, ಅದು ಅರ್ಥ ಪುರುಷಾರ್ಥದ ಸ್ಪಷ್ಟಸಾಧನೆಯೂ ಆಗಿದೆ. ದುಡಿತದಲ್ಲಿ ಅರ್ಥವಿದೆ; ಸಾರ್ಥಕ್ಯವಿದೆ. ಸಂತೋಷವಿದೆ, ಸಮಾಧಾನವೂ ಇದೆ. ಅಂತೆಯೇ ಗೃಹಿಣಿ ದುಡಿಯುವಾಗ-ಆಕೆಯ ಬಾಯಿಂದ ಹಾಡು ಹೊಮ್ಮುತ್ತದೆ. ಹಾಡು ಹಿಗ್ಗಿನ ಲಕ್ಷಣ. ಕಾವ್ಯ-ಮಾನಂದಾಯ ಎಂದು ಶಿಷ್ಟರು ಹೇಳಿದರೆ, ಹಾಡು ಹಿಗ್ಗಿಗಾಗಿ ಎನ್ನುತ್ತಾಳೆ ಗರತಿ. ಹಾಡಿ ಹಿಗ್ಗಬೇಕು, ಹಿಗ್ಗಿಗಾಗಿ ಹಾಡಬೇಕು, ದುಡಿಮೆಯ ಶ್ರಮದಿಂದ ಹುಟ್ಟಿಕೊಳ್ಳುವ ಕಾವನ್ನು ಹಾಡು ತಣಿಸುತ್ತದೆ. ಹಾಡಿಲ್ಲದ ದುಡಿಮೆ ಕತ್ತೆಯ ಧಾವತಿ.

ಸುಮ್ಮನೆ ಬೀಸಿದರೆ ಬೀಳದು ಈಕಲ್ಲು
ನಾಗಸೊರದಂತೆ ದನಿಯೆತ್ತಿ । ಹಾಡಿದರ
ಗಮ್ಮನೆ ಬೀಳುವದು ಈ ಕಲ್ಲು॥

ಪದ ಬರುವುದಿಲ್ಲವೆಂದರೆ ಶರಣಾಗು ಎನ್ನುತ್ತಾಳೆ ಗರತಿ. "ನನ್ನ-ದೆಯಲ್ಲಿ ಪದವುಂಟು" ಎಂದು ಆಕೆಗೆ ವಿಶ್ವಾಸವಿದೆ. ಎದೆಎದೆಯಲ್ಲಿ ಪದ ಮೂಡಿಸಿದವಳು, ಕೃಷ್ಣನ ತಂಗಿ ಸುಭದ್ರೆಯೆಂದು ಆಕೆ ನಂಬಿದ್ದಾಳೆ. ಯುದ್ಧರಂಗದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಉಪ-ದೇಶಿಸಿದಂತೆ, ಶ್ರೀಕೃಷ್ಣನ ತಂಗಿ ಸುಭದ್ರೆಯು ಗರತಿಗಾಗಿ ಕುಟುಂಬರಂಗದಲ್ಲಿ ಸಂಸಾರ ಗೀತೆಯನ್ನು ತ್ರಿಪದಿಗಳ ರೂಪದಲ್ಲಿ ಒದಗಿಸಿದಳೆಂದು

ತೋರುತ್ತದೆ, ಅದನ್ನು ಅನುಸರಿಸಿ ಗರತಿಯು ಬೀಸುಕಲ್ಲಿಗೆ ಪ್ರಾರ್ಥಿಸು-ವುದೇನಂದರೆ-

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲನೆ ಉದರವ್ವ । ನಾನಿನಗೆ
ಬೆಲ್ಲದಾರತಿಯ ಬೆಳಗೇನು ॥

ರಾಗೀಕಲ್ಲೇ, ನಾನು ನಿನ್ನನ್ನು ದಣಿಸಿದೆ; ನಿನ್ನ ನಿದ್ರೆ ಕೆಡಿಸಿದೆ; ಬಲದೋಳನ್ನು ತೂಗಿ ನಾನು ನಿನ್ನನ್ನು ಬಿಡುತ್ತೇನೆ. ಕುಕ್ಕಿಯಲ್ಲಿ ರಾಗಿಯನ್ನು ತೆಗೆದುಕೊಂಡು ಮತ್ತೆ ರಾತ್ರಿಗೆ ಬರುತ್ತೇನೆ.— ಎಂದು ಬೋಳಯಿಸಿ ಭರವಸೆ ಕೊಡುತ್ತಾಳೆ.

" ಕಲ್ಲುದೈವ, ಒರಳುದೈವ, ಮೊರದೈವ, ಒನಕೆದೈವ " ಎಂದು ಪೂಜಿಸುವವರನ್ನು ಕುರಿತು, ಶರಣರು ತಮ್ಮ ವಚನಗಳಲ್ಲಿ ಹೀಗಳಿದದ್ದು, ತೆಗಳಿದ್ದು ಕಂಡುಬರುತ್ತದೆ. ಆದರೆ ತಮ್ಮ ಉಪಕರಣವನ್ನು ಪ್ರೀತಿಸುವುದೂ, ಅವುಗಳೊಡನೆ ಆತ್ಮೀಯತೆಯಿಂದ ನಡಕೊಳ್ಳುವುದೂ ಒಳ್ಳೆಯ ಸಂಪ್ರ—ದಾಯ. ಆದರಿಂದ ತಮ್ಮ ಕೆಲಸ ಸುಗಮಗೊಳ್ಳುವುದೆಂದು ಗರತಿ ಭಾವಿಸಿ-ದ್ದಾಳೆ. ಈ ಭಾವನೆಯನ್ನು " ಕ್ರಿಸ್ತಾನುಕರಣ "ವು ಒಳಿತಾಗಿ ಎತ್ತಿಹಿಡಿದಿದೆ.

ದೇವನೊಬ್ಬ ನಾಮ ಹಲವು, ನಂಬಿದ ಸತಿಗೆ ಗಂಡನೊಬ್ಬನೇ ಕಾಣಿರೋ- ಎನ್ನುವ ಮಾತು ಗರತಿಯಲ್ಲಿ ಮೈಯುಂಡು ಹೋಗಿದೆ; ರಕ್ತ-ಗತವೂ ಆಗಿದೆ. ಗಂಡನೊಬ್ಬನನ್ನು ಅವನ ಅಂತಸ್ಥಕ್ಕೆ ತಕ್ಕರೀತಿಯಲ್ಲಿ ಪ್ರೀತಿಸಿದರೆ ಆಯಿತೇ? ಭಾವ-ಮೈದುನ, ಅತ್ತಿಗೆ-ನಿಗೆಣ್ಣಿಯರನ್ನು, ಅತ್ತೆಮಾವಂದಿರನ್ನು ಅವರವರ ಮಟ್ಟಕ್ಕೆ ಅನುಸಾರವಾಗಿ ಪ್ರೀತಿಸುವುದು ತಪ್ಪೇ? ಅಲ್ಲ. ಅದು ವಾಸ್ತವಿಕವೇ ಆಗಿದೆ; ಸಹಜಕ್ರಿಯೆಯೂ ಆಗಿದೆ; ಸೂಕ್ತಕ್ರಮವೂ ಆಗಿದೆ. ಅಲ್ಲವೇ?

ಮನೆತನದ ಹಿರಿಯನನ್ನು ಅಪ್ಪ, ಅಜ್ಜ, ಕಕ್ಕ, ಮಾವ, ಯಜಮಾನ, ಧನಿಯ ಎಂದು ಬೇರೆ ಬೇರೆ ಆಪ್ತರು ಕೂಗುವಂತೆ, ಮಹಾಮನೆಯ ಒಡೆಯನನ್ನು ತಮಗೊಪ್ಪುವ ರೀತಿಯಲ್ಲಿ ಕೂಗುವುದು ಭೂಷಣವೇ ಆಗಿದೆ; ಸಮ್ಮತವೂ ಆಗಿದೆ. ಕೃಷ್ಣ, ನಾರಾಯಣ, ಶಿವ, ಹರಿ, ಮಲ್ಲಯ್ಯ, ಬಲಭೀಮ,

ಬಸವಣ್ಣ, ಎಲ್ಲಮ್ಮ, ಜಕ್ಕವ್ವ ಎಂಬ ಹೆಸರುಗಳೆಲ್ಲ ಒಬ್ಬನೇ ದೈವತದ ವಿವಿಧ ಶಕ್ತಿಗಳಿಗೆ ಅರ್ಥಪೂರ್ಣವಾಗಿ ಬಳಸುವ ಶಬ್ದಗಳೇ ಆಗಿವೆ. ಇಲ್ಲಿಯೇ ಇದೆ-ಸರ್ವಧರ್ಮ ಸಮನ್ವಯದ ಕೀಲಿ. ಅನೇಕದಲ್ಲಿ ಏಕತೆ ಇಲ್ಲಿಯೇ ಕಂಗೊಳಿಸು-ತ್ತದೆ. ಗರತಿಯು ಮನಕೊಪ್ಪುವ ದೈವಶಕ್ತಿಯನ್ನು ಅಕ್ಕರೆಯ ಹೆಸರಿನಲ್ಲಿ ಹಾಡಿ, ಕೊಂಡಾಡಿ ಹತ್ತಗಡೆಯನ್ನು ತೋರ್ಪಡಿಸುವುದು ಸಹಜಕ್ರಮವೇ ಆಗಿದೆ.

ಭಂತ್ಯಾಳ ಶರಣಯ್ಯ ನಾ ನಿನ್ನ ಮಗಳಯ್ಯ
ಲೇಸಗಿತ್ತಿಯ್ಯ ಬಡವೆಯ್ಯ।ನನವ್ಯಾಲ
ಸಾಸೀವಿ ಕಾಳಷ್ಟು ದಯವಿರಲಿ॥

" ತಂದೇ, ನಾನು ನಿನ್ನ ಮಗಳು. ಸಕಲ ಜೀವರಿಗೆ ಲೇಸನೆಬಯು-ಸುವ ಲೇಸಗಿತ್ತಿ, ಆದರೆ ಬಡವಿ. ಬಡವಿಗೆ ತಕ್ಕಂತೆ ದಯೆನೀಡು; ಅದು ಸಾಸಿವೆ ಕಾಳಿನಷ್ಟಿದ್ದರೂ ಸಾಕು," ಎಂಬ ಅಭೀಪ್ಸೆ, ಹೃದಯದ ಹಾರಯಿಕೆ. ಆಕೆ-ಬೇಡುವುದು ಧರ್ಮದ ಮೂಲವಾದ ದಯ ಮಾತ್ರ ಆಗಿರದೆ,ಒಲಿದು ಎತ್ತಿ-ಕೊಳ್ಳುವ ಕೃಪೆಯೂ ಆಗಿದೆ. ದಯೆ ಧರ್ಮದ ದಾರಿಯಾಗಿದ್ದರೆ, ಕೃಪೆ-ಮಾತ್ರ ದೈವದೊಲುಮೆ ಆಗಿದೆ. ಸಾಸಿವೆ ಕಾಳಿನಷ್ಟುಆದು ಬೆಂಬಲಕ್ಕೆ-ನಿಂತರೂ ಪ್ರಪಂಚದೊಳಗಿನ ಸರ್ವ ಪ್ರಕಾರದ ಭಯ. ಸಂಕಟ, ತೊಂದರೆ-ಗಳಿಂದ ಕಾಪಾಡುತ್ತದೆಂದು ಶ್ರೀ ಅರವಿಂದರು ಹೇಳುತ್ತಾರೆ. ಹೆಣ್ಣಿನ ಜನ್ಮ-ವನ್ನು ಮಣ್ಣುಮಾಡಬೇಕೆಂದೂ, ಅದನ್ನು ಸುಣ್ಣದ ಹರಳುಮಾಡಿ ಸುಡ-ಬೇಕೆಂದೂ ಹೂಣಿಕೆ ತೊಟ್ಟ ಗರತಿ ದುಃಡಿತದಲ್ಲಿರುವ ಮಿಡಿತ ಎಂಥದೆಂಬು ದನ್ನು ಸ್ಪಷ್ಟಗೊಳಿಸುತ್ತಾಳೆ.

ಗರತಿ ದುರ್ದೈವದಿಂದ ವೈಧವ್ಯವನ್ನು ಎದುರಿಸುತ್ತಾಳೆ. ಬಡತ-ನವನ್ನು ಸಹಿಸುತ್ತಾಳೆ, ಬಹು ಮಕ್ಕಳ ಜಂಜಾಟವನ್ನು ನಿರ್ವಹಿಸುತ್ತಾಳೆ. ಏತರಬಲದಿಂದ? ಪಡೆದುಕೊಂಡ ದೈವೀ ಕೃಪೆಯಿಂದ. ಇಂದಿನ ಯುಗವು ಗರತಿಯ ಇಂಥ ನಿಲುಮೆಯನ್ನು ಸಮ್ಮತಿಸಲಿಕ್ಕಿಲ್ಲ. ಒಲುಮೆಯನ್ನು ಒಪ್ಪಿ-ಕೊಳ್ಳಲಿಕ್ಕಿಲ್ಲ. ಆದರೆ ಗರತಿ ಮಾತ್ರ ತನ್ನ ಶ್ರದ್ಧೆಯನ್ನು ಅಚಲವಾಗಿರಿಸಿ-ಕೊಂಡು ಸಂಸಾರವನ್ನು ಗೆಲ್ಲುತ್ತಾಳೆ. ಕೊಲುವನೆಂಬ ಭಾಷೆ ದೇವನದು.-

ಗೆಲುವೆನೆಂಬ ಭಾಷೆ ಭಕ್ತನದು" ಎಂಬ ಅಮರ ನುಡಿಯನ್ನು ಸಾರ್ಥಕಗೊಳಿಸುವ ಎತ್ತುಗಡೆ ನಡೆಸಿಯೇ ತೀರುತ್ತಾಳೆ.

"ಮಂದಿ ಮಕ್ಕಳೊಳಗ ಛಂದಾಗಿ ಹೊಂದಿರಬೇಕ, ಮಂದೀಬಾಯಾಗ ಇರಬೇಕ" ಎಂಬ ಮಹದುದ್ದೇಶವನ್ನು ಇರಿಸಿಕೊಂಡಿದ್ದರಿಂದ ಆಕೆ ಸಂಸಾರಕ್ಕೆ ಬೇದೋರಿ ಓಡಿ ಹೋಗುವವರನ್ನು ತಡೆದು ನಿಲ್ಲಿಸಿ, ಈ ಮಾತು ಹೇಳುವುದಕ್ಕೆ ಸಮರ್ಥಳಾಗಿದ್ದಾಳೆ-

**ಅಡವಿ ಸೇರಲು ಬೇಡ, ಜಡೆಯ ಬೆಳೆಸಲು ಬೇಡ**
**ಮಡದೀಯ ನೀನು ಬಿಡಬೇಡ। ದೃಢದಿಂದ।**
**ನಡೆ ನುಡಿಯಲ್ಲಿ ಕೆಡಬೇಡ॥**

ಗರತಿ ದುಡಿಮೆಯಲ್ಲಿ ಗಟ್ಟಿಗಳಾಗುವುದಕ್ಕೆ ಹಾಡಿನಮಿಡಿತವೆಂಬ ಪೌಷ್ಟಿಕವನ್ನು ಮೆಲ್ಲುತ್ತಾಳೆ. ಅದರಿಂದ ಆಕೆಯ ಪುಕ್ಕತನ ಕಾಲ್ದೆಗೆಯುತ್ತದೆ ನೆರೆಹೊರೆಯುವರ ಅಂಜಿಕೆಗಾಗಲಿ, ಹುಲಿಕರಡಿಗಳ ಹೆದರಿಕೆಗಾಗಲಿ ಆಕೆ ಸೊಪ್ಪು ಹಾಕುವವಳಲ್ಲ. ತವರುಮನೆಯ ರಕ್ತಗುಣದ ಬೆಂಬಲದೊಂದಿಗೆ, ಅತ್ತೆಯ ಮನೆಯ ಶಕ್ತಗುಣದ ಹಿಂಬಲವೂ ಆಕೆಗೆ ಭೀಮರಕ್ಷೆಯನ್ನು ಒದಗಿಸುತ್ತದೆ. ಆಕೆಯೇ ಹೇಳುತ್ತಾಳೆ.

**ಅಂಜೀಕಿ ತೋರಿದರ ಅಂಜುವರಮಗಳಲ್ಲ**
**ಮಂಜಾನದಾನ ಹುಲಿಕರಡಿ। ತೋರಿದರ**
**ಅಂಜಿತಿರುಗುವರ ಸೊಸಿಯಲ್ಲ॥**

ಆಕೆಯ ಹೃದಯದಂತೆ ಮನಸ್ಸೂ ಕನ್ನಡಿಯಾಗಿದೆ. ಅಷ್ಟೇ ಅಲ್ಲ, ಆಕೆಯೊಂದು ಇಡಿಗನ್ನಡಿಯೇ ಆಗಿರುವುದರಿಂದ, ಅದರ ಮುಂದೆ ನಿಂತವರ ರೂಪವೇ ಅದರಲ್ಲಿ ಪಡಿ ಮೂಡುತ್ತದೆ. ನಗೆಮುಖದಂತೆ ಗಂಟುಮೋರೆಯು ಆ ಕನ್ನಡಿಯಲ್ಲಿ ಯಥಾವತ್ತಾಗಿ ಪ್ರತಿ ರೂಪಿಸುತ್ತದೆ.

**ಹಚ್ಚಿಕೊಂಡವ್ವಗ ಚೊಚ್ಚಿಲ ಮಗಳಾದೆ**
**ಬಿಟ್ಟಾಡಿಕೊಳ್ಳುವ್ವೈರೀಯ। ಮನಿಮುಂದ।**
**ಬಿಚ್ಚುಗತ್ತ್ಯಾಗಿ ಹೊಳೆದೇನ॥**

ಇದಕ್ಕೆಲ್ಲ, ಬಲಭೀಮನ ಭೀಮರಕ್ಷೆಯೇ ಕಾರಣವೆನ್ನಬೇಕು. ಯಾಕೆಂದರೆ, ಕೊಡಹೊತ್ತು ನೀರುತರುವ ದುಡಿಮೆಯನ್ನು ನಿಸ್ತರಿಸುವಾಗ ಆಕೆಯ ಮಿಡಿತ ಎಂಥದೆಂದರೆ-

ಹೋಗಾಗ ಎಡಕಾದ ಬರುವಾಗ ಬಲಕಾದ
ಈಗ ನನ್ನ ಕೊಡಕ ಇದಿರಾದ| ಬಲಭೀಮ|
ಕೊಡ ಹೊತ್ತು ಕೈಯ ಮುಗಿದೇನ||

ದುಡಿಮೆಯೇ ದೇವ ಪೂಜೆಯೆಂದು ಭಾವಿಸಿದಂತಿದ್ದ ಗರತಿಯು ಕಸವ ಹೊಡೆದ ಕೈಗೆ ಕಸ್ತೂರಿಯ ಸುವಾಸನೆ, ಸೆಗಣಿ ಬಳಿದ ಕೈ ಎಸಳ ಯಾಲಕ್ಕಿಯ ಕಂಪು ಸಂಗಳಿಸುತ್ತದೆಂದು ಹಿಂಜರಿಯದೆ ಹೇಳುತ್ತಾಳೆ.

## ೫ ಬಾಳ ಜಂಜಾಟ

ಪಾಂಡಿಚೇರಿಯ ಶ್ರೀ ಅರವಿಂದ ಆಶ್ರಮದ ಅಧಿಷ್ಠಾತ್ರಿ ದೇವತೆಯೆನಿಸಿದ ಶ್ರೀಮಾತೆಯವರಿಗೆ ಒಬ್ಬ ಶಿಷ್ಯರು ಕೇಳಿದರಂತೆ-"ಸಂಕಟಗಳು ಏತಕ್ಕಾಗಿ ಬರುತ್ತವೆ ತಾಯೀ?" ಆ ಪ್ರಶ್ನೆಗೆ- "ವೆಂಕಟರಮಣ ಅನಿಸುವ ಸಲುವಾಗಿ" ಎಂಬ ಉತ್ತರ ಬಂದಿತಂತೆ. ಸಂಕಟ ಬಂದ ಮೇಲೆ ವೆಂಕಟರಮಣ ಅನ್ನುವದಕ್ಕಿಂತ ಆ ಮುಂಚೆಯೇ ವೆಂಕಟರಮಣ ಅನ್ನುತ್ತಿದ್ದರೆ ಸಂಕಟವೇ ಬರಲಿಕ್ಕಿಲ್ಲ. ಬಂದರೂ ಅದು ಬಾಧಿಸಲಿಕ್ಕಿಲ್ಲ, ಲೀಲಾಜಾಲವಾಗಿ ಬಂದು ಹೋಗಬಹುದು. ಶಿವಶಿವ ಎಂದರೆ ಸಿಡಿಲೆಲ್ಲ ಬಯಲಾಗುವದೆನ್ನುವುದು ನಮ್ಮವರಿಗೆ ಅದರಲ್ಲಿ ಗರತಿಗೆ ನಿಚ್ಚಳವಾಗಿ ತಿಳಿದಿದೆ. ಕಲ್ಲು ಬಂದು ಎರಗಿ-ದರೂ ಕಡೆಗಾಗುವುದರಿಂದ ಶಿವನೆಂಬ ಶಬ್ದ ಬಿಡಬೇಡ- ಎಂದು ಆಕೆ ತನ್ನ-ಮನಸ್ಸಿಗೆ ಗಟ್ಟಿಸಿ ಹೇಳುತ್ತಾಳೆ.

"ಆಸರಕಿ ಅಳದಿಟ್ಟೆ ಬ್ಯಾಸರಕಿ ಬಳದಿಟ್ಟೆ
ಚಿಂತಿಕಾಲಾಗ ತುಳದಿಟ್ಟೆ."

ಎನ್ನುವ ಧೀರನುಡಿ ಯಾರದು? ನಮ್ಮ ತಾಯಿ-ಅಕ್ಕಂದಿರದೇ ಅಲ್ಲವೇ?, ನಳ, ಹರಿಶ್ಚಂದ್ರ, ಪಾಂಡವರು ಪಟ್ಟಪಾಡು ಅಂಥ ಇಂಥದಲ್ಲ; ಮನುಷ್ಯನನ್ನು ಮಣ್ಣುಮಾಡಿ ಚೆಲ್ಲುವಂಥದು;ಸುಣ್ಣದ ಹರಳುಮಾಡಿ ಸುಡು ವಂಥದು. ನಿಜವಾಗಿಯೂ ಸುಖಿಗಳೆನಿಸುವ ಅವರೇ ಅಷ್ಟೊಂದು ಕಷ್ಟಪಟ್ಟಿ-ರುವಾಗ ನಮ್ಮನಿಮ್ಮಂಥವರು ಯಾವ ಗಿಡದತೊಪ್ಪಲು?

ಸೀತೆ–ದ್ರೌಪದಿಯರ ದುಃಖದುಮ್ಮಾನಗಳಕಥೆ ಕೇಳಿದಗರತಿ ಹೇಳುತ್ತಾಳೆ.- "ಸೀತಾದೇವಿಯಷ್ಟು ಸಿರಿಯು ಕಂಡವರಿಲ್ಲ. ದ್ರೌಪದಿಯಷ್ಟು ಹರಲಿಹೊತ್ತವರಿಲ್ಲ, ಈ ಲೋಕದಲ್ಲಿ," ಜನಕರಾಯನಂಥ ರಾಜತಪಸ್ವಿಯ ಮಗಳೆನಿಸಿ, ಶ್ರೀರಾಮನಂಥ ಅವತಾರಿಯ ಸತಿಯೆನಿಸಿ ಸೀತಾದೇವಿ ಕಾಡಿನಲ್ಲಿ ಬನಕೆ ತೊಟ್ಟಿಲುಕಟ್ಟಿ ಲವಕುಶರನ್ನು ತೂಗಿದಳು. ಹೆಣ್ಣು ಮೂಕವಾಗಿ, ತೊಟ್ಟಿಲು ತೂಗುವುದು ಸಾಧ್ಯವೇ ಇಲ್ಲ. ಜೋಗುಳ ಹಾಡದೆ ಇರುವುದುಂಟೇ? ಹಾಡು ಹಿಗ್ಗಿನಕುರುಹು ಎಂದಾಗ "ಸೀತಾದೇವಿ ನಗುತ ವನವಾಸ ಕಳೆದಾಳೋ" ಎನ್ನುವ ಮಾತಿನಲ್ಲಿ ಅತಿಶಯೋಕ್ತಿಯೇನಿರಲಾರದು.

ವಾಲ್ಮೀಕಿಋಷಿ ರಾಮಾಯಣಕಂಡಂತೆ ಸೀತಾಯಣಕಂಡಂತಿಲ್ಲ. ಆದರೆ ನಮ್ಮ ಗರತಿಯು ರಾಮಾಯಣಕ್ಕಿಂತ ಸೀತಾಯಣವನ್ನೇ ಹೆಚ್ಚಾಗಿ ಕಂಡಂತೆ ತೋರಿಸುತ್ತದೆ. ಆ ಮಾತು ಕೆಳಗೆ ಕಾಣಿಸಿದ ಪದ್ಯದಿಂದ ಸ್ಪಷ್ಟ ಆಗಿರುತ್ತದೆ.

**ಅಡವಿ ಅರ್ಣ್ಯಾಣದಾಗ ಹಡೆದಾಳ ಸೀತವ್ವ**
**ತೊಡಿಯ ತೊಳಿಯಾಕ ನೀರಿಲ್ಲ । ಹನುಮಂತ ।**
**ಸೇತುಗಟ್ಯಾನ ಸಮುದರಕ ॥**

ಅತಿರಥನೆನಸಿದ ದಶರಥರಾಯನ ಸೊಸಿ, ರಾಮನ ನಿಕಟ ನೆರಳಾದ ಲಕ್ಷ್ಮಣನ ಅತ್ತಿಗ್ಯೆ, ವಿಷ್ಣುವಿನ ಆರನೇ ಅವತಾರವೆನಿಸಿದ ಶ್ರೀ ರಾಮನ ಅರ್ಧಾಂಗಿಯಾದ ಸೀತಾದೇವಿಯ ಹೆರಿಗೆ ರಾಜಭವನದಲ್ಲಾಗದೆ, ಅರಣ್ಯದಲ್ಲಿ ಆದದ್ದೇ ಮೊದಲು ನೀಲಿಕೆಟ್ಟ ಮಾತು. ಹೆರಿಗೆಯಾದ ಬಳಿಕ ಆಕೆಯತೊಡೆ ತೊಳೆಯಲಿಕ್ಕೆ ನೀರಿಲ್ಲವೆಂದರೆ? ಪೃಥ್ವಿಯ ಮುಕ್ಕಾಲು ಭಾಗವನ್ನು ಆವರಿಸಿರುವ ಸಮುದ್ರಕ್ಕೆ ಸೇತುಕಟ್ಟಿದ ಹನುಮಂತನಂಥ ದೈತ್ಯ ಪರಾಕ್ರಮಿಯನೆರವುಳ್ಳ ಸೀತಾಮಾತೆಗೂ ಆ ದುರ್ದಶೆಯೇ? ಜಗತ್ತಿನ ದುಃಖ ದುಮ್ಮಾನಗಳನ್ನು ಇಷ್ಟೊಂದು ಸೂಕ್ಷ್ಮವಾಗಿ ನಿರೀಕ್ಷಿಸಿದ ಗರತಿ ದು:ಖ-ಸಂಕಟ, ಭಯ ಗಂಡಾಂತರಗಳನ್ನು ಅದೆಂತು ಲೆಕ್ಕಿಸಿಯಾಳು?

**ಹಾವು ಅಂದರ ಜೀವ ಹರಣವ ಹಾರ್‍ಯಾವ**
**ಹಾವಲ್ಲ ಹಂಪಿ ವಿರುಪಾಕ್ಷಿ। ನಿನ ಮುಂದ।**
**ಹಾವಾಗಿ ಗಂಗಿ ಹರಿದಾಳ॥**

---

**ಗರತಿಯ ಬಾಳಸಂಹಿತೆ. ೨೦**

ಹಾವೆಂದರೆ ಯಾರಿಗಾದರೂ ಹೆದರಿಕೆ, ಆದರೆ ಹಾವಿನಂತೆ ಹರಿವ ಗಂಗೆಯೆಂದರೆ ಅದೇತರ ಹೆದರಿಕೆ? ಬಾಳಿನಲ್ಲಿ ಅಡಿಗಡಿಗೆ ಬಂದೆರಗುವ ಎಡರು-ತೊಡರುಗಳಿಗಾಗಲಿ, ದುಃಖ ಸಂಕಟಗಳಿಗಾಗಲಿ ಗರತಿ ಹೆದಲಾರಳು. ಆಕೆ ಅಬಲೆಯೆನಿಸಿದರೂ ಧೀರತೆಯಿಂದ ಭಯವನ್ನು ಬಯಲು ಗೊಳಿಸಿಕೊಳ್ಳ ಬಲ್ಲ ಸಬಲೆ. ಆದರೆ ಆಕೆಗಿರುವ ಅಂಜಿಕೆಯೇ ಬೇರೆ, ಕುಟುಂಬ ಸಂಸ್ಥೆಗೆ ಬಿರುಕು ಬೀಳದಂತೆ ಎಚ್ಚರು ವಹಿಸುವ ಸಂದರ್ಭದಲ್ಲಿ ಆಕೆ ಹಲವಾರು ಅಂಜಿಕೆಗಳನ್ನು ಉಳಿಸಿಕೊಂಡು ಬಂದಿದ್ದಾಳೆ. "ಚಿಂತಿ ಮಾಡಲಿ ಬ್ಯಾಡ ಥೀ-ಹುಚ್ಚಿ ಹಡೆದವ್ವ। ಚಿಂತ್ಯಾಗ ಕಾಯಿ ಇಳಿತರ" ಎನ್ನುವುದರ ಮರ್ಮವರಿತಿದ್ದರೂ ಕುಶಲತೆಯಿಂದ ಕರ್ಮಮಾಡಿ ಅದನ್ನು ಯೋಗವಾಗಿ ಮಾರ್ಪಡಿಸಿಕೋಡಿದ್ದಾಳೆ. ಅಂಜಿಕೆಯೂ ಆಕೆಗೆ ಕರ್ಮಕೌಶಲ್ಯವೇ ಆಗಿದೆ.

ಅತ್ತಿ ಮಾವನಿಗಂಜಿ ಸುತ್ತೇಳು ಗ್ಗ ರಿಗಂಜಿ
ಮತ್ತ ನಲ್ಲನ ದನಿಗಂಜಿ। ನಡೆದರ।
ಎಂಥ ಉತ್ತಮರ ಮಗಳೆಂದ॥

ಹುಟ್ಟಿದ ಮನೆಗೆ ಶ್ರೇಯಸ್ಸು ತರುವುದಕ್ಕಾಗಿ "ಎಂಥ ಉತ್ತಮರ ಮಗಳು" ಎನಿಸಬೇಕಾಗಿದೆ, ಅವಳಿಗೆ. ಆದ್ದರಿಂದ ಆಕೆ ಕುಟುಂಬ ಸಂಸ್ಥೆಯ ಸದಸ್ಯರಿಗಾಗಲಿ, ನೆರೆಹೊರೆಯವರಿಗಾಗಲಿ ಅಂಜುವುದು ಪುಕ್ಕತನದಿಂದಲ್ಲ ಅದು ಆಕೆಯ ಸದುವಿನಯ.

"ಸದುವಿನಯವೇ ಸದಾಶಿವನ ದಯೆಯಯ್ಯ" ಎನ್ನುವ ಶರಣರ ಸೊಲ್ ನುಡಿಯು ಆಕೆಯ ಪಾಲಿಗೆ ಒಳ್ನುಡಿಯಾಗಿ ಪರಿಣಮಿಸಿದೆ.

"ಎನಗಿಂತ ಕಿರಿಯರಾರಿಲ್ಲವಯ್ಯ" ಎನ್ನುವಲ್ಲಿ ಬಸವಣ್ಣನು ತನ್ನ ಕಿಗ್ಗಳತನವನ್ನು ಕಂಡುಕೊಳ್ಳದೆ, ಜಗತ್ತು ಹಿರಿಯದು, ತಾನದರ ಮುಂದೆ ಕಿರಿಯ ಎನ್ನುವ ಭಾವವನ್ನೇ ಬಗೆದಿದ್ದನೆಂದು ಹೇಳಬೇಕು, ಗರತಿ ಅಂಜು-ವುದು ಹೆದರಿ ಬೆದರಿ ಮುದುರಿಯಾಗುವ ಮಾದರಿಯಲ್ಲ. ನಯ ವಿನಯಗಳ ಸಂಗಳಿಕೆ, ಗರತಿಯ ಮನವು ಪರಿಪಾಕಗೊಂಡಿದ್ದು, ಆಕೆಯ ಹೃದಯ ಸಿಹಿ ಮಾಧುರ್ಯವನ್ನು ಒಳಗೊಂಡಿದ್ದು. ಆಕೆಯಲ್ಲಿ ಕನಿಕರಗುಣವು ಕೆನೆಗಟ್ಟಿದೆ. ಕರುಣಾಭಾವವು ಕೊನೆಮುಟ್ಟಿದೆ. ಇಲ್ಲಿ ಆಕೆ ತಮ್ಮನಿಗೆ ಹೇಳುವ ಬುದ್ಧಿ-ವಾದವನ್ನಿಷ್ಟು ಕೇಳೋಣ—

ತಾಯವ್ವನ ಬೈಬ್ಯಾಡ ತೀಳಿಗೇಡಿ ನನತಮ್ಮ
ಭಾಳ ದಿನದಾಕಿ ಹಡೆದವ್ವಗ । ಬೈದರ ।
ಭಾಳ ಮರುಗ್ಯಾಳ ಮನದಾಗ ॥

ಇಷ್ಟಕ್ಕೆ ಮುಗಿಯದೆ, ಇನ್ನೂ ಮುಂದೆಸಾಗಿ ಅವ್ವನ ಹಿರಿಮೆ-ಗರಿಮೆಗಳನ್ನು ಮನಮುಟ್ಟುವಂತೆ ನಿರೂಪಿಸುತ್ತಾಳೆ.

ಗಂಡ ಸತ್ತವ್ವಗ ರಂಡಮುಂಡೆನಬೇಡ
ಕಂದನ ಹಿಡಿದು ತಪಹಾಳೆ । ಅವಳೀಗಿ ।
ಗಂಗಾದೇವೆಂದು ಕರಿಬೇಕ ॥

ಹೃದಯದಿಂದ ಹೊರಬಿದ್ದ ಈ ವಾಣಿ ನೇರವಾಗಿ ಹೃದಯವನ್ನು ತಲುಪುವುದರಲ್ಲಿ ಸಂಶಯವೇ ಇಲ್ಲ. ತಮ್ಮನ ಹೃದಯ ಪಲ್ಲಟಕ್ಕೆ ಅಕ್ಕನ ಈ ಹಾರ್ದಿಕಬೋಧೆ ತೀರ ನೇರವಾಗಿ, ಸಹಜ ಹಾಳತವಾಗಿದೆ.

ದುಃಖ ಸಂಕಟಗಳೇ ಬರದಿರಲೆಂದು ಗರತಿ ಹಾರಯಿಸಲಾರಳು. ಹಾಗೆ ಯಾವ ದೇವನನ್ನೂ ಪ್ರಾರ್ಥಿಸಲಾರಳು. ತೊಡಕು-ತೊಂದರೆಗಳನ್ನು ಎದುರಿಸುವ ಬಲನೀಡೆಂದು ಆಕೆ ಹಾರಯಿಸಿದ್ದಾಳೆ; ಸ್ತುತಿಸಿದ್ದಾಳೆ. ಅದು ವಾಸ್ತವಿಕದಾರಿಯೇ ಸೈ. ಬಡತನಕ್ಕೆ ಬೆದರದೆ, ಬಹುಮಕ್ಕಳ ಸಂಖ್ಯೆಗೆ ಸೊಪ್ಪು ಹಾಕದೆ, ಗುರುವಿನ ದಯೆಯಿಂದ ಅಗ್ನಿದಿವ್ಯವನ್ನು ಸಾಧಿಸಬಲ್ಲವಳೇ ಗರತಿ, ಹಲವುಸಾರೆ ಗರತಿಯಲ್ಲಿ ಗಂಡಸಿನಲ್ಲಿಯೂ ಕಾಣಸಿಗದ ಧೈರ್ಯ, ಕೆಚ್ಚು ಇರುವುದನ್ನು ಕಾಣಬಹುದಾಗಿದೆ; ಮನಗಾಣಬಹುದಾಗಿದೆ. ಸದಾ ವೆಂಕಟರಮಣ ಎನ್ನುತ್ತಿರುವವರಿಗೆ ಸಂಕಟಗಳೇತಕ್ಕೆ ಬಂದಾವು? ಬಂದರೂ ಅವು ಸಂಕಟಗಳೆಂದು ಅದೇಕೆ ತೋರಿಸಿಕೊಂಡಾವು ?

## ೬ ಆತ್ಮ ಪೋಷಣಕಾಗಿ

ರತ್ನಾಕರನ" ಭರತೇಶ ವೈಭವ" ಎಂಬ ಕಾವ್ಯದಲ್ಲಿ ಭರತೇಶ ರಾಜನು ಹಲವು ದಿನಗಳ ನಿರಾಹಾರ-ಉಪವಾಸಗಳಂಥ ಕಠೋರನೋಂಪಿಯನ್ನು ಕೈಕೊಂಡಾಗ, ಅವನ ಕೋಮಲ ಕಾಯರಾದ ಹೆಂಡಿರೂ ಪತಿಯೊಡನೆ ಉಪವಾಸ ವ್ರತವನ್ನು ಕೈಕೊಳ್ಳಲು ತಪಕಿಸುವುದನ್ನು ಕಂಡು, ಭರತೇಶನ ತಾಯಿಯು ಸೊಸೆಯರಿಗೆ-" ಉಪವಾಸದಂಥ ಕಠೋರ ವ್ರತವನ್ನು ನೀವೇಕೆ ಕೈಕೊಂಡು ಬಳಲುವಿರಿ? ನಿಮ್ಮೆಲ್ಲರ ಪರವಾಗಿ ನಿಮ್ಮ ಪತಿ ಒಬ್ಬ ಮಾತ್ರ ವ್ರತ ಕೈಕೊಂಡರೆ ಸಾಕಲ್ಲವೇ?" ಎಂದಾಗ ಎಳೆವರಿಯದ ಆ ಸೊಸೆಯಂದಿರು ಏನೆಂದು ಮರುನುಡಿದರು ಗೊತ್ತೇ?....

" ಉದರ ಪೋಷಣಕಾಗಿ ಬಹು ಜನ್ಮ ಸಂದದು,
ವಿದಾತಾತ್ಮ ಪೋಷಣಕಾಗಿ?"

ಈ ವ್ರತ ನೋಂಪಿಗಳೆನ್ನು ಕೈ ಕೊಳ್ಳಬೇಡವೇ ?

ನಮ್ಮ ನಾಡ ಗರತಿಯು ಆತ್ಮಪೋಷಣಕ್ಕಾಗಿ ದಿನ ನಿತ್ಯದಲ್ಲಿ ಹಲವಾರು ಸಹಜ-ಕ್ರಮಗಳನ್ನು ಅನುಸರಿಸುತ್ತ ಬಂದಿದ್ದಾಳೆ. ಬೆಳಗು ಮುಂಜಾನೆ ನಿದ್ರೆಯಿಂದ ಎಚ್ಚತ್ತ ಕೂಡಲೇ ಮೊಟ್ಟ ಮೊದಲಿಗೆ ಭೂಮಿತಾಯಿಯನ್ನು ತಪ್ಪದೆ ನೆನೆಯುತ್ತಾಳೆ-

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗಿ ಬೆಳೆಯೋಳೆ। ಭೂಮಿ ತಾಯೆ
ಎದ್ದೊಂದು ಗಳಿಗಿ ನೆನೆವೆನು॥

ಆ ಬಳಿಕ— ಶರಣೆದೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದು ಶಿವನ ಮಡದಿಗೆ। ಗೌರಮಗೆ
ಶರಣೆಂ೨ ಕಲ್ಲು ಹಿಡಿದೇನು॥
ಕಲ್ಲೀಗಿ ಮುಕ್ಕು ಹಾಕಿ ಎಲ್ಲ ದೇವರ ನೆನೆದೆ
ಅಕ್ಕಮಹಾದೇವಿಯ ಅರಸರ। ಮಲ್ಲಯ್ಯನ।
ಮುಕ್ ಹಾಕು ಮೊದಲೆ ನೆನೆದೇನ॥

ಪ್ರಾರ್ಥನೆಯಿಂದ ಪ್ರಾರಂಭವಾದ ದೈನಿಕ ಜೀವನವು, ಹಲವು-ಉದಾತ್ತ ವಿಚಾರಗಳನ್ನು ಮೆಲುಕು ಹಾಕುತ್ತ, ಕೈಕೊಂಡ ಕಾಯಕವನ್ನು ನಿಸ್ತರಿಸುವ ಕ್ರಿಯೆಯು ಸಹಜ ಯೋಗವೆನಿಸುವಂತಿದೆ.

ಕರುಣಬಂದರೆ ಕಾಯೋ ಮರಣಬಂದರೆ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ । ಕಾಶಿಲಿಂಗ
ಕಡೆತನಕಾಯೋ ಅಭಿಮಾನ॥

ಕಾಪಾಡುವುದೂ ಕೊಲ್ಲುವುದೂ ದೇವನಿಚ್ಛೆ. ಗರತಿ ಯಾವುದಕ್ಕೂ ಸಿದ್ಧಳು. ಬದುಕುವುದೇ ಆದರೆ ಅಭಿಮಾನವನ್ನು ಉಳಿಸಿಕೊಂಡು ಬದುಕ ಬೇಕು. ಅಂತೆಯೇ "ಕಡೆತನ ಕಾಯೋ ಅಭಿಮಾನ" ಎಂದು ಗರತಿ ಮೊರೆಯಿ ಡುತ್ತಾಳೆ. "ನಾ ಮಾಡೇನೆಂಬ ಅಳವಿಲ್ಲ, ಮಲ್ಲಯ್ಯ ನೀ ನಡಿಸು ನನ್ನ ಸರು-ವೆಲ್ಲ" ಎಂದು ಮೊರೆಯುತ್ತಾಳೆ.

ಕೊಡುವ ದೇವನಿಗೇ ಬೇಡುವಳಲ್ಲದೆ ತನ್ನಂತೆ ಕೈಯೊಡ್ಡುವ ಬಿಕನಾಶಿಗೆ ಗರತಿ ಬೇಡುವವಳಲ್ಲ. ಜೋಗದವರ ಮನೆಗೆ ಜೋಗದವರು ಹೋಗಿ ಪ್ರಯೋಜನವಿಲ್ಲವೆಂದು ಬಗೆಯುತ್ತಾಳೆ. ಆಕೆ ಗಟ್ಟಿಗಟ್ಟಿಯಾಗಿ ತಿಳಿಕೊಂಡು ಬಿಟ್ಟಿದ್ದಾಳೆ. ಏನೆಂದರೆ—

ಮಂದೇನು ಕೊಟ್ಟೀತ, ಮನವೇನು ದಣಿದೀತ
ಮಂಜಾನದಾನ ಗಿರಿಮಲ್ಲ । ಕೊಟ್ಟರೆ
ಮನಿತುಂಬಿ ನಮ್ಮ ಮನತುಂಬಿ ॥

ಕೈತುಂಬ ಕೊಡುವವರೂ, ಉಡಿತುಂಬ ನೀಡುವವರು ಸಿಕ್ಕಾರು. ಆದರೆ ಮನೆತುಂಬುವಷ್ಟು, ಮನತುಂಬುವಷ್ಟು ನೀಡಬಲ್ಲ ಮಹಾದಾನಿ ದೇವನೊಬ್ಬನೇ ಎಂಬುದನ್ನು ಗರತಿ ಯಾವ ಕಾಲಕ್ಕೂ ಮರೆಯಲಾರಳು. ಆಕೆಗೆ ಬಂಗಾರದ ವಸ್ತು ಬೇಡ, ಸಿಂಗಾರದ ಒಡವೆ ಬೇಡ. ಮುಡಿಯುವುದಕ್ಕೆ ಹೂ ಕೇದಿಗೆ ಬೇಡ. ಶರಣರ ನೆನಹೇ ಆಕೆಗೆ ಸಿರಿ-ಸಿಂಗಾರಗಳನ್ನೆಲ್ಲ ಒದಗಿಸುತ್ತದೆ.

ಶರಣರ ನೆನೆದರ ಸರಗೀಯ ಇಟ್ಟಂಗ
ಹವಳ ಮಲ್ಲಿಗಿ ಮುಡಿದಂಗ। ಕಲ್ಯಾಣ
ಶರಣರ ನೆನೆಯೊ ನನ ಮನವೇ॥

ನಮ್ಮ ಗರತಿಯ ಈ ಹಾರಯಿಕೆಗೂ, ರತ್ನಾಕರ ಕವಿ ಹೇಳುವ ತನ್ನ ಅನುಭಾವಕ್ಕೂ ಏನು ಅಂತರವಿದೆ ಹೇಳಬಲ್ಲೆವೇ? ಆ ಕವಿಯ ಅನು-ಭಾವ ಎಂಥದೆಂದರೆ—

ಸಿರಿಗೇನು ಕಡಿಮೆ ಸಿಂಗರಕೇನು ಕಡಿಮೆ.ಸೌಂ.
ದರಕೇನು ಕಡಿಮೆ ನೀನಿರಲು।
ಎರವಿಲ್ಲದೆನ್ನಂತರಂಗದೊಳಿರು ಪ್ರಬು
ಧುರನೆ ಚಿದಂಬರ ಪುರುಷ॥

ಅದೇ ಅನುಭಾವವನ್ನು ಹರಿಹರ ಕವಿಯು ಬೇರೊಂದು ರೀತಿಯಲ್ಲಿ ಹೇಳುವನು. ಹೇಗೆಂದರೆ – "ನಿನ್ನ ಕಿರ್ಪಂ ಪಿಡಿದವನ ಚರಣ ಅರ ಮುಕು–ಟದೊಳು ಬೀಳದು ದೇವಾ? "ಪರಮಾತ್ಮನ ಕಾಲಕೆರಹುಗಳನ್ನು ಗಟ್ಟಿಯಾಗಿ ಹಿಡಕೊಂಡ ಭಕ್ತನ ಚರಣಗಳು, ರಾಜನ ಕಿರಟದ ಮೇಲೆ ಬೀಳುವಂತೆ– ಅಂದು ರಾಜಕಿರಿಟಕ್ಕಿಂತ ಉನ್ನತಸ್ಥಾನದಲ್ಲಿ ಭಕ್ತನ ಚರಣಗಳು ನಿಲ್ಲುವವು– ಎಂದರ್ಥ

ದೇವ ನಾಮವನ್ನು ಗರತಿ ತನ್ನ ನಾಲಗೆಯ ಮೇಲೆ ನಿತ್ಯಬಿತ್ತಿ-ನಿತ್ಯಬೆಳೆಯುವ ಕೃಷಿ ಕಾಯಕದವಳು. ಅಂತೆಯೇ ಆಕೆ ಸಾರಿಸಾರಿ ಹೇಳು–ತ್ತಾಳೆ.-

ನಾರಾಯಣಾ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ। ನಿನ್ನ ನಾಮ।
ನಾಲಿಗಿ ಮೇಲೆ ಬೆಳೆದೇನೋ॥

ಉಳ್ಳವರು ಶಿವಾಲಯ ಮಾಡುವಂತೆ, ನೆಲವಿದ್ದವರೂ ತೋಟ ಮಾಡುವರು, ಆದರೆ ಬಡವಿಯಾದ ಗರತಿಗೆ, ನಾಲಗೆಯನ್ನೇ ದೇವನಾಮ–ವನ್ನು ಬಿತ್ತಿಬೆಳೆಯುವ ಹೊಲ ಮಾಡಿಕೊಳ್ಳಲು ಮಾತ್ರ ಸಾಧ್ಯವಿದೆ. ಆಕೆಯ ನಿಲುಮೆ ಪ್ರಭುದೇವರ ಈ ಸಿರಿ ನುಡಿಗೆ ಸಾಟಿಯಾಗಿರುವುದೆಂದೇ ಹೇಳಬಹು-ದಾಗಿದೆ. ಆ ಸಿರಿನುಡಿಯಾವುದೆಂದರೆ–

ಹುಟ್ಟದ ಗಿಡುವಿನ ಬಿಟ್ಟಲೆಯ ತಂದು
ಮುಟ್ಟದೆ ಪೂಜಿಸು ನಮ್ಮ ಗುಹೇಶ್ವನ

ಆ [ಪೂಜೆಯ] ಫಲ [ಪ್ರಯೋಜನ] [ಏನೆಂಬುದನ್ನೂ ಹೇಳದೆ-ಬಿಟ್ಟಿಲ್ಲ] ಪ್ರಭುದೇವರು! ಅದು ಕೆಳಗೆ ಕಾಣಿಸಿದ ಅವರದೆ ವಚನದಲ್ಲಿ ಸ್ಪಷ್ಟ ಗೊಳಿಸಲಾಗಿದೆ.

" ಉರದ ಚೇಳಿಂಗೆ ಏರದ ವಿಷಕ್ಕೆ
ಜಗವೆಲ್ಲ ಹೊರಳಿ ಉರಳಿ ನೆರಳಾಡುತ್ತಿದೆ. "

ಅದರ ನಿವಾರಣೆಯೇ ಆ ಪೂಜೆಯ ಪರಮಫಲ; ಪ್ರಯೋಜನ. ಆದರಂತೆ ಗರತಿಯು ನಡೆಯಿಸುವ ನಾರಾಯಣ ನಾಮದ ಕೃಷಿಯೂ ಆ ಪರಮ-ಫಲ, ಪ್ರಯೋಜನಗಳನ್ನು ಒದಗಿಸುವುದು ಸಾಮಾನ್ಯ ವಿಷಯವಲ್ಲ.

ಎಚ್ಚರಿಕೆಯಲ್ಲಿ ನಡೆಯಿಸುವ ದೇವನಾಮದ ಅನುಸಂಧಾನವನು ಗರತಿಯು ನಿದ್ರೆಯಲ್ಲಿಯೂ ನಡೆಯಿಸುವುದು ಆಕೆಯ ಅಂತರ್ಯದ ಅರುಹಿನ ದ್ಯೋತಕವೇ ಆಗಿದೆ.

ನಿದ್ದಿಗಣ್ಣಲಿ ಕಂಡೆ ಸುದ್ದ ಗುರುವಿನ ಪಾದ
ಎದ್ದು ನೋಡಿದರ ನಿರಬಯಲ| ಗುರುವಿನ
ರುದ್ರನ ಮಹಿಮೆ ತಿಳಿಯಾವ||

ತನ್ನ ದೈವತವು ಹೂವಿನಲ್ಲಿ ಹುದುಗಿರುವುದನ್ನು, ಮೊಲೆಯಲ್ಲಿ ಮಲಗಿರುವುದನ್ನು, ಮೊಗ್ಗೆಯಲ್ಲಿ ಕಣ್ಣು ತೆರೆದಿರುವುದನ್ನು ಗರತಿ ಕಾಣಬಲ್ಲ ವಳಾಗಿದ್ದಾಳೆ. ಆಕೆ ನಿದ್ರೆ ಎಚ್ಚರುಗಳ ಆಚೆಯಲ್ಲಿರುವ ಅರುಹಿನಲ್ಲಿ ನೆಲೆಸಿ-ನಿಂತಿರುವಳೆಂದು ಹೇಳಬಹುದಾಗಿದೆ.

ತನ್ನ ಮನಕ್ಕೆ ಬಂದ ದೈವತವನ್ನು ನೇರವಾಗಿ ಸಂಧಿಸುವ ಹಾಗೂ ತೋರವಾಗಿ ಸಂಬಂಧಿಸುವ ಸಂದರ್ಭವನ್ನು ಆಕೆ ಅರಿತುಕೊಂಡಿದ್ದಾಳೆ. ಪ್ರಕೃತಿಯೆಲ್ಲ ಕಣ್ಮುಚ್ಚಿಗೊಂಡಾಗ ಪುರುಷನು ಜಾಗ್ರತನಾಗಿರುವ ಸುಸಂಧಿ-ಯನ್ನು ಆಕೆ ವ್ಯರ್ಥವಾಗಿ ಕಳಕೊಳ್ಳುವದಿಲ್ಲ. ಅಂಥ ಪ್ರಸಂಗದಲ್ಲಿ ದೇವಸ್ಮರಣೆಗೆ ತೊಡಗಿ ಅಂತಃ ಪುರುಷನ ಜಾಗ್ರತಿಯನ್ನು ಅಂತರಾಳದಲ್ಲಿ ಅನುಭವಿ-ಸುವದು ಸಣ್ಣ ಮಾತೆ? ಆಕೆ ಹೇಳುತ್ತಾಳೆ-

ತಾಯವ್ವ ನೆನೆಯೂದು ಯ್ಯಾಯಾಳಿಯೂ ಹೊತ್ತು
ಊರೆಲ್ಲ ಉಂಡು ಮಲಗಾನ| ಬೆಳಿಚುಕ್ಕಿ|
ಹೊಂಡಾಗ ಅವಳ ನೆನೆದೇನ||

ಊರೆಲ್ಲ ಉಂಡು ಮಲಗಿದ ಬಳಿಕ ಉಂಟಾಗುವ ಗಾಢ ಪ್ರಶಾಂತ-ತೆಯಂತೆ, ಬೆಳ್ಳಿಚುಕ್ಕಿ ಹೊರಡುವಾಗ ಹರಡಿರುವ ಗೂಢ ಪ್ರಶಾಂತತೆ

---

ಆಕೆಯ ಅಂತರಂಗವನ್ನು ಆಕರ್ಷಿಸುತ್ತದೆ.

ಮೂಗುತಿಯನ್ನು ಮೆಚ್ಚಿಕೊಂಡ ಗರತಿ, ಮೂಗು ಮಾಡಿದವನನು ಅದಕ್ಕಿಂತ ಮಿಗಿಲಾಗಿ ಮೆಚ್ಚಿಕೊಂಡಿದ್ದಾಳೆ. ಅಂಥ ಮೂಗಿಗೆ ಮೂಗುತಿ ಒದಗಿಸಿಕೊಟ್ಟ ಮುತ್ತೈಯ್ಯನನ್ನು ಮರೆಯುವಂತಿಲ್ಲ. ಮೂಗುತಿ, ಮೂಗು ಮುತ್ತೈಯ್ಯ ಇದ್ದರೂ ಮುತ್ತೈದೆತನವಿಲ್ಲದಿದ್ದರೆ ಪ್ರಯೋಜನವೇನು? ಮುತ್ತೈದೆತನವಿದ್ದರೂ ಮಕ್ಕಳಿಲ್ಲದ ಬಂಜೆಯಾಗಿ ಉಳಿದರೆ ಅದೆಲ್ಲವೂ ನಿಷ್ಪ್ರಯೋಜನವೇ ಸರಿ.

**ಮುತ್ತಿನ ಮೂಗುತಿ ಮುತ್ತ್ಯಾ ಮಾಡಿಸಿ ಕೊಟ್ಟ**
**ಮುತ್ತೈದೆ ತನವ ಶಿವಕೊಟ್ಟ। ಮೇಲಿರುವ।**
**ಮುಕ್ಕಣ್ಣ ಕೊಟ್ಟ ಮಕ್ಕಳನ।।**

ಮುತ್ತೈದೆತನ ಕೊಟ್ಟ ದೈವತ್ವಕ್ಕೆ ಶಿವವೆಂದ ಗರತಿ, ಮಕ್ಕಳನ್ನು ದಯಪಾಲಿಸಿದ ದೈವತಕ್ಕೆ ಮುಕ್ಕಣ್ಣನೆಂದು ಕರೆದಳು. ಎರಡು ಕಣ್ಣುಳ್ಳವರಾರೂ ಮಕ್ಕಳನ್ನು ಕೊಡಲಾರರು. ಆ ಕೊರತೆ, ಮೂರು ಕಣ್ಣುಳ್ಳವನಿಗೆ ಮಾತ್ರ ಕಾಣಿಸಬಲ್ಲದು. ಮುಕ್ಕಣ್ಣನಿಗೆ ಕೃಪಾಶಕ್ತಿಯೂ ಇರುವುದರಿಂದ ಮಕ್ಕಳನ್ನು ಕರುಣಿಸುವನು. ಅದು ಅವನಿಗೆ ಸಹಜ ಕ್ರಿಯೆ ಆಗಿದೆ.

ಇವೆಲ್ಲಕ್ಕೂ ಮಿಗಿಲಾಗಿ ಪತಿಯ ಮೇಲೆ ಭಕ್ತಿಯಿರದಿದ್ದರೆ, ಕುಟುಂಬ ಸಂಸ್ಥೆಯ ಏಕತೆಗೆ ದಾರಿಯಿಲ್ಲದಾಗುವದು. ದೇವನೊಲುಮೆಯೂ ದೂರನಿಲ್ಲುವದು.

**ಪೂಜೆ ಮಾಡಿದರೇನ ಪತ್ರಿ ಏರಿಸಿದರೇನ**
**ಪತಿ ಮೇಲೆ ಭಕ್ತಿಯಿರದಿದ್ದರ। ಗೆಳದೆವ್ವ**
**ಮಾದೇವ ಹ್ಯಾಂಗ ಒಲಿದಾನು।**

ಪತಿಯ ಮೇಲೆ ಸತಿಗೆ, ಸತಿಯ ಮೇಲೆ ಪತಿಗೆ ಭಕ್ತಿಯೋ-ಪ್ರೀತಿಯೋ ಇರುವದು ಉಭಯರಿಗೂ ಕಲ್ಯಾಣಕರ.
ಅದು ವಾಸ್ತವಿಕವೂ ಆಗಿದೆ. ಅಲೌಕಿಕದತ್ತ ಪತಿಯ ಒಲುಮೆಯಿದ್ದ ಸಂದರ್ಭದಲ್ಲಿ ಸತಿಯಾದವಳು ಲೌಕಿಕವನ್ನು ನಿರ್ವಹಿಸಿಕೊಂಡು ಆತನ ದಾರಿಯನ್ನು ಸುಗಮಗೊಳಿಸಬೇಕು. ಅದೊಂದು ಅಲೌಕಿಕಕ್ಕೆ ಹಿರಿದಾದ ಸಹಾಯವು ಆಗಿದೆ ಆವಾಗ ಪತಿಯು ಗಳಿಸಿದ ಆಧ್ಯಾತ್ಮಿಕ ಸಂಪತ್ತಿಗೆ ಸತಿಯು ಸಹಜವಾಗಿಯೇ

ಸಹಭಾಗಿಯಾಗುವಳು. ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ ಕಿಸೆಯೊಳಗಿನ ಅಡಿಕೆಹೋಳನ್ನು ತೆಗೆದುಕೊಡುವುದಕ್ಕಿಂತ ಸುಲಭವಾಗಿ, ಸಹಜವಾಗಿ, ಪತಿಯು ತಾನು ಗಳಿಸಿದ ಆಧ್ಯಾತ್ಮಿಕ ಸಂಪತ್ತನ್ನು ಸತಿಗೆ ಪಾಲುಗೊಡಲು ಸಾಧ್ಯ. ಅಂಥ ಸುಪ್ರಸಂಗವನ್ನು ಗಳಿಸಿದ ದಾಂಪತ್ಯ ಜೀವನವೇ ಧನ್ಯ. ಪತಿಯೇ ದೇವರೆನ್ನುವುದು ಅಲ್ಲಿಯೇ ಸಾರ್ಥಕಗೊಳ್ಳುತ್ತದೆ. ಪತಿಯ ಮೇಲಿನ ಭಕ್ತಿಯೆನ್ನುವುದು ಅಲ್ಲಿಯೇ ಒಪ್ಪುಗೊಳ್ಳುತ್ತದೆ.

ಕುಟುಂಬ ಸಂಸ್ಥೆಯಲ್ಲಿ ನಾಯಕ-ನಾಯಿಕೆ ಪಾತ್ರವಹಿಸಿದ ದಂಪತಿಗಳು, ಉದರಪೋಷಣವನ್ನು ಗಮನಿಸುವುದು ಅನಿವಾರ್ಯವಾದರೂ, ಆತ್ಮಪೋಷಣವನ್ನು ಲೆಕ್ಕಿಸುವುದು ಅದಕ್ಕಿಂತ ಹೆಚ್ಚು ಅನಿವಾರ್ಯವಾಗಿದೆ, ಅಂಥ ಆದರ್ಶವನ್ನು ಗರತಿಯು ಕಣ್ಣಮುಂದೆ ಇರಿಸಿಕೊಂಡಿದ್ದು ನಿಚ್ಚಳವಾಗಿ ಕಂಡುಬರುತ್ತದೆ.

## ೭ ಮನಸ್ತರವನು ಮೀರಿ

ಪ್ರಾಣವೇ ಪ್ರಮುಖವಾಗಿದ್ದ ಚೇತನವು ಪ್ರಾಣಿಯೆನಿಸುವಂತೆ, ಮನಸ್ಸೇ ಮುಖ್ಯವಾಗಿದ್ದ ಚೇತನವು ಮನುಷ್ಯನೆನಿಸುತ್ತದೆ. ಪ್ರಾಣಿಗೆ ಪ್ರಾಣವೇ ಮುಖ್ಯವಾಗಿದ್ದರೂ ಪ್ರಾಣದಾಚೆಗಿರುವ ಮನಸ್ಸಿನ ಸುಳುಹುಹೊಳಹುಗಳಂತಿರುವ. ತಿಳುವಳಿಕೆಯು ಸಂಗಳಿಸುವ ಹಾಗೆ, ಮನಸ್ಸೇ ಮುಖ್ಯವಾಗಿದ್ದರೂ ಮನುಷ್ಯನು ಬುದ್ಧಿವಂತಿಕೆ ಮಾತ್ರ ಗಳಿಸದೆ, ಅದರಾಚೆಗಿನ ತಿಳುವಳಿಕೆಯನ್ನೂ ಕೈಗೂಡಿಸಿಕೊಳ್ಳಬಲ್ಲನು, ಮನಸ್ತರದಲ್ಲಿ ನಿಂತ ಮನುಷ್ಯಚೇತನವು ಮೇಲಿನ ಸ್ತರಗಳಾದ ಉಚ್ಚ. ಸಂಬೋಧಿ, ಪ್ರಕಾಶಮಯ ಮನೆಗಳ ವಾತಾವರಣದಲ್ಲಿ ವಿಹರಿಸಬಲ್ಲನು.

"ತಿಳಕೊಳ್ಳುವುದು ತೀರುತ್ತಲೆ ತಿಳುವಳಿಕೆ ಉಂಟಾಗುವದು" ಎಂದು ಶ್ರೀ ಅರವಿಂದರು ಹೇಳುತ್ತಾರೆ. "ತಿಳುವಳಿಕೆಯಂಥ ತಿಳಿಗೇಡಿತನವಿನ್ನಿಲ್ಲ" ಎನ್ನುವುದು ದಿ, ಬೇಂದ್ರೆಯವರ ಅನುಭಾವ, ಇವೆರಡರಲ್ಲಿ ಸಮನ್ವಯವನ್ನು ಉಂಟು ಮಾಡುವುದು ಹೇಗೆ? ಬರೆ ತಿಳುವಳಿಕೆಯು ಬಾಲಹಿಡಿದು ಸಾಗುವುದು

ತಿಳಿಗೇಡಿತನವೇ ಅಹುದು. ತಿಳಕೊಳ್ಳುವುದನ್ನು ಸ್ಥಗಿತಗೊಳಿಸಿದರೆ, ಅಲ್ಲಿ ತಿಳುವಳಿಕೆ ಉದಿಸತೊಡುಗುತ್ತದೆ, ಅದೇ ಉಚ್ಚಮನದ ಸೀಮೆಯೆಂದು ಹೇಳಬಹುದು; ಆ ಸೀಮೆಯಲ್ಲಿ ತಿಳುವಳಿಕೆಗೆ ಮೀರಿದ, ಅಂತರಂಗದ ಅನಿಸಿಕೆಗಳನ್ನು ಬೀರಲಾಗುತ್ತದೆಂದು ತೋರುತ್ತದೆ. ಅದು ನಮ್ಮ ನಿಮ್ಮೆಲ್ಲರ ಅನುಭವಕ್ಕೂ ಬಂದಿರಬಹುದಾಗಿದೆ. ಅದು ಉಚ್ಚಮನದ ಬದುಕೆಂದು ಎದೆತಟ್ಟಿ ಹೇಳಲು ಅಸಮರ್ಥರಾಗಿದ್ದೇವೆ; ಅಷ್ಟೇ.

ಇಂದು ನನ್ನಂಗಳ ಶ್ರೀಗಂಧನಾತಾವ
ಬಂದಿದಾನಾನ ಶ್ರೀಹರಿ । ನನ ಮನೆಗೆ
ಗಂಧದ ಮಡುವ ತುಳಕೂತ ||

ಈ ತ್ರಿಪದಿಯೊಳಗಿನ ಮೊದಲಸಾಲು ಕೇಳಿದ ಕೂಡಲೇ ಮೀಸೆ ಹೊತ್ತ ಗಂಡಸರು ಬೆಚ್ಚಿ ಬೀಳುತ್ತಾರೆ; ರೊಚ್ಚಿಗೇಳುತ್ತಾರೆ. "ನಾಯಿಗೆ ಬೊಗಳಲು ಕಲಿಸುವದಿಲ್ಲ. ಹೆಂಗಸಿಗೆ ಹಾಡಲು ಕಲಿಸುವದಿಲ್ಲ." ಎಂದು ನುಡಿದು, ನಾಯಿ ನಾರಿಯರನ್ನು ಒಂದೇ ದಾರದಲ್ಲಿ ಪವಣಿಸನಿಲ್ಲುತ್ತಾರೆ. ಇಂದಿನ ವೈಜ್ಞಾನಿಕಯುಗದಲ್ಲಿ ಇಂಥ ಮಾತುಗಳು ನಗೆಗೆಡೆ ಯಾಗುವುದರಲ್ಲಿ ಸಂದೇಹವೇ ಇಲ್ಲ. ಅಂಗಳವು ಶ್ರೀಗಂಧನಾರುವುದುಂಟೇ ?- ಎಂದು ಮೂಗು ಮುರಿಯುವ ಇಂದಿನ ಸುಶಿಕ್ಷಿತರಿಗೆ, ಕಿವಿಹಿಂಡಿ ಹೇಳಬಲ್ಲಂಥ ಮಹಾಮಹಿಮರು ೧೯-೨೦ನೇ ಶತಮಾನದಲ್ಲಿ ಹುಟ್ಟಿಬಂದು ಹೇಳಿದ್ದೂ ಉಂಟು. ಏನೆಂದರೆ- "ಭೌತಿಕ ವಿಜ್ಞಾನವೇ ಇಷ್ಟೊಂದು ಆಶ್ಚರ್ಯಕರವಾಗಿರುವಾಗ,ಆತ್ಮಿಕ ವಿಜ್ಞಾನವು ಇನ್ನೆಷ್ಟು ಆಶ್ಚರ್ಯಕರವಾಗಿರಬೇಡ ಆ ಮಾತಿಗೆ ಸ್ಪಷ್ಟವಾದ ಉದಾಹರಣೆ ಹೇಳಬಹುದಾಗಿದೆ.—

ಅಧರಸೇನ ಎಂಬ ಸಹಾಯಕ ಜಿಲ್ಹಾಧಿಕಾರಿಗಳು, ದಕ್ಷಿಣೇಶ್ವರದಲ್ಲಿದ್ದ ಶ್ರೀ ರಾಮಕೃಷ್ಣ ಪರಮಹಂಸರೊಂದಿಗೆ ನಿಕಟಸಂಬಂಧವಿರಿಸಿಕೊಂಡಿದ್ದರು. ಅವರನ್ನು ಆಗಾಗ ತಮ್ಮ ಮನೆಗೆ ಬರಮಾಡಿಕೊಂಡು, ಮನೆಯ ಮಂಡಲಿಗೆಲ್ಲ ಅವರ ಸಂಪರ್ಕವನ್ನು ಒದಗಿಸಿಕೊಡುತ್ತಿದ್ದರು. ಆ ಕಾಲಕ್ಕೆ ನಡೆಯುವ ಪೂಜೆ-ಪ್ರಾರ್ಥನೆ-ಪ್ರಸಾದವಿತರಣೆಗಳು ಸುರವಾಂಛಿತ ಸುಸಂಧಿಯನ್ನು ಒದಗಿಸುತ್ತಿದ್ದವು. ಆದರೆ ಅಧರಸೇನರು ಅದಾವುದೋ ಸರ್ಕಾರಿ

ಕಾರ್ಯಬಾಹುಲ್ಯದಲ್ಲಿ ತೊಡಗಿ, ಅಂಥ ಶ್ರೇಷ್ಠ ಪ್ರಸಂಗಗಳನ್ನು ಆರುತಿಂಗಳು ತಪ್ಪಿಸಿಕೊಂಡಿದ್ದರು. ಕೆಲಸದ ಒತ್ತಡವು ತುಸು ತಮ್ಮಣಿಗೊಳ್ಳುತ್ತಲೆ, ದಕ್ಷಿಣೇಶ್ವರದಿಂದ ಪರಮಹಂಸರನ್ನು ಮನೆಗೆ ಬರಮಾಡಿಕೊಂಡರು. ಅವರ ದರ್ಶನಾಶೀರ್ವಾದಗಳಿಗಾಗಿ ಮನೆಯ ಮುಂಡಲಿ ಆಪ್ತೇಷ್ಟರೆಲ್ಲ ಶುಚಿರ್ಭೂತರಾಗಿ ಬರತೊಡಗಿದರು. ಗುರುಗಳನ್ನು ಸತ್ಕರಿಸುವ ಸಿದ್ಧತೆ ನಡೆಸಿದ ಅವಸರದಲ್ಲಿಯೂ ಅಧರಸೇನರು ನುಡಿದರು—

"ನೋಡಿರಿ! ಆರುತಿಂಗಳಿಂದ ಬಿಕೋರಿ ಅನ್ನುತ್ತಿದ್ದ ಮನೆ ಇಂದು ಸುಗಂಧ ಮಯವಾಗಿದೆ ಗುರುಗಳ ಸಾನ್ನಿಧ್ಯದಿಂದ."

ಸತ್ಪುರುಷರ ಹಾಗೂ ಮಹತ್ಪುರುಷರ ಸಮಾಗಮವು ಮನಸ್ಸಿನ ಹೀನ ವಾಸನೆಗಳನ್ನು ಸುಟ್ಟುಹಾಕಿ ಸುವಾಸನೆಯನ್ನು ತಂದೆರುಚ್ಚುತ್ತವೆಂದು ಹೇಳಬಹುದಾಗಿದೆ.

ಧಾರವಾಡ ತಪೋವನದ ತಪಸ್ವಿಗಳಾದ ಶ್ರೀಕುಮಾರ ಸ್ವಾಮಿಗಳು ಒಂದೆರಡು ದಿವಸ ಚಡಚಣದ ಬಳಿಯಲ್ಲಿರುವ ಲೋಣಿ ಗ್ರಾಮದಲ್ಲಿ ವಾಡಿಕೆಯಂತೆ ಬೀಡುಬಿಟ್ಟಿದ್ದರು. ಆ ಕಾಲಕ್ಕೆ ಸುತ್ತಲಿನ ಹಳ್ಳಿಗಳಿಂದ, ಹತ್ತಿರದ ನಗರಗಳಿಂದ, ಅದೆಷ್ಟೋ ಜನ ಭಕ್ತರು ದರ್ಶನಾಂಕಾಕ್ಷಿಗಳಾಗಿ ಬಂದು, ವಂದಿಸಿ, ಆಶೀವಾದ ಪಡೆದುಕೊಂಡು ತೆರಳುತ್ತಿದ್ದರು. ಸೊಲ್ಲಾಪೂರದಿಂದ ಮಾರವಾಡಿ ದಂಪತಿಗಳು, ಸ್ವಾಮಿಗಳ ಮುಂದೆ ಫಲ ಪುಷ್ಪಗಳನ್ನಿರಿಸಿ, ಎರಗಿ ಕೇಳಿಕೊಂಡರು–

ಅಪ್ಪಗಳೇ, ನೀವು ಸೊಲ್ಲಾಪುರದಲ್ಲಿ ಬೀಡು ಬಿಟ್ಟಾಗ ನಿಮಗಾಗಿ ಕಾದಿರಿಸಿದ್ದ ಕೋಣೆಯನ್ನು ನಾವು ಯಾವುದಕ್ಕೂ ಉಪಯೋಗಿಸದೆ ಕೀಲಿ ಹಾಕಿಸಿದ್ದೇವೆ. ಆಗಾಗ ಕಸಗೂಡಿಸಿ, ಧೂಳು ಜಾಡಿಸುವುದಕ್ಕಾಗಿ ಕೋಣೆ ತೆರೆದರೆ, ಸುಗಂಧಮಯ ವಾತಾವರಣ ಅಲ್ಲಿ ತುಂಬಿ ಸುಸಾಡುತ್ತಿರುವುದು ಕಂಡು ಬರುತ್ತದೆ. ತಮ್ಮದೇ ಆದ ಆ ಕೋಣೆಯಲ್ಲಿ ತಾವು ಇನ್ನೊಮ್ಮೆ ಬಂದು, ತಿಂಗಳೊಪ್ಪತ್ತು ನಿಂತು ಪುನೀತಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ತಪಸ್ವಿಗಳು ವಾಸಮಾಡಿದ ಕೋಣೆ ಸುಗಂಧಮಯ ವಾತಾವರಣವನ್ನು ಕಾಯ್ದುಕೊಂಡಿದ್ದು ಇಲ್ಲಿ ಮುಖ್ಯವಲ್ಲವೇ? ಮಹತ್ಪುರುಷರ ಉಸಿರು

ಪ್ರೈಚೆವರು ಉಜ್ವಲವಾದ ಸುಗಂಧ ಬೀರುತ್ತವೆಂದು, ಅಂಥ ದಿವ್ಯಸಂಪರ್ಕ ದಲ್ಲಿದ್ದವರು ಹೇಳುವುದನ್ನು ಕೇಳಿದ್ದೇವೆ. ಹೀಗಿರುವಾಗ ನಮ್ಮ ಗರತಿಹಾಡಿದ "ಇಂದು ನನ್ನಂಗಳ ಶ್ರೀಗಂಧ ನಾತವ ಎಂದು ಮೊದಲಾಗುವ ಹಾಡು, ವಾಸ್ತವಿಕತೆಯನ್ನು ಕಳಕೊಂಡಿಲ್ಲವೆಂದೇ ಹೇಳಬೇಕು. ಶ್ರೀ ಹರಿಯಾಗಲಿ, ಶ್ರೀಹರಿಯ ಪ್ರತಿನಿಧಿಯಾಗಲಿ ಬರುವದು ತುಳುಕು ಗಂಧದ ಮಡುವನು ಷಂಂದೆ ಮಾಡಿಕೊಂಡು- ಎಂಬ ಮನವರಿಕೆ ಆಕೆಗೆ ಆಗಿರಲೇಬೇಕು, ಅನುಭವಕ್ಕೆ ಬಂದಿರಲೇಬೇಕು. ಆಕೆಯ ಆ ಅನುಭವವು ಅನುಭವ ಮಾತ್ರವಾಗಿರದೆ ಮಹಾನುಭವವೂ ಆಗಿದೆಯೆಂದು ಎದೆತಟ್ಟಿ ಹೇಳಬಹುದಾಗಿದೆ. ಅದು ಮನಸ್ತರದ ಆಚೆಗಿರುವ ಉಚ್ಚಮನದ ಸಂಪರ್ಕ ಪಡೆದ ಮಹಾನುಭವವೇ ಆಗಿದೆ. ಉಚ್ಚಮನವೆಂದರೆಅತಿಮಾನಸದ ಕೆಳಗಿರುವ ೩ ನೇ ನೆಲಮನೆಯೋ- ಆಗಿದೆಯಂತೆ.

ವಿವೇಕಾನಂದ ಸ್ವಾಮಿಗಳಿಗೆ ಉಚ್ಚಮನದ ಸ್ತರವು ನೆಲೆಯಾಗಿತ್ತೆಂದೂ, ಅವರ ಗುರು ಪರಮಹಂಸರಿಗೆ, ಅದಕ್ಕೂ ಮೇಲಿನ ಸಂಭೋಧಿಮನಸ್ತರವು ನೆಲೆಯಾಗಿತ್ತೆಂದೂ ಹೇಳುತ್ತಾರೆ. "ಸಂಸಾರವೇದ"ವನ್ನು ಉಸಿರಬಲ್ಲ ಗರತಿಗೆ ಉಚ್ಚಮನಸ್ತರವು, ವಾಸ್ತವ್ಯದ ಮೇಲ್ಮಾಳಿಗೆಯೋ ಆಗಿರುವ- ದೆಂದು ತೋರುತ್ತದೆ.

**ಬತ್ತೀದ ಹೊಲದಾಗ ಒತ್ತಿ ಹಾಯಕಿಯಾರ**
**ಮುತ್ತಿನುಡಿಯಾಕಿ ಬನದಮ್ಮ। ಹಾಯ್ದರ।**
**ಬಿಚ್ಚಿಬಿದ್ದಾವ ಬಿಳಿಜೋಳ॥**

ನಿನ್ನೆ ಸಾಯಂಕಾಲದ ಹೊತ್ತಿಗೆ ಹೂ ಚಿಕ್ಕಾರುವ ಜೋಳದ ತೆನೆ- ಯಲ್ಲಿ ಬೆಳಗಾಗುವುದರಲ್ಲಿ ಮುತ್ತಿನಂಥ ಜೋಳದ ಕಾಳುಗಳು ಕಂಗೊಳಿಸ- ಬೇಕಾದರೆ, ಅಲ್ಲಿ ಬನದಮ್ಮದೇವಿ ಸುಳಿದಿರಲೇ ಬೇಕಲ್ಲವೇ? ಮುತ್ತಿನುಡಿ- ಯಿಂದ ಒಂದೊಂದು ಮುಷ್ಟಿ ಮುತ್ತುಗಳನ್ನು ಪ್ರತಿಯೊಂದು ಜೋಳದ ದಂಟಿನ ತುದಿಯಲ್ಲಿರುವ ಹೂ ಬಿಟ್ಟ ತೆನೆಯಲ್ಲಿ ಹಾಕಿ ಹೋಗಿದ್ದಾಳೆಂದೇ ಬೆಳಗಾಗುವದರಲ್ಲಿ ಅದ್ಭುತ ಮಾರ್ಪಾಡು ಕಂಡುಬರುವದಲ್ಲವೇ? ಜೋಳದ ಬೆಳೆಯಲ್ಲಿ ಹಾದು ಹೋಗುವಾಗ ಮುತ್ತಿನುಡಿಯಾಕೆಯಾಗಿದ್ದ ಬನದಮ್ಮ

ಗೋದಿಯ ಬೆಳೆಯಲ್ಲಿ ಹಾದು ಹೋಗುವಾಗ ಹವಳದ ಉಡಿಯಾಕೆ ಆಗುತ್ತಿರುವಳೇನೋ.

ಭಕ್ತಿಯ ದಾರಿಯಲ್ಲಿ ಸಾಗುವುದೆಂದರೆ ಹಾವಸೆಗಲ್ಲಿನ ಮೇಲೆ ಹಾದು ಹೋದಹಾಗೆ ಎಂದು ಶರಣರು ಹೇಳುತ್ತಾರೆ. ಸಾಧಕಾವಸ್ಥೆಯಲ್ಲಿ ಹಾಗೆ ಅನಿಸುವುದು ವಾಸ್ತವಿಕವೇ ಆಗಿದೆ, ಆದರೆ ಸಿದ್ಧಪುರುಷನಿಗೆ ಅದು ರಾಜಮಾರ್ಗವೇ ಆಗಿರುತ್ತದೆ.

**ಹಾಸಗಲ್ಲಿನ ವ್ಯಾಲ ಹಾದು ಹೋಗವನ್ಯಾರ**
**ಪಾದ ಮೂಡ್ಯಾವ ಪರಿಪರಿ। ಬಲಭೀಮ।**
**ಹಾದ ಹೋಗ್ಯಾನ ಜಳಕಾಕ॥**

ಸಿದ್ಧಿಪಡೆದ ವ್ಯಕ್ತಿ ಹೆಣ್ಣಿರಲಿ ಗಂಡಿರಲಿ ಬಲಭೀಮನೇ ಸರಿ ಆಕೆಯದು ಭೀಮಬಲವೇ ಸರಿ.

ಸಾಧಕಾವಸ್ಥೆಯಲ್ಲಿ " ಎನಗಿಂತ ಕಿರಿಯರಿಲ್ಲ" ಎಂದು ವಿನಯಿಸಿದ ಬಸವಣ್ಣ ಸಿದ್ಧಾವಸ್ಥೆಯಲ್ಲಿ ತನ್ನ ಉಪಾಸ್ಯ ದೈವತವನ್ನು ಕುರಿತು-" ಜಗಕೆ ಬಲ್ಲಿದ ನೀನು. ನಿನಗೆ ಬಲ್ಲಿದ ನಾನು" ಎಂದೂ, " ಜಗವ ಸುತ್ತಿಪ್ಪುದು ನಿನ್ನ ಮಾಯೆ, ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ" ಎಂದೂ ಹೇಳಬಲ್ಲವನಾಗಲಿಲ್ಲವೇ?

ಈ ವಿಧದಲ್ಲಿ ಗರತಿಗೆ ಮನಸ್ತರವನ್ನು ಮೀರಿದ ನಿಲುಮೆ ನೆರೆಮನೆಯಂತೆ ಹತ್ತಿರದ್ದೇ ಆಗಿತ್ತೆಂದು ಅನುಮಾನವಿಲ್ಲದೆ ಹೇಳಬಹುದಾಗಿದೆ.

# ೮ ಪ್ರೇಮ ವಿಕಾಸದ ಪಾಠ

ಶ್ರೀರಾಮತೀರ್ಥ ಸ್ವಾಮಿಗಳು ಹೇಳುವಂತೆ, ಪ್ರೇಮ-ವಿಕಾಸವೇ ಮದುವೆಯ ಉದ್ದೇಶವಾದರೂ ಸಾಧನೆಯಿಲ್ಲದೆ ಅದು ಸಿದ್ಧಿಸದು. "ಹೆಣ್ಣೂ ಮಾಯೆಯಲ್ಲ, ಗಂಡೂ ಮಾಯೆಯಲ್ಲ. ಮನದ ಮುಂದಿನ ಆಶೆಯೇ ಮಾಯೆ. ಎಂದು ಶಿವಶರಣರು ನಿಚ್ಚಳಗೊಳಿಸಿದ್ದಾರೆ. ಬಣ್ಣದ

ದಂಪತಿಗಳು ಪರಸ್ಪರರನ್ನು ಮಾಯೆಯೆಂದು ಬಗೆಯದೆ, ಮನದ ಮುಂದಣ ಆಶೆಯನ್ನು ದಾತಗೊಳಿಸಿಕೊಳ್ಳುವ ಎತ್ತುಗಡೆ ಮನೆತನದಲ್ಲಿ ಮೊಟ್ಟ ಮೊದಲು ನಡೆಯಬೇಕಾಗಿದೆ. ಬಣ್ಣದ ಕೋಣೆಯಲ್ಲಿ ಪಾತ್ರಧಾರಣಮಾಡಿ, ರಂಗಭೂಮಿಗೆ ಬರುವಷ್ಟರಲ್ಲಿ ನಮ್ಮನ್ನು ನಾವು ಮರೆತುಬಿಡುತ್ತೇವೆ. ಮಾತುಕತೆಗಳೂ, ವಿಚಾರ ವಿವೇಚನೆಗಳೂ ಬದಲಾಗಿ ಬಿಡುತ್ತವೆ. ವೇಷಧಾರಿ ಹೆಣ್ಣೂ ಅಲ್ಲ, ಗಂಡೂ ಅಲ್ಲ ಎಂದರೂ ವೇಷದಂತೆ ಭಾಷೆ ನುಡಿಯತೊಡಗುತ್ತದೆ. ತಮಗಿಲ್ಲದ ರೂಪ-ಸೌಂದರ್ಯಗಳನ್ನು ಪರಸ್ಪರರಲ್ಲಿ ಕಂಡು, ಅವು ತನ್ನವಾಗಬೇಕೆಂಬ ಸ್ವಾಭಾವಿಕ ಹಂಬಲವನ್ನು ತಳೆಯುತ್ತವೆ. ಕಣ್ಣು ಅರಳಿದಲ್ಲಿ, ಕಣ್ಣು ಹೊರಳಿದಲ್ಲಿ ಅದನ್ನೇ ಕಾಣಬೇಕೆಂಬ ತವಕವು ತಲೆಯೆತ್ತುತ್ತಲೇ ಇರುತ್ತದೆ.

ಮಡದಿ ತವರಿಗೆ ಹೋದ ಮಾತ್ರಕ್ಕೆ ಗಂಡನಿಗೆ ತಪವಹವುಂಟಾಗುತ್ತದೆ. ಅಂದು ಕೊಳ್ಳುತ್ತಾನೆ– ಅಡಗೀಯ ಮನಿಯಾಗ ಮಡದೀಯ ಸುಳು ವಿಲ್ಲ. ಅಡಗಿ ಬಾಯೀಗಿ ರುಚಿಯಿಲ್ಲ"

ಇತ್ತ ಹೆಂಡತಿಗಾದರೂ ಸಮಾಧಾನವಲ್ಲಿ? ಅಗಲಿಕೆಯು ಆಕೆಯನ್ನೂ ಕಂಗಾಲಗೊಳಿಸುತ್ತದೆ.

**ಕಮಳದ ಹೂನಿನ್ನ ಕಾಣದೆ ಇರಲಾರೆ**
**ಮಲ್ಲೀಗೆ ಮಾಯೆ ಬಿಡಲಾರೆ। ಕೇದಿಗೆ।**
**ಗರಿ ನಿನ್ನ ಅಗಲಿ ಇರಲಾರೆ ॥**

ಅಗಲಿಕೆಯು ದಂಪತಿಗಳಿಗೆ ಕಣ್ಣು ಕಟ್ಟಿದಂತಾಗಿ ಎಲ್ಲೆಲ್ಲಿಯೂ ಏನೆಲ್ಲವೂ ಭಣ ಭಣವೆನಿಸುತ್ತದೆ. ಶಕುಂತಲೆಗೆ ಕಣ್ವಾಶ್ರಮದಲ್ಲಿ ಚಂಡು ಮಲ್ಲಿಗೆಯ ದುಂಡು ಮೊಗ್ಗೆಗಳು ದಂಡೆಗೆ ಸಿಗಲಾರದಂತಾದವೇ ? ಮುಟ್ಟಿದರೆ ಬಾಡುವ ಶಿರಸಲ ಹೂಗಳು ಆಕೆಯ ಕಿವಿಗೆ ಇಲ್ಲದ್ದಾದವೆನ್ನಬೇಕೇ ? ಗೆಳತಿಯರಿದ್ದರು, ಸಂಗಡಿಗರಿದ್ದರು, ಆದರೂ ಆಶ್ರಮದಲ್ಲಿ ಶಕುಂತಲೆಯ ಮನಸ್ಸು ವಿಹ್ವಲಗೊಂಡಿತ್ತು ದುಷ್ಯಂತನಿಲ್ಲದ್ದಕ್ಕೆ. ಅಲ್ಲಿ ದುಷ್ಯಂತನ ಮನಸ್ಸೂ ವಿಹ್ವಲಗೊಂಡಿರಲೇಬೇಕಲ್ಲವೇ ? ನವದಂಪತಿಗಳಿಗೆಲ್ಲ ಈ ಮಾತು ಸಂಪೂರ್ಣವಾಗಿ ಅನ್ವಯಿಸುತ್ತದೆ.

ಹಗಲು ಇರುಳಿನ ಕಡೆಗೆ ಹೊರಟಂತೆ, ಕೂಡಿಕೆಯು ದುಡಿಕೆಯತ್ತ ದಾರಿ ಮಾಡಿಕೊಡುತ್ತದೆ. ಹುಸಿಮುನಿಸಿನಿಂದ ಆರಂಭಗೊಂಡು ಹುಸಿಮುನಿಸಿನ ವರೆಗೆ ಆರೋಹಣ ಅವರೋಹಣಗಳು ನಡೆಯುತ್ತವೆ. "ನೀನು ನಕ್ಕರೊಂದು

ರುಚಿ, ನೀನು ಅತ್ತರೊಂದು ರುಚಿ " ಎಂದು ಮಗುವಿನನ್ನು ಕುರಿತು ನುಡಿಯುವಂತೆ, ನೀನು ಕಚ್ಚಾಡಿದರೊಂದು ರುಚಿ, ನೀನು ಗುದ್ದಾಡಿದರೊಂದು ರುಚಿಯೆಂದು ಬಾಯಿಬಿಚ್ಚಿ ನುಡಿಯದಿದ್ದರೂ, ಅದು ದಂಪತಿಗಳಿಗೆ ಅಪ್ಯಾಯಮಾನವಾಗಿರುತ್ತದೆ. ಅಂತೆಯೇ ಗರತಿ ಹಾಡುತ್ತಾಳೆ ಪ್ರೈಮರೆತು-

" ಗಂಡ ಹೆಂಡಿರ ಜಗಳ ಗಂಧ ತೀಡಿದಂಗ
ನಿಂಗಕ ನೀರು ಎರಧಂಗ । ಹಿರಿಹೊಳೆಯು ।
ಗಂಗಮ್ಮ ಸಾಗಿ ಹರಿಧಂಗ ॥

ಗಂಡಹೆಂಡಿರಲ್ಲಿ ನಡೆಯುವ ಜಗಳವು ಗಂಧ ತೀಡಿದಂತಾಗಿ ಸುವಾಸನೆ ಬೀರತೊಡಗುತ್ತದೆ. ನೀರಿನ ಅಗತ್ಯವಿಲ್ಲೆಂದರೂ ಲಿಂಗಕ್ಕೆ ನೀರೆರೆದದ್ದು ವ್ಯರ್ಥವೂ ಅಲ್ಲ, ಅವ್ಯರ್ಥವೂ ಅಲ್ಲ. ತುಂಬಿದ ಹಿರಿಹೊಳೆಗೆ ಮುಂದೆ ಸಾಗುವುದೇ ಒಂದು ಸಹಜಕ್ರಮವಾಗಿರುತ್ತದೆ. ಬಯ್ದಾಟ, ಹೊಯ್ದಾಟಗಳಲ್ಲಿಯೂ ಲೀಲಾಭಾವವಿದೆ ಸ್ವಾಭಾವಿಕವಾಗಿದೆ. ಅಂತೆಯೇ " ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ " ಎಂಬ ಲೋಕೋಕ್ತಿಯಲ್ಲಿ ಸಂಪೂರ್ಣ ಸತ್ಯವಡಗಿದೆ. ಅದರಲ್ಲಿ ಸಂಪೂರ್ಣ ಸ್ವಾರಸ್ಯವೂ ಅಡಗಿದೆ. ಉಂಡ ಮಲಗುವವರೆಗೆ ದಂಪತಿಗಳಲ್ಲಿ ಕಾಣಿಸಿಕೊಳ್ಳುವ ರೊಚ್ಚು-ಕಿಚ್ಚುಗಳೆಲ್ಲ ಉಂಡುಮಲಗಿದ ಬಳಿಕ, ಕೆಲಹೊತ್ತು ಕಚ್ಚಾಟ-ಗುದ್ದಾಟಗಳ ವಾಸನೆ ಸುಳಿದು; ಬಳಿಕ ಎಲ್ಲವೂ ತಮ್ಮಣಿಗೊಳ್ಳುತ್ತದೆ. ವಾತದೊಂದಿಗೆ ಆವರಣವೂ ತಣ್ಣಗಾಗಿಬಿಡುವುದರಿಂದ ಸುಖನಿದ್ದೆ ಬೆಳೆದು, ಸವಿಕನಸು ಬೀಳುವವು.

ಮಡದಿಯನ್ನು ಬಿಟ್ಟು ಪರನಾಡಿಗೆ ಹೊರಟ ಪತಿರಾಯರ ಅವಸ್ಥೆ ಅಸ್ತವ್ಯಸ್ತತೆಗಳನ್ನು ಕಂಡ ಬಳಗದವರು ತಮ್ಮಲ್ಲೇ ತಾವು ಕೇಳಿಕೊಳ್ಳುವರು;-" ಊರೀಗಿ ಹೋಗವರ ಮಾರ್ಯಾಕ ಬಾಡ್ಯಾವ। ಗೀರಗಂಧ್ಯಾಕಬೆವತಾವ? ಕಾರಣ ತಿಳಿದಿದ್ದೇ ಇದೆ. ಮಡದಿಯನ್ನು ಅಗಲಿ ಪರನಾಡಿಗೆ ಪತಿರಾಯ ಹೊರಟಿದ್ದಾರೆ. ಮಡದಿ ಮಾತ್ರ ಬಾಯಿ ಮುಚ್ಚಿಯೋ ಬಾಯಿ ಬಿಚ್ಚಿಯೋ ಕೇಳಿಕೊಳ್ಳುವಳು-" ಎಂದ ಬರತೀರಿ ನನ್ನ ಗಂಧದ ರತಿಗಾರ? ಎಂದ ಬರತೀರಿ ನನಗ್ಹೇಳ"

ಮಡದಿಯಲ್ಲಿ ತೋರ್ಪಟ್ಟ ತವರ್ಮನೆಯ ಹಂಬಲವನ್ನು ಗಂಡನೆ ಹಿಂಗಿಸಬಲ್ಲನು. ಯಾಕಂದರೆ ಮಡದಿ ಕಂಡು ಹಿಡಿದಂತೆ, ತಾನು ಹಣಚಿ-ಬಟ್ಟು, ಪತಿ ಅವರ ಮೇಲಿರುವ ಕುಂಕುಮ. ಹಣಚಿಬೊಟ್ಟು .ಕುಂಕುಮಗಳ ಹತ್ತಗಡೆ ವಾಸ್ತವಿಕವೂ ಆಗಿದೆ. ಉಚಿತವೂ ಆಗಿದೆ. ಅದು ತಪ್ಪಿದರೆ ತವರಿನ ನೆನಹು ತಾಕಲಾಡುತ್ತದೆ.

**ಹಣಚಿ ಬಟ್ಟನ ವ್ಯಾಲ ಹರಿದಾಡೂ ಕುಂಕುಮ**
**ವಾರೀಗಿ ಪುರುಷ ಇದರೀಗಿ। ಕುಂತರ।**
**ಹೆಚ್ಚಿನ ತವರ ಮರತೇನ॥**

"ಎಲ್ಲೆಲ್ಲಿ ನೋಡಿದರ ಎಲ್ಲಾರು ಇದ್ದಾರೆ. ನಾನು ಮಾತ್ರ ಕಾಣಿ-ಸೋದಿಲ್ಲ! ನಾನಿದ್ದದ್ದೇ ಸುಳ್ಳೇ?" ಎಂದು ಕೇಳಿಕೊಳ್ಳುವುದು ಸಹಜ-ಕ್ರಮ. ನೇರದಾರಿ, ಆದರೆ ಮಡದಿಗನಿಸುತ್ತದೆ "ಎಲ್ಲೆಲ್ಲಿ ನೋಡಿದರ ನಲ್ಲನಂಥವರಿಲ್ಲ." ಅವನನ್ನು ಕಂಡಾಗ ಆವನ ಮುಖದಲ್ಲಿ ಒಡೆದು ಕಾಣಿಸುವಂಥದು-ಹವಳದಂಥ ಹಲ್ಲು. ಅವನ ಸೊಲ್ಲು ಕೇಳಿಬಂದರೆ ಆದೊಂದು ಸಮಾಧಾನದ ಗುಟಿ.

ಕೂಡಿಕೆಯಲ್ಲಿ ಒಂದಾಗಿ ಬೆರೆಯುವ ಸಾಧನೆ ನಡೆದಾಗ ಅದೆಂಥದೋ ವಿರಸವೊಳೆಸಿ ಹಾಲು ಹುಳಚಿಡಹತ್ತುವದು. ಆಗ ದೂಡಿಕೆಯಿಂದ ನೆಮ್ಮದಿಯನ್ನು ಕಾಣಬೇಕೆಂಬ ಆಶೆ ಉತ್ಪನ್ನವಾಗುವದು. "ವಾರೀಗಿ ಪುರುಷರು ಊರೀಗಿ ಹೋದರ । ನಾರಿ ನಿನಕಣ್ಣು ಒಳಹೊರಗ" ಎಂದು ಇನ್ನಾರೋ ಕೇಳುವಂಥ ಪರಿಸ್ಥಿತಿ ಉಂಟಾಗುತ್ತದೆ. ಆದರೊಂದಿಗೆ ಸರಸ ಜೀವನದ ಚಿತ್ರ ಹವ್ವರಾಗಿ ನೆನಹಿನ ತೆರೆಯಲ್ಲಿ ಮೂಡತೊಡಗುತ್ತದೆ.

**ಹಾಸೀಗಿ ಹಾಸೆಂದ ಮಲ್ಲೀಗಿ ಮುಡಿಯಂದ**
**ಬ್ಯಾಸತ್ತರ ಮಡದಿ ಮಲಗೆಂದ। ನನರಾಯ**
**ತನನೋಡಿ ತವರ ಮರಿಯಂದ ॥**

ಪತಿ ಹೇಳಿದ ಮಾತು ಹೊಟ್ಟೆಯೊಳಗಿನ ಹರಳು ಕರಗಿಸುವಂಥವು. ಆದರೆ ಅದಕ್ಕೂ ಮಿಗಿಲಾಗಿ ತವರುಮನೆಯ ನೆನಹು ಮನ-ಬುದ್ಧಿಗಳಿರಡನ್ನೂ ಕರಗಿಸಿ, "ತವರುಮನೆಗೆ ಕಳಿಸಿರಿ; ಅಥವಾ ನಾನೇ ಹೋಗುವೆನು"

ಎಂದು ಛಲಹಿಡಿದಾಗ, ಅದನ್ನು ಬಗೆಹರಿಸಲಿಕ್ಕಾಗದೆ, ಕೈಲಾಗದ್ದು ಮೈಯೆಲ್ಲ ಹರಕೊಳ್ಳುವಂತೆ ಗಂಡನು ಸಿಟ್ಟಿಗೆದ್ದು ಮಡದಿಯನ್ನು ಬಡಿಯುವನು, ಆಕೆ ಬಡಿಸಿಕೊಂಡು ಒಳಗೆ ಹೋಗಿ ಬಿದ್ದುಕೊಳ್ಳುವಳು.

ಮನಸ್ಸು ಹೊಯ್ದಾಡಿ ತಲೆಕಾಯಲು ಸಿಟ್ಟಿನಲ್ಲಿ ಮಡದಿಯನ್ನೇನೋ ಬಡಿಯುವನು. ಆದರೆ ಮರುಕ್ಷಣದಲ್ಲಿ ಕರುಣೆ ಹುಟ್ಟಿಕೊಂಡಾಗ ಅದು ಏನೇನು ಮಾಡಿಸಿತು ತಿಳಿಯೋಣ.

**ಮಡದೀನ ಬಡಿದಾನ ಮನದಾಗ ಮರಗ್ಯಾನ**
**ಒಳಗ್ಹೋಗಿ ಸೆರಗಹಿಡಿಯುತ । ಕೇಳ್ಯಾನ ।**
**ನಾ ಹೆಚ್ಚೋ ನಿನ್ನ ತವರ್‍ಹೆಚ್ಚೋ ॥**

ಆ ಮಾತು ಮಡದಿಯ ಮನಹೊಕ್ಕು, ಮೈಹೊಕ್ಕು ಹೃದಯವನ್ನು ತಟ್ಟಲು, ಆಕೆ ಸಮತೂಕಕ್ಕೆ ಬರುವಳು, ಕರ್ತವ್ಯಕೈಮಾಡಿ ಕರೆದಂತಾಯಿತು, ಎದ್ದಳು.

**ಸಿರಿಗಂಧ ಚಕ್ಕಿಒಡೆದು ನಡೆದು ಒತ್ತಲುತುಂಬಿ**
**ತಿರುಗಾಡಿ ನೀರು ಬೆರಸೇನ । ನನಮುನಿಗಿ**
**ಹಿಡಿಹೊನ್ನು ತರುವ ಹಿರಿಯರಿಗೆ ॥**

ಆಕೆಗೆ, ಒಮ್ಮೆ ಗಂಡನ ಪುಂಡಾಟ ನೆನಪಿಗೆ ಬರುವಂತೆ, ಇನ್ನೊಮ್ಮೆ ಗಂಧದೆಣ್ಣೆ ಹಚ್ಚಿಕೊಂಡು ಗಂಗೆಯಲ್ಲಿ ನಿಂತು ನಗುತ್ತಿರುವದೃಶ್ಯ ನೆನಪಿಗೆ ಬರುವದು. ಅಷ್ಟರಲ್ಲಿ ಬುದ್ಧಿ ಅಡ್ಡಬಂದು ಹೇಳುವುದೇನಂದರೆ-

**ಅರಸ ಒಳ್ಳೆವರಂತ ವಿರಸವಾಡಲಿಬೇಡ**
**ವರುಷದ ಮಾತು ಮನದಾಗ । ಇಟಗೊಂಡು**
**ಹರಸಿಗ್ಹೋದಲ್ಲಿ ತಗದಾರ ॥**

ಮಡದಿ ಮನಸ್ಸಿಗೆ ಹೇಳಿದಳು- ವಿರಸವಾಡಲಿಬೇಡ, ಯಾಕಂದರೆ ಅದು ಮರಣಕ್ಕೆದಾರಿ. ವಿರಸ ಮರಣವಲ್ಲವೇ? "ಸರಸಜನನ ವಿರಸಮರಣ" ಎಂದಿಲ್ಲವೇ ಕವಿವಾಣಿ? ಜೀವನಕ್ಕೆ ಬೇಕಾದುದು ಸಮರಸ. "ಸಮರಸವೇ ಜೀವನ," ವೆನಿಸಿದೆ. ಅತ್ತಿ ಹೂವಿನ ಸೀರೆಯುಟ್ಟು, ಅಚ್ಚೇರಿನ ಮಕಿಯಿಟ್ಟು ನೂರುಮಾತು ಹೇಳಿದರೂ ಫಲವಿಲ್ಲ. ಯಾಕಂದರೆ ಮನೆಪುರುಷರು ಇಚ್ಛೆಯ

ವರಲ್ಲ. ಆದರ ಮನವನ್ನು ಮುಟ್ಟುವ, ಹೃದಯವನ್ನು ತಟ್ಟುವ ಮೃದು-ವಚನಗಳಿಂದ ಸದಾಶಿವನನ್ನು ಒಲಿಸುವುದು ಸಂಗಮವೆನ್ನುವುದು ಆಕೆಗೆ ಕ್ರಮೇಣ ತಿಳಿದುಬರುತ್ತದೆ.

ಕಟ್ಯಾಣಿ ಗುಂಡೀಗಿ ಸಿಟ್ಟುಮಾಡಲಿಬ್ಯಾಡ
ಬಿಟ್ಟು ಬಂದೀದ ಬಳಗೆಲ್ಲ। ಪತಿಪುರುಷ
ಕಟ್ಯಾರ ತವ್ಮ ಪದರಾಗ ॥

ಮನೆತನವು ಲಂಡೋಬಂಡೋ ರಾಜ್ಯವಾದಾಗ, ಪತಿಯು ತಾಯಿ-ತಂದೆಗಳ ಸಂತೋಷಕ್ಕಾಗಿ ಮತ್ತು ಮನೆತನದ ನೆಮ್ಮದಿಗಾಗಿ ಬೇರೊಂದು ಲಗ್ನವಾಗುವ ವಿಚಾರ ನಡೆಸಿದ್ದು, ಮಡದಿಗೆ ಆದರ ಸುಳುಹು ಹೇಗೋ ಹತ್ತುವದು. ಆದರೆ ಅದಕ್ಕಾಗಿ ಬೀದಿಗೆಹೋಗಿ ನಿಲ್ಲುವುದು ಸರಿಯಲ್ಲವೆನಿ-ಸಿತು ಆಕೆಗೆ. ಏನು ಮಾಡಿದಳು ಮುಂದಿನ ಯುಕ್ತಿ?

ರಾಯಬರತಾರಂತ ರಾತ್ರೀಲಿ ನೀರಿಟ್ಟ
ರನ್ನ ಬಚ್ಚಲಕ ಮಣಿಹಾಕಿ। ಕೇಳೀಸ।
ಸಣ್ಣವಳ ಮ್ಯಾಲ ಸವತ್ಯಾಕ ॥

ತಾನಿನ್ನೂ ಸಣ್ಣವಳು, ಹಡೆಯುವ ಹಂಗಾಮು ಮೀರಿಲ್ಲ. ಚೆಲು ವಿಕೆಯಲ್ಲಿಯೂ ಕಡಿಮೆಯಿಲ್ಲ. "ಆಳುವವನಿಗೆ ಅರವತ್ತು ಹೆಂಡಿರು" ಎಂದು ಗಂಡಸು ಹೇಳಿಕೊಳ್ಳಬಹುದು. ಆದರೆ ಅದರ ಪರಿಣಾಮದತ್ತ ನೋಡ-ಬೇಡವೇ ?

ಅಂಗೀಯ ಮೇಲಂಗಿ ಛಂದೇನೊನನರಾಯ
ರಂಬಿ ಮ್ಯಾಲ ರಂಬಿ ಕ್ರತಿಕಂಬಿ। ಬಂದರ।
ಛಂದೇನೊ ರಾಯ ಮನಿಯಾಗ ॥

ಬೆಳಗಿನ ಜಾವದಲ್ಲಿ ಆ ಗರತಿ ಬೀಸುಕಲ್ಲಿನ ಮುಂದೆ ಕುಳಿತು ಬೀಸ ತೊಡಗಿದಾಗ ಬೇಡವೆಂದರೂ ಒಂದು ಹಾಡು ಆಕೆಯ ಬಾಯಿಂದ ನುಸುಳು-ವದು. ಸಕ್ಕರೆನಿದ್ರೆಯಲ್ಲಿದ್ದ ಗಂಡನಿಗೆ ಆ ಹಾಡು ಪರ್ಯಾಯವಾಗಿ ನೀತಿ-ಯನ್ನು ಉಸುರಿರಬಹುದು.

ಇಬ್ಬರ್ಹೆಂಡಿರನಾದ ಏಡಿಯ ಮುಳ್ಳಾದ
ಕೋಡಗನಾದ ಕಪಿಯಾದ| ಬಾಲೇರು|
ಮಾಡಿಟ್ಟ ಸಿಂಬಿ ಅರಿವ್ಯಾದ||

ಹೊರಬುದ್ಧಿಗೆ ಬಲಿಯಾದ ಗಂಡನನ್ನು ಸಮುದಾರಿಗೆ ತರುವ ಬಗೆ ಹೇಗೆಂದು ತನ್ನಲ್ಲಿ, ತನ್ನವರಲ್ಲಿ ಚಿಂತಿಸುತ್ತಿರುವಾಗ " ಬಾಯಿಬಿಡಬೇಡ, ಮನ ಹೇಸಿ ಮನಿಗಿ ಬರತಾರ" ಎಂಬ ಸಲಹೆ ಬಂದಿತು.

ಗರತಿಯೆಂದರೆ ಕವಿತೆಕಟ್ಟುವ ಗಾಯಿತ್ರಿಯಿದ್ದಂತೆ, ಕವಿತೆ ಹಾಡುವ ಕವಿಯಿತ್ರಿಯೂ ಆಗಿದ್ದಾಳೆ. ಆಕೆಯ ತಲೆಯಲ್ಲಿ ಕಾವ್ಯವಸ್ತುವಂತೂ ಇದ್ದೇ ಇದೆ, ಅದೇ ಗಂಡನ ಹೊರಬುದ್ಧಿಯ ವಿಷಯ. ಇತ್ತೀಚೆಗೆ ಅವರ ಹಾಸಿಗ-ಗಳೂ ಬೇರೆ ಬೇರೆ ಆಗಿದ್ದವೆಂದು ತೋರುತ್ತದೆ. ವಾಡಿಕೆಯಂತೆ ಬೆಳಗಿನಲ್ಲಿ ಬೀಸುವ ಕಾಯಕವನ್ನು ಆರಂಭಿಸಿದಳು ಗರತಿ. ಅಂದು ಹಾಡುವ ಹಾಡಿನಲ್ಲಿ ತನ್ನ ಹಾಡೇ ಹವಣಿಸಿ ಹಣಕಿಟ್ಟಿತು.

ಹೆರವರ ಹೆಣ್ಣಿಗಾಗಿ ಹೊರಗ ಮಲಗುವ ಜಾಣ
ಗಿಡದ ಮ್ಯಾಲೆರಡು ಗಿಣಿಕೂತು| ನುಡಿದಾವು
ಎರವನ್ನೋ ರಾಯನಿನ ಜೀವ||

ಗಿಳಿಯ ಮಾತು ಕೇಳಿಸಿದ್ದು ಮಡದಿಗೆ. ಆ ಮಾತಿನ ಅರ್ಥವಾ-ದದ್ದು ಗಂಡನಿಗೆ, ಇದೆಲ್ಲ ಪ್ರೇಮವಿಕಾಸದ ಸಾಧನೆಯಲ್ಲಿ ಬರುವ ಒಂದೊಂದು ಪಾಠವಲ್ಲವೇ?

## ೯. ತನ್ನಂತೆ ಪರರ ಬಗೆದಡೆ

"ತನ್ನಂಗ ತನ್ನ ಮಗಳಂಗ ನೋಡಿದವರ ಕಣ್ಣ ಮುಂದಾದ ಕೈಲಾಸ" ಎಂಬ ತ್ರಿಪದಿಯ ಚುಟುಕವನ್ನು ನೋಡಿದರೆ, ಪರರನ್ನು ತನ್ನಂತೆ ಇಲ್ಲವೇ ತನ್ನ ಮಗುವಿನಂತೆ ಬಗೆಯಬೇಕು. ಹಾಗೆ ಮಾಡಿದರೆ ಅದು ಒಂದು ಕೈಲಾಸ ಬಿನ್ನಾಣವೇ ಆಗಿ ಕಂಗೊಳಿಸುತ್ತದೆ. ಮಗಳಂಗ ಎನ್ನುವ ಶಬ್ದದಲ್ಲಿ

ಮಗನಂಗ ಎನ್ನುವ ಅರ್ಥವೂ ಹುದುಗಿಕೊಂಡಿದೆಯೆಂದೇ ಭಾವಿಸಬೇಕು. ತಾನು ಅಂದರೆ ತನ್ನ ಮಗ ಅಥವಾ ಮಗಳು. ತನ್ನಂತೆ ಪರರ ಬಗೆಯುವ ಸಾಧನೆಯಲ್ಲಿ ಇದು ಪ್ರಪ್ರಥಮ ಪಾಠವೆನಿಸುವದಿಲ್ಲವೇ?

ವಧುವರರು ಲಗ್ನಬಂಧನದಿಂದ ಗಂಡ ಹೆಂಡಿರಾಗಿ ಸತಿಪತಿಗಳೆನಿಸಿದರು. ಅದೊಂದು ಪ್ರೇಮದ ವಿಕಾಸವೆಂದು ಹೇಳಿಯಾಗಿದೆ. ಆದರೆ ಅದು ಪರಿಶುದ್ಧಗೊಳ್ಳಬೇಕಾಗಿದೆ. ನಿಷ್ಕಾಮಪ್ರೇಮವೋ ನಿರ್ವ್ಯಾಜ ಪ್ರೇಮವೋ ಆಗಿ ಪರಿಣಮಿಸಬೇಕಾಗಿದೆ. ಅದಕ್ಕೆ ಸಾಧನಕ್ಷೇತ್ರ ಮನೆತನವೇ. ದಾಂಪತ್ಯ ಜೀವನವು ಚಿಗುರಿದಾಗ, ಮಗುವೊಂದು ಮೈದಳೆದು ಉಡಿಗೆ ಬರುತ್ತದೆ. ಆದರಿಂದ ದಂಪತಿಗಳು ತನ್ನಂತೆ ಪರರ ಬಗೆಯುವ ಪಾಠಕಲಿಯಬೇಕಾಗಿದೆ.

ಬಿತ್ತು ಭೂಮಿಗಳ ಸಂಗಳಿಕೆಗೆ ಕಾರಣರಾದ ದಂಪತಿಗಳು ಆ ಮಗುವಿಗೆ ತಾಯಿ ತಂದೆಗಳೆನಿಸುತ್ತಾರೆ. ತಾಯಿಯ ರಕ್ತದಾನದಿಂದ ಮಗು ಮೈದಳೆಯುತ್ತದೆ. ಆ ಮಗು ಮೈದೊಟ್ಟು ಭೂಮಿಗೆ ಅತಿಥಿಯಂತೆ ಬಂದು ಮನೆಯವನೇ ಆಗಿಬಿಡುತ್ತಾನೆ. ಮಗು ಮಾನವನ ತಂದೆಯೆನಿಸುತ್ತಾನೆ. ಆ ಮಗು ಕೇಳಬಲ್ಲದು ತಂದೆಗೆ–ನಾನು ನಿನ್ನ ಮಗುವೋ ಅಥವಾ ನಿನ್ನ–ತಂದೆಯೋ?

ತತ್ತಿ ಹೋಗಿ ಬತ್ತಿಯಾಗುವವರೆಗೆ ತಾಯ ಕಣ್ಣರಿಕೆಯಲ್ಲಿ ಪಾಲನೆ–ಪೋಷಣೆ ನಡೆಯುತ್ತವೆ. ತಾಯ ಎದೆಹಾಲು ಪೋಷಣೆಯನ್ನು ಒದಗಿಸಿದರೆ ಆಕೆಯ ಬಾಯ ಲಾಲಿ ಲಾಲನೆಯನ್ನು ಒದಗಿಸುತ್ತದೆ. ನಿಟಕಣ್ಣೀರಿನ ಎದೆ–ಹಾಲು, ಅಕ್ಕರೆಯನ್ನು ಉಕ್ಕಿಸುವ ಬಾಯಲಾಲಿ ಇವೆರಡೂ ಮಗುವನ್ನು ಇಡಿಯಾಗಿ ಬೆಳೆಸುತ್ತವೆ. ಅವುಗಳಲ್ಲಿ ಆದಾವ ಪೌಷ್ಟಿಕವಿದೆಯೋ ಅದೆಂಥ ಪೌಷ್ಟಿಕವಿದೆಯೋ ದೇವರಿಗೆ ಗೊತ್ತು. ಮಗು ಅಳವ್ಹದೆಂದು ಮೊಲೆಯೂಡಿ–ಸಿದರೂ ಹಸಿವೆಹಿಂಗದಿರಬಹುದು. ಆಗ ಅದು ಹಸಿವೆಗಾಗಿ ಅತ್ತುದಲ್ಲವೆಂದು ತಿಳಿದು, ತಾಯಿ ಲಾಲಿಯನ್ನು ಹಾಡುವಳು. ಒಮ್ಮೊಮ್ಮೆ ಹಾಲಿಗಿಂತ ಲಾಲಿಯೇ ಹೆಚ್ಚಿನ ಪರಿಣಾಮ ಬೀರುವುದನ್ನು ಕಾಣುತ್ತೇವೆ.

ಲಾಲೀಯ ಹಾಡಿದರ ಲಾಲೀಸಿಕೇಳ್ಯಾನ। ಹಾಲ ಹಂಬಲ ಮರೆ-
ತಾನ" ಎಂಬ ಚುಟಿಕೆ ಮತ್ತು "ಜೋಗುಳ ಹಾಡಿದರ ಆಗಳೇ ಕೇಳ್ಯಾನ। ಹಾಲ ಹಂಬಲ ಮರೆತಾನ। ಕಂದಯ್ಯಾಗ। ಜೋಗುಳದಾಗ ಅತಿಮುದ್ದ" ಎಂಬ ತ್ರಿಪದಿ ಏನು ಹೇಳಿಕೊಡುತ್ತದೆ, ಗೊತ್ತೇ? ಲಾಲಿಯು ಹಾಲಿಗಿಂತ ಹೆಚ್ಚಿನ ಪರಿಣಾಮ ಬೀರಬಹುದಾಗಿದೆ. ಹಾಲಿನ ಹಂಬಲವನ್ನು ಹಿಂಗಿಸುವ ಲಾಲಿಯ ಬೆಂಬಲವು ಮಗುವಿನ ಬೇಸರವನ್ನು ಹಿಂಗಿಸುವದು.

ಮಗುವೆಂದರೆ ಅವ್ಯಕ್ತಲೋಕದ ಬಾಲನಟ, ತಾಯ ಹೊಟ್ಟೆಯೇ ಆತನಿಗೆ ಬಣ್ಣದ ಕೋಣೆ, ಅಲ್ಲಿ ವೇಷತೊಟ್ಟು ರಂಗಭೂಮಿಗೆ ಬರುತ್ತಾನೆ. ತಾಯಿ ಹಿಮ್ಮೇಳದ ಹಾಡುಗಾರ್ತಿ; ಪಾತ್ರಕ್ಕೆ ಸಂಗೀತ ಒದಗಿಸುವವಳು. ತಂದೆಯೋ ಕಥೆ ಮುಂದುವರಿಸುವ ಭಾಗವತ. ಆ ಅವ್ಯಕ್ತ ಲೋಕದ ಬಾಲ ನಟನ ರೂಪವನ್ನು ಬಣ್ಣಿಸಲು ತಾಯಿಯೇ ಸಮರ್ಥಳು. ತಾಯಿ ಹಾಡುವ ಕವಿ; ಮಗು ಹಾಡುಕೇಳುವ ಕವಿಕುವರ. ತಂದೆ ಅದನ್ನು ಕಂಡು ತಣಿಯುವ ಕವಿ. ಅದೊಂದು ರಸಿಕ ಹಾಗೂ ಮೂಕಕವಿಗಳ ಕಿರುಮೇಳ.

ಮಗುವಿನ ಮುಖ ಬಂಗಾರದ್ದು, ಅದು ತೆಂಗಿನ ನೀರಿನಿಂದಲೇ ತೊಳೆಯಲು ಅರ್ಹವಾದದ್ದು, ಆ ಕುರಿತು ತಾಯಿ ಹಾಡುವ ಲಾಲಿಯನ್ನು ಯಾರು ಕೇಳಿಲ್ಲ?

ಆಡಿಬಾ ಎನಕಂದಾ ಅಂಗಾಲ ತೊಳದೇನ
ತೆಂಗೀನಕಾಯಿ ತಿಳಿನೀರ। ತಕ್ಕೊಂಡು।
ಭಂಗಾರಮಾರಿ ತೊಳೆದೇನ ॥

ತೊಟ್ಟಿಲಲ್ಲಿ ಮಲಗಿದ ಮಗು ತೊಳೆದ ಮುತ್ತಿನಂತೆ ಕಂಗೊಳಿಸು-ತ್ತದೆ, ನೋಡಿದರೆ ದೃಷ್ಟಿಯಾದೀತು, ದೃಷ್ಟಿತೆಗೆಯಲಿಕ್ಕೆ ಹಿಡಿಮುತ್ತೇ ಬೇಕು.

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ। ಕಂದೈಗ।
ಮುತ್ತೀನ ದೃಷ್ಟಿ ತೆಗೆದೇನ ॥

ಕಸೂತಿ ಹಾಕಿದ ಕರಿಯಂಗಿ ಮೈಯಲ್ಲಿ, ಚಾವುಳ ತಲೆತುಂಬ, ಅಂಗಳದಲ್ಲಾಡುವ ನವಿಲಾಟಕ್ಕಿಂತ ಮಿಗಿಲಾದ ವಿಪರೀತ ಆಟವನ್ನು ರಂಗಯ್ಯ ಪಡಸಾಲೆಯಲ್ಲಿ ಆಡುವನು.

ಕರಿಯಂಗಿ ಕಸೂತಿ ತಲಿತುಂಬ ಜಾವುಳ
ಅಂಗಳದಾಗ ನವಿಲಾಟ । ಅದಕಿಂತ
ರಂಗಯ್ಯನಾಟ ವಿಪರೀತ ॥

ಆ ಕಂದಯ್ಯನನ್ನು ಮಾವನಾದವನು ಬಣ್ಣಿಸಿರುವಬಗೆ ಹೇಗೆಂದರೆ –

ಕಾಡಿಗ್ಹಚ್ಚಿದ ಕಣ್ಣು ತೀಡಿಯಾಡಿದ ಹುಬ್ಬ
ಮಾವೀನಹೋಳು ನಿನಕಣ್ಣು । ಕಂದಯ್ಯ।
ಮಾವಬಣ್ಣಿಸಿ ಕರೆದಾನ ॥

ಮಗುವಿನ ಆಟ-ಮಾಟಗಳನ್ನು ಕಂಡವರು, ಬಗೆದೋರಿದಂತೆ ಬಣ್ಣಿಸುವಲ್ಲಿ ಕವಿಗಳನ್ನು ಕ್ಷಣದ ಮಟ್ಟಿಗೆ ಮೀರಿಸುವರೆಂದೇ ಹೇಳಬೇಕು.

ಕೂಸು ನನಕಂದಯ್ಯ ಕೇಸಬಿಟ್ಟಾಡಾಗ
ದೇಶದಿಂದೆರಡು ಗಿಣಿಬಂದು। ಕೇಳ್ಯಾವ
ಕೂಸ ನೀದಾರ ಮಗನೆಂದು ॥

ಈಸಾಡುವ ಇಳಿಗೂದಲನ್ನು ಹೊತ್ತು ಆಡುವಾಗ, ಅದಾವುದೋ ದೇಶದಿಂದ ಹಾರಿಬಂದ ಗಿಣಿಗಳು ಅಚ್ಚರಿಯಿಂದ ಕೇಳುತ್ತವೆ— ಕೂಸೇ, ನೀನು ದಾರಮಗ- ಎಂದು, ಕಂಡಕಂಡ ಮಗುಗಳಿಗೆ ಕೇಳುವವೇ? ಸಿಕ್ಕಸಿಕ್ಕ ಮಕ್ಕಳಿಗೆ ನುಡಿವಕ್ಕಿಗಳು ನುಡಿಸುವವೇ? ಒಂದು ಸಂದರ್ಭದಲ್ಲಿ ತಾಯಿ ಮಗುವಿನೊಡನೆ ತವರೂರಿಗೆ ಹೋಗಿದ್ದಳು. ದಾರಿಯಲ್ಲಿ ಒಂದು ನವಿಲು ತಲೆಬೇನೆಯಿಂದ ಒರಲುತ್ತಿದ್ದರೂ ಆ ಮಗುವಿನ ಚೆಲ್ವಿಕೆಯನ್ನು ಕಂಡು ನಗತೊಡಗಿತಂತೆ.

ತವರೂರಿಗ್ಹೋದಾಗ ನವಿಲು ಬಣ್ಣದಪಕ್ಷಿ
ತಲಿಬ್ಯಾನಿಯೆದ್ದು ಅಳತಿತ್ತು। ಕಂದನ
ಚೆಲುವೀಕಿ ನೋಡಿ ನಗತಿತ್ತು॥

ಅತ್ತರೆ ಒಬ್ಬನೇ ಅಳಬೇಕಾಗುತ್ತದೆ. ನಕ್ಕರೆ ನಾಲ್ವರು ಜೊತೆಗೂಡುತ್ತಾರೆ ಎನ್ನುವ ಮಾತಿಗಿ ಸಾಕ್ಷಿಯಾಗಿದೆ ಈ ಸಂಗತಿ. ಕಂದನ ಚೆಲುವಿಕೆಯಲ್ಲಿ ಮುಗುಳುನಗೆಯು ಚೆಲ್ಲುವರಿದಿರಲೇ ಬೇಕು. ಅಂತೆಯೋ ಆತನ ಮುಗುಳು ನಗೆಯಲ್ಲಿ ನವಿಲುಪಾಲ್ಗೊಂಡಿತು.ಪರಿಣಾಮವಾಗಿ ತಲೆನೋವಿನ

ಗಸಣೆಯನ್ನು ಕಳಕೊಂಡಿತೇನೋ. ಮುಗುಳುನಗೆಯ ಪರಮಾವಧಿ ಪರಿಣಾಮವನ್ನು ತಿಳಿದನಾಪ್ಪ, ಮಗುವಿನ ಅಳುವಿನ ಅಪರಾವಧಿ ಪರಿಣಾಮ-ವನ್ನೂ ಅರಿತುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಮಗು ಅಳಲು ತೊಡಗಿತೆಂದರೆ ಯಾರು ರಂಬಿಸಿದರೂ, ಹೇಗೆ ರಂಬಿಸಿದರೂ ಪ್ರಯೋಜನವಾಗುವದಿಲ್ಲ. ಆ ಅಳುವಿನ ಅಬ್ಬರ-ಆರ್ಭಟಗಳನ್ನು ಕಂಡು, ಹೋಗಿ ಬರುವವರು, ಸುತ್ತೇಳು ನೆರೆಯವರು ಯಾತಕಳುತಾನೆಂದು ಎಲ್ಲಾರು ಕೇಳ್ಯಾರ ! ಆ ಮಗುವಿಗೆ ಕಾಯದ ಹಾಲಿನ ಕೆನೆ ಬೇಕಂತೆ ! ಹಾಲು ಕಾಯದಿದ್ದರೆ ಕೆನೆ ಬರುವುದೆಂತು? ಹಾಲು ಕಾಯುವವರೆಗೆ ತಡೆಯಲಾಗುವದಿಲ್ಲವೆಂದರೆ, ಹಾಲು ಕಾಸದೆ ಕೆನೆತೆಗೆದುಕೊಡಿರೆನ್ನುವ ಛಲವನ್ನೇ ಬಿಡಲಾಗುವುದಿಲ್ಲವೆಂದರೆ ಗತಿ-ಯೇನು? ಸೂಜಿಯ ಹಿನ್ನೆಯೊಳಗಿಂದ ಆನೆ ಹಾಯಿಸೆನ್ನುವುದೂ, ಮುಗಿಲ ಮೇಲಿನ ಚಂದ್ರನನ್ನು ತಂದು ಕೈಯಲ್ಲಿಡಬೇಕೆಂದು ಕೇಳುವುದೂ ಮಗುಗಳ ವಿಚಿತ್ರ ಹಟಗಳೇ ಆಗಿರುತ್ತವೆ. ಆದರೆ ನಮ್ಮ ನಿಮ್ಮ ಮನೆಯಲ್ಲಿ ಮಕ್ಕಳು ಏನನ್ನು ಬೇಡಿ ಚಂಡಿ ಹಿಡಿಯುವವೋ ಆ ವಿಷಯವನ್ನರಿತರೂ ಪರಮಾಶ್ಚ-ರ್ಯವುಂಟಾಗದಿರದು.

ಮಗುವಿನ ಹಠದ ವೈವಿಧ್ಯಗಳನ್ನು ತಾಯಭಾಷೆಯಲ್ಲಿಯೇ ತಿಳಿಯಬೇಕು

**ಹಾಲಬೇಡಿ ಅತ್ತಾನ ಕೋಲಬೇಡಿ ಕುಣಿದಾನ**
**ಮೊಸರಬೇಡಿ ಕೆಸರ ತುಳಿದಾನ । ಕಂದಯನ**
**ಕುಸರೀನಗೆಜ್ಜೆ ಕೆಸರಾಗಿ ।।**

**ಕಂದನ ಕಿರಿಕಿರಿ ಇಂದೇನು ಹೇಳಲಿ**
**ಬಿಂದೀಗಿಹಾಲು ಸುರುವೆಂದ । ಛಂಜಿಯು**
**ಚಂದ್ರಮನ ತಂದು ನಿಲಿಸೆಂದ ।।**

ಇದೆಲ್ಲ ಮನೆಯಲ್ಲಿ ನಡೆಯಿಸುವ ಹಠಗಳ ಮಾದರಿಯಾಯಿತು, ಮನೆಯಿಂದ ಹೊರಬಿದ್ದ ಮಗನ ತುಂಟತನ, ಕಿಡಿಗೇಡಿತನ, ಜಗಳಗಂಟತನ ಇವುಗಳ ಮಾದರಿಯೇ ಬೇರೆ.

ಒಣ್ಯಾಗ ಅವಚಾರಿ ಮನಿಯಾಗ ರಿಪಿಗೇಡಿ।
ಆಡ ಹೋದಲ್ಲಿ ಕಿಡಿಗೇಡಿ। ಬಾಳಾನ।
ಹ್ಯಾಂಗ ಸಂಬಸಲಿ ಹಡೆದಮ್ಮ॥
ಕಂದವ್ವ ಕಾಡಿದರ ರಿಂದವ್ವ ಮನಿಗೆಲಸ

ಕಂದೆಲ್ಲಿ ಆಡ್ಯಾನ ಕಡಗೆಲ್ಲಿ ಛಲ್ಲ್ಯಾನ
ದುಂಡ ಮುತ್ತೆಲ್ಲಿ ಉದರ್ಯಾವ। ಕಂದನ।
ಬಿಂದೂಲಿ ಕಂಡವರು ಕೊಡಿರವ್ವ॥

ಕಂದಯ್ಯ ಅಳದೀರೊ ಕವಳೀಯ ಹಣ್ಣೀಗಿ
ತುಂಬುಚ್ಚಿ ಬೀಳ್ವ ಮಾಗಿಮಾವ। ನೀಬೇಡಿ।
ಅಳದಿರೋ ರಾಮ ಲಕ್ಷಮಣ॥

ಸಾರಿಸಿದ ಮನಿಯಾಗ ನೀರ್ಯಾರು ಛಲ್ಲ್ಯಾರ
ಪಾರಿವಾಳಾಡಿ ಗಿಣಿಯಾಡಿ। ಹಡೆದವ್ವ
ಮೊಮ್ಮಕ್ಕಳಾಡಿ ಮನಗ್ಯಾರ॥

ಮಗುವಿನ ಹಟದ ವೈವಿಧ್ಯಗಳನ್ನು ಲೆಕ್ಕಿಸದೆ, ಅವುಗಳಿಗಾಗಿ ತಲೆ ಕೆಡಿಸಿಕೊಳ್ಳದೆ, ಮಗು ಸಕ್ಕರೊಂದು ರುಚಿಯನಿಸುವಂತೆ, ಅತ್ತರೂ ಒಂದು ರುಚಿಯೆಂದು ಬಗೆದು, ಭಾವಿಸುವ ತಾಯಿಯ ಸಹನೆ ಇನ್ನಾರಿಗೂ ಬಾರದು. ಆಕೆ ಮಗುವಿನ ಅಳುವಿನಲ್ಲಿಯೂ ಒಂದು ಸೌಂದರ್ಯವನ್ನು ಕಾಣಬಲ್ಲವ-ಳಾಗಿದ್ದಾಳೆ.

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬ ಬೇವಿನೆಸಳಂಗ। ಕಣ್ಣೋಟ।
ಶಿವನ ಕೈಯಲಗ ಹೊಳೆದಂಗ॥

ಇಂಥ ಸೌಂದರ್ಯಾನುಭೂತಿಯ ಸ್ವಭಾವವುಳ್ಳ ತಾಯಿಯ ಸಹ-ನೆಯೂ ಒಮ್ಮೊಮ್ಮೆ ಕವಳಿಸದಿರದು. ತಾಳಬೇಕು, ಅಹುದು. ಆದರೆ ತಾಳ-ಮೇಳ ತಪ್ಪಿದರೆ ತಾನೂ ಕುಳಿತು ಅಳುವುದೇ ದಾರಿಯಾಗುತ್ತದೆ.

ಅತ್ತಾನ ಕಾಡ್ಯಾನ ಮತ್ತೇನು ಬೇಡ್ಯಾನ
ಮೆತ್ತ ಮೆತ್ತನ ಧಿಮಕವ। ಕೊಟ್ಟರ।
ಗಪ್ಪುಚಿಪ್ಪಾಗಿ ಮಲಗ್ಯಾನ।।

ಮಗು ಅಳುಬುರಕ ಇರಬಹುದು. ಹಟಮಾರಿ ಇರಬಹುದು. ಕಿಡಿಗೇಡಿ ಇರಬಹುದು ಜಗಳಗಂಟನಿರಬಹುದು. ಆದರೆ ತಾಯಿ ಅದನ್ನು ಅಲ್ಲಗಳೆಯಬಹುದಾದರೂ ಮಗುವನ್ನು ಒಲ್ಲಗಳೆಯಲಾರಳು.

ಅತ್ತರ ಅಳಲೆವ್ವ ಈ ಕೂಸು ನನಗಿರಲಿ
ಕೆಟ್ಟರ ಕೆಡಲಿ ಮನಿಗೆಲಸ। ಕಂದನಂಥ
ಮಕ್ಕಳಿರಲೆವ್ವ ಮನಿತುಂಬ।।

ಅಳಬುರಕನಾಗಿ ಮನೆಕೆಲಸವನ್ನು ತಡೆಯುವ ಹಾಗೂ ಕೆಡಿಸುವ ಮಗುವಿನ ಉಪಟಳಕ್ಕೆ ತಾಯಿ ಬೇಸತ್ತರೂ, ಈ ಕಂದನಂಥ ಮಕ್ಕಳಿರಲೆವ್ವ ಮನಿತುಂಬ ಎಂದು ಹಾರಯಿಸುತ್ತಾಳೆ. ಮಗುವಿನಿಂದಾದ ಬೇಸರವನ್ನು ಮರುಕ್ಷಣದಲ್ಲಿಯೇ ಮರೆತು, ಏನೆಂದು ಹಾಡಿಕೊಳ್ಳುವಳು ಕೇಳಿರಿ–

ಅಳುಬಂದು ಅತ್ತರಿಯ ಹಸುಬಂದುಂಡರಿಯ
ಎತ್ತಿಕೊಳ್ಳೆಂಬ ಹಟವರಿಯ। ನನ ಕಂದ।
ಅಳದಾತ ಅತ್ತ ಬಗೆಯೇನ।।

ಹೀಗೆ ತಾಯಿಯು ವಿರೋಧ ಪರಸ್ಥಿತಿಯನ್ನೂ, ಪ್ರತಿಪ್ರಸಂಗ-ವನ್ನೂ ಒಳ್ಳೆಯರ್ಥದಲ್ಲಿ ಗ್ರಹಿಸಿ. ತನ್ನಂತೆ ಪರರ ಬಗೆಯುವ ಪಾಠವನ್ನು ಅಭ್ಯಸಿಸುವುದು ಆಕೆಯ ಹಾಡುಗಳಲ್ಲಿ ಕಂಡತೆ, ನಡವಳಿಕೆಯಲ್ಲಿಯೂ ಕಂಡು ಬರುವದು. ಎಷ್ಟಾದರೂ ತಾಯಿ ಜಗಜ್ಜನನಿಯ ಪ್ರತಿನಿಧಿ? ಅಲ್ಲವೇ ನಡೆ-ದಾಡುವ ಭೂಮಿ ಅಲ್ಲವೇ?

## ೧೦ ಅತ್ತೆಮನೆಯ ಅರಸಿ

ಮೊದಲಗಿತ್ತಿಯಾಗಿ ಅತ್ತೆಯ ಮನೆಗೆ ಬಂದ ಸೊಸೆಯೆಂದರೆ ತೊತ್ತಿ-ಗಿಂತ ತೊತ್ತಾದ ಪಡಿದೊತ್ತೇ ಸರಿ. ತವರುಮನೆಯಲ್ಲಿ ತಾಯಿತಂದೆಗಳು ಲೇವಳಮಾಡಿ ಸಲಹಿದ ತನ್ನನ್ನು ಏಳಲ ಮಾಡಿದರೆ ಆಕೆಯ ಜೀವ ತಾಳಿ-

ಕೊಂಡೀತೇ? "ಎಂಥಲ್ಲಿ ಕೊಟ್ರೀ ನಮಪ್ಪ" ಎಂದು ಮನದಲ್ಲಿಯು ಮರ-ಮರ ಮರುಗದೆ ಇರಲಾರಳು, ಬೀಸು ಕಲ್ಲಿನ ಮುಂದೆ ಅಂತಃಸಾಕ್ಷಿಯಾಗಿ ತೋಡಿಕೊಳ್ಳುವ ಹಾಡು ಏನೆಂದರೆ —

ಚಿಂತಾಕು ಇಡಲಿಲ್ಲ ಚಿಂತೆಬಿಟ್ಟಿರಲಿಲ್ಲ
ಎಂಥಲ್ಲಿ ಕೊಟ್ಟಿ ನಮಪ್ಪ । ನಡುಮನಿ
ಜಂತಿ ಜರಿದ್ಹಾಂಗ ಜರದೇನ ॥

ಈ ಸೊಸೆಯು ಹಾಡು ಇನ್ನೂ ಒಳ್ಳೆಯದೆಂದೇ ಹೇಳಬೇಕು. ಕೆಲವೊಂದು ಮೊದಲಗಿತ್ತಿಯರ ಹಾಡು ಇದಕ್ಕಿಂತ ನಿಕೃಷ್ಟವಾಗಿರುವುದುಂಟು. "ಹುಟ್ಟಿದಮನೆ ಹೋಳಿಹುಣ್ಣಿವೆ, ಕೊಟ್ಟಮನೆ ಶಿವರಾತ್ರಿ" ಆಗಿರುವುದುಂಟು. ಅಲ್ಲಿ ಹೊಯ್ಕೊಳ್ಳುವ ಹಬ್ಬ, ಇಲ್ಲಿ ಉಪವಾಸದ ಉತ್ಸವ. ಮನೆಕೆಲಸ ವ್ಯ-ಮುಂದು ಮಾಡುವಷ್ಟು. ಮೇಲೆ ಕೂಲಿಯ ಕೆಲಸಮಾಡಿ ಒಂದಿಷ್ಟು ಗಳಿಸಿ ತರಬೇಕು. ಇಂಥ ಪ್ರಸಂಗದಲ್ಲಿ ತವರು ಮನೆಯನ್ನು ಮರೆವುದೆಂತು? ಇದು ಸಾಕು, ಅದು ಸಾಕುಸಾಕು.

ಈಗೊದಗಿದ ಪರಿಸ್ಥಿತಿ ಒಂದೆ ಬೇಡಬಯಸಿದ್ದೇ ಆಗಿದೆಯೆಂದು ಶ್ರೀಮಾತೆ ಹೇಳುತ್ತಾರೆ. ಆದ್ದರಿಂದ ಈಗಲಾದರೂ ಒಳ್ಳೆಯದನ್ನು ಬೇಡಿ, ಭವಿಷ್ಯದಲ್ಲಿ ಕಲ್ಯಾಣವನ್ನು ಹಾರಯಿಸುವ ಎಚ್ಚರಗೆಡೆ ನಡೆಸಬೇಕು.

ಆಕಳಂಥಾ ಅತ್ತಿ ಗೋಕುಲದಂಥಾ ಮಾವ
ಶ್ರೀಕೃಷ್ಣನಂಥ ಪತಿರಾಯ । ಇದ್ದರ
ಸಾಕೀದ ತವರು ಮರೆತೇನ ॥

ಇದು ಬಹಳ ಉಚ್ಚತರದ ಹಾರಯಿಕೆಯಾಯಿತು. ಗೋಕುಲ ಶ್ರೀಕೃಷ್ಣರಂಥವರ ಸಂಪರ್ಕವೆಂದರೆ ಈ ಸೀಮೆಯದಲ್ಲ. ಗಗನಗೋಪುರವೇ ಆಗಿದೆ. ತನಗೊಪ್ಪುವ ಹಾಗೂ ಸಣ್ಣ ಬಾಯಿಗೆ ದೊಡ್ಡ ತುತ್ತಲ್ಲದ ಪರಿಸರವನ್ನು ಹಾರಯಿಸುವುದು ವಾಸ್ತವಿಕ ಅದು ಕೈಗೆಟಕುವುದು ಅಸಾಧ್ಯವೂ ಅಲ್ಲ, ದುಸ್ಸಾಧ್ಯವೂ ಅಲ್ಲ. ಅಂಥ ಹಾರಯಿಕೆ ಯಾವುದು ಹಾಗಾದರೆ?

ಅರಸು ತೂಕದನಲ್ಲಿ ಗಳಿಸುವ ಮೈದುನ
ನಡಿಸಿಕೊಳುವತ್ತಿ . ಸಿರಿಗಂಗಿ । ಮನಿಯಾಗ
ಬದುಕು ಮಾಡೂದು ಅರಿದೇನ ॥

ಬಯ್ದು ಹೇಳಿದವರು ಬುದ್ಧಿ ಹೇಳಿದರು, ನಕ್ಕು ಹೇಳಿದವರು ಕೆಡಕು ಹೇಳಿದರು. ಅತ್ತೆ, ಗಂಡ ಹಾಗೂ ಭಾವ ಅವರು ಕ್ರಮವಾಗಿ ಹಿರಿಯರು. ಹಿರಿಯರಾಗಿ ಹಿರಿತನದಿಂದ ಪಾಠಕಲಿಸುವಾಗ ಸಿಡಿಪಿಡಿ ಮಾಡಲಿ, ಬಯ್ಯಲಿ, ಒಮ್ಮೊಮ್ಮೆ ಕೈತಪ್ಪಿ ಹೊಡೆಯಲಿ. ಆದರೆ ಗೂಳಿಬಿದ್ದಾಗ ಆಳಿಗೊಂದು ಕಲ್ಲು ಒಗೆದಂತೆ, ಒಂದು ಹೊಲಕ್ಕೆ ಒಂಬತ್ತುನಾಯಿಬಿಟ್ಟಂತೆ ಸಣ್ಣವರೆನ್ನದೆ ದೊಡ್ಡವರೆನ್ನದೆ, ತಿಳಿದೋ ತಿಳಿಯದೆಯೋ ಕೈತೊಳಕೊಂಡು ಬೆನ್ನುಹತ್ತಿದರೆ ಸೊಸೆ ಏನುಮಾಡಬೇಕು? ತವರವರಂತೂ ಕೊಟ್ಟಹೆಣ್ಣು ಕುಲಕ್ಕೆ ಹೊರತು, ಕೊಳ್ಳಿ ಒಲೆಯಲ್ಲೆ ಉರಿಯಬೇಕು – ಎನ್ನುವ ನೀತಿ-ಯನ್ನು ಕಿವಿಮರಕುಟ್ಟುವಂತೆ ಹೆಣ್ಣಿಗೆ ಹೇಳಿದರೆ, "ಕರುಣದಿ ಕಾಯೊ ಗೋಪಾಲಾ । ನಾ । ದುರುಳರ ವಶವಾದೆ ರುಕ್ಮಿಣೀಲೋಲಾ" ಎಂದು ಪ್ರಾರ್ಥಿಸುವುದೇ ದಾರಿ ಆಕೆಗೆ. ರುಕ್ಮಿಣೀಲೋಲನು ಸಕಾಲಕ್ಕೆ ತನ್ನ ನೆರವನ್ನು ಒದಗಿಸದಿದ್ದರೆ, ಆತನ ಬಳಿಗೇ ಹೋಗುವ ಸಿದ್ಧತೆಯನ್ನೇ ಆಕೆ ನಡೆಯಿಸಬೇಕಾಗುತ್ತದೆ. " ದಾರಿಯಾವುದಯ್ಯ ವೈಕುಂಠದ ದಾರಿಯಾವುದಯ್ಯ " ಎಂದು ಕೇಳುವುದು ಯಾರಿಗೆ? ತನಗೆ ಸರಿದೋರಿದ ಇಲ್ಲವೆ ಸಿಕ್ಕದಾರಿಹಿಡಿದು ಸಾಗಬೇಕಲ್ಲವೇ? ಬಾವಿಗೋಕೆರೆಗೋ ಬೀಳಬೇಕು; ಉರಲು ಹಾಕಿಕೊಂಡೋ, ಉಟ್ಟಬಟ್ಟೆಗೆ ಬೆಂಕಿತಗುಲಿಸಿಕೊಂಡೋ ಅಸುನೀಗಬೇಕು. ಅಂಥ ಅಕ್ರಮ ಪ್ರಯತ್ನ ನಡೆಸುವಾಗ ಅಕಸ್ಮಾತ್ ಉಳಿದುಕೊಂಡರೆ? ಅಡಿಗಡಿಗೂ ಸಾವಿನ ಸಂಕಟಕ್ಕೆ ಮೈಯೊಡ್ಡಬೇಕು; ಮನವೊಡ್ಡಬೇಕು. ಸಾವು ಸಹ ಅತ್ತೆಮನೆಯ ಮೇಲುಗಟ್ಟಿದರೆ ಹೆಣ್ಣಿನ ಗತಿಯೇನು?

ಅರಿಕೆಯಿಲ್ಲದ ಅತ್ತೆ. ತಾನೂ ಒಮ್ಮೆ ಆ ಮನೆಗೆ ಸೊಸೆಯಾಗಿಬಂದು ಕಾಲಕ್ರಮೇಣ ಅತ್ತೆಯಾದವಿಷಯ– ಇತಿಹಾಸವನ್ನು ಮರೆತೇ ಬಿಟ್ಟಿರುತ್ತಾಳೆ.

ಮಾತೀಗಿ ಮಲಕಿಲ್ಲ ರೀತೀಗಿ ತೊಡಕಿಲ್ಲ<br>
ಸಾಸೀವಿ ಕಾಳ ಹುಳುಕಿಲ್ಲ । ಅತ್ತೀಗಿ !<br>
ಸೋಸಿ ನಡೆದರೆ ಅರಿಕಿಲ್ಲ ॥

ಈ ಗೋಂದಲದಲ್ಲಿ ಮಾವಯ್ಯನ ಹೆಸರೇ ಬರಲಿಲ್ಲವಲ್ಲ! ದಿವಂಗತನಾಗಿರುವನೋ ಅಂಥ ಪದವನ್ನು ಮನೆಯಲ್ಲಿಯೋ ಪಡೆದಿರುವನೋ ತಿಳಿಯದು. ಮಾವಯ್ಯನ ತರುವಾಯ ಭಾವಯ್ಯ "ತಂದೆಯಡಗಿದ ಬಳಿಕ ನೀನೇ ತಂದೆ" ಅನ್ನಬೇಕಲ್ಲವೇ ಅವನಿಗೆ ಚಿಕ್ಕ ತಮ್ಮಗಳು? ಅವರದೂ ತಮ್ಮನ ಹೇಡತಿಯ ಮೇಲೆ ಟಬರು. ಪತಿಯ ನೆರಳಿನಂತೆ ಅನುಸರಿಸಿ ಬಂದ ಭಾವಯ್ಯನ ಮಡದಿಯ ರೀತಿ, ಭಾವಯ್ಯ ಮಾವಯ್ಯನ ಸ್ಥಾನಕ್ಕೆ ಬಂದವನು ನೆಗೆಣ್ಣಿಯು ಚಿಕ್ಕತ್ತೆ ಅಂದರೆ ಸಹಾಯಕ ಅತ್ತೆಯಾದವಳು. ಅದ್ದರಿಂದ ಸೊಸೆ ಅವರೆಲ್ಲರ ಕಾಟ ಕೀಟಲೆಗಳನ್ನು ಸಹಿಸುವುದಕ್ಕೆ ಅನುಮಾನಿಸಲೇಬಾರದು.

ಭಾವಯ್ಯ ಮುನಿದರ ಬಲಗಾಲ ಹಿಡದೇನ
ಭಾವಯ್ಯನ ಮಡದಿ ನೆಗೆಣ್ಣಿ। ಮುನಿದರ
ಬಾರಕ್ಕನೆಂದು ಕರೆದೇನ॥

ಆ ತರ್ವಾಯ ಬರುವುದು ಪತಿಯ ಅಂದರೆ ಮಾರಾಯರ ಸರತಿ ಅವನನ್ನು ಅನುಸರಿಸಿ ಮೈದುನ ದೊರೆ, ಅವರೆಲ್ಲರ ಎದ್ದಲಗಾಟವನ್ನು ಸೊಸೆತಾಳಿಕೊಳ್ಳುವದೆಂತು? ತಾಳಿಕೊಳ್ಳುವುದೆಂದರೆ ಅದೇ ಆಶ್ಚರ್ಯ. ಆ ಸಂದರ್ಭದ ತಪ್ಪೊಪ್ಪಿಗೆಯೊನ್ನು ಗರತಿ ಬೀಸುಕಲ್ಲಿನ ಸಾಕ್ಷಿಯಾಗಿ ಅಂತರಂಗಕ್ಕೆ ಒಪ್ಪಿಸುತ್ತಾಳೆ.

ಮಾರಾಯರು ಬಯ್ದರ ಬಾರವು ಕಣ್ಣೀರು
ಮಾರಾಯರ ತಮ್ಮ ಮೈದುನ। ಬಯ್ದರ
ಮೋಡಿಲ್ಲದ ಮಳೆಯು ಸುರಿದಂಗ॥

ತಾನು ತನ್ನತ್ತೆಯೊಡನೆ ಸರಿಯಾಗಿ ನಡಕೊಳ್ಳಲಿಲ್ಲವೇ? ಆಕೆಗೆ ಅಪಚಾರವನ್ನೇನಾದರೂ ಮಾಡಿದೆನೇ? ಆ ಪಾಪದ ಫಲವೇ ಇಲ್ಲಿ ನನ್ನನ್ನು ತಿಕ್ಕಿ ಮುಕ್ಕರಿಸುತ್ತಿರುವದೇ-ಎಂದು ಗರತಿ ಅನುತಾಪ ಪಡಬಹುದಾಗಿದೆ. ಅತ್ತಿಗೆಯೆಂದರೆ ಹೆತ್ತಾಯ ಸರಿಯೆಂದು ಭಾವಿಸಿದವಳು ನಾನು. ಮೈದುನನಿಗೆ ನಾನು ಅತ್ತಿಗೆ, ಅವನು ಅತ್ತಿಗೆಯೊಡನೆ ಹೆತ್ತಾಯಿಯಂತೆ ವರ್ತಿಸಬೇಡವೇ? ಆತನ ಅಪರಾದವು ಕ್ಷಮ್ಯವೆನಿಸದು. ಅಂತೆಯೇ ನಾನು ಒಳಗೊಳಗೆ ಕುದಿ-ಕುದಿದು ಬೇಯಬೇಕಾಗಿದೆ.

ಮೈದುನ ಬಯ್ದರ ಹೊಯ್ದು ಹೋಳಿಗೆಯಾದೆ
ಕೊಯ್ದು ಮಲ್ಲಿಗಿ ನೆನೆಯಾದೆ। ಮುತ್ತ್ಯಾದಾಗ।
ಅತ್ತೀಗಿ ಹೆತ್ತಾಯಿ ಸರಿಯೆಂದ॥

ಈ ಎಲ್ಲ ನವಗ್ರಹಗಳೊಡನೆ ಗಂಡನೂ ಪರಮಾಗ್ರಹವಾಗಿ ಕೂರಿ ಕೊಂಡರೆ ಗರತಿಗೆ ಇನ್ನಾವ ದಾರಿ? ಇಷ್ಟಾಗಿಯೂ ಸೇರದ ಗಂಡಯ್ಯನನ್ನು ಏನೆಂದು ಕರೆದಳು ಗೊತ್ತೇ? “ ಬಾರೋ ಗಂಡಯ್ಯ ಮಲಗೋಣ, ಮಂಚದ ಮೇಲೆ ತಾಳೆ ಹೂವಿನ ತಲೆದಿಂಬ” ಉಂಡರುಟ್ಟರೂ ಸೇರದ, ಮಂಚ ಹಾಕಿದರೂ ಸೇರದ ಪತಿರಾಯ ತಾಳೆ ಹೂವಿನ ತಲೆದಿಂಬಕ್ಕೆ ತಲೆಕೊಟ್ಟು ಮಂಚದ ಮೇಲೆ ಪವಡಿಸಲು ಒಲ್ಲೆನ್ನಲಿಲ್ಲ. ಅಂಥ ಸಂದರ್ಭದಲ್ಲಿ ಗರತಿ ಪತಿದೇವನಿಗಾಗಿ ದೇವನಲ್ಲಿ ಮೊರೆಯಿಟ್ಟಿದ್ದೇನೆಂದರೆ–

ಉಂಡರುಟ್ಟರು ಸೇರ ಮಂಡೆ ಬಾಚಿದರು ಸೇರ
ಗಂಡನಲ್ಲ ಕಾಣೋ ದುಸ್ಮಾನ। ಹೊಟ್ಟೀಲಿ
ಕೆಂಡದಂತೆ ಮೂಡೋ ರಘುರಾಮ ॥

ಕೆಂಡದಂತೆ ಮೂಡಿ ಬಂದೇ ರಘುರಾಮ. ಪ್ರತಿ ಪರಶುರಾಮನಂತೆ ತಂದೆಯ ದುಸ್ಮಾನತನದ ತಲೆಯನ್ನು ಕತ್ತರಿಸಿ ಹಾಕಲೆನ್ನುವುದೇ ಆಕೆಯ ಅಭೀಪ್ಸೆ. ಆ ಬಳಿಕ ಗರತಿ ಅತ್ತೆಮನೆಯ ಅರಸಿಯಾಗುವುದಕ್ಕೆ ಸುಗಮದಾರಿಯಾಗುವದು.

## ೧೧ ಸಮರಸದತ್ತ

ಜೀವ ಬೇರೆ, ಜೀವನ ಬೇರೆ. ಜೀವವಿರುವಲ್ಲೆಲ್ಲ ಜೀವನವಿರದು. ಜೀವವೆನ್ನುವುದು ರಸವಿರಸಗಳ ಬೊಗಸೆಯೊಳಗಿಂದ ಹಾಯ್ದು ಸಮರಸದತ್ತ ಸಾಗಬೇಕಾಗಿದೆ ಸಮರಸದ ದಾರಿಯನ್ನು ತಲುಪಿದಾಗ ಜೀವನ ಪ್ರಾರಂಭವಾಗುತ್ತದೆ. ಸಾಮರಸ್ಯವೇ ನಿಜವಾದ ಜೀವನದ ಕುರುಹು.

ಗೃಹಿಣಿಯ-ಕಾರ್ಯಕ್ಷೇತ್ರ ಸೀಮಿತವಾದರೂ ಅದು ಅತ್ಯಂತ ಮಹತ್ತರವಾದದ್ದು. ಮನೆ, ಮಕ್ಕಳು, ಬಳಗ, ನೆರೆಹೊರೆ ಇವುಗಳೊಡನೆ ಸುಸಂಬಂಧ. ಮದುವೆ, ಮುಂಜಿ, ಶೋಭನ, ಕುಪ್ಪಸ ಮಾಡುವುದು, ತೊಟ್ಟಿಲಲ್ಲಿ ಹಾಕುವದು ಮೊದಲಾದವುಗಳನ್ನು ಸುಸಂಬದ್ಧವಾಗಿ ಆಚರಿಸುವುದು. ದೇವರು ದಿಂಡಿರು, ಹರಕೆ ವ್ರತ, ಜಡೆತೆಗೆಯುವುದು, ಮುತ್ತೈದೆಯರನ್ನು ಉಣ್ಣಿಸುವುದು, ಕುಲಗುರುಗಳ ಸೇವೆ, ಅತಿಥಿಗಳ ಸತ್ಕಾರ ಮೊದಲಾದ ಕಾರ್ಯಕ್ರಮಗಳನ್ನು ಮುಂದುವರಿದು ನಿಸ್ತರಿಸುವುದು. ಹಬ್ಬಹುಣ್ಣಿವೆಗಳನ್ನು ಮನೆತನಕ್ಕೆ ಒಪ್ಪುವಂತೆ ಒಪ್ಪುಗೊಳಿಸುವುದು. ಇವೆಲ್ಲ ಗೃಹಿಣಿಯರ ಕುಶಲಕರ್ಮಗಳಾಗಿವೆ. ಕುಶಲಕರ್ಮಗಳೆಲ್ಲ ಅನಿವಾರ್ಯವಾದರೂ ಆರ್ಥಿಕ-ಮುಗ್ಗಟ್ಟಿನಲ್ಲಿ ಹಾಸಿಗೆ ಇದ್ದಷ್ಟು ಕಾಲುಚಾಚುವಂತೆ ಸಲಹೆನೀಡುವುದೂ ಗೃಹಿಣಿಯ ಆದ್ಯಕರ್ತವ್ಯವಾಗಿದೆ.

ತವರುಮನೆಯಲ್ಲಿ ಹಸುಳೆಯಾಗಿರುವಾಗಲೇ ತಾಯಲಾಲಿಯನ್ನೂ ಜೋಗುಳವನ್ನು ಆಲಿಸಿ ಆನಂದಪಟ್ಟವಳು. ಅಜ್ಜಿಯ ಬಳಿಯಲ್ಲಿಕುಳಿತು ಕತೆ ಕತೆ ಕಾರಣಕೇಳಿ ಹಿಗ್ಗಿ ಹೋದವಳು. ಒಗಟು-ಒಡಗತೆಗಳ ಮರ್ಮವನ್ನು ಅರಿತು ಕೇಕೆಹಾಕಿದವಳು. ರಸಿಕತೆಯಿಂದಬೀಗಿ ಮೂಕಕವಿಯಾದವಳು. ಹಾಡುಕೇಳಿ ಹಿಗ್ಗುವವಳು, ಹಾಡುಬರದಿದ್ದರೂ ತರಲತನನ ಗುಣಗುಣಿಸು-ವವಳು. ಹಸುಳೆ ಕೊಡುಗೂಸಾಗಿ, ಮದುವಣಗಿತ್ತಿಯಾಗಿ, ಮೊದಲಗಿತ್ತಿಯಾಗಿ ಅತ್ತೆಯ ಮನೆಸೇರಿ ತಾಯಿಯಾಗುವ ಸಿದ್ಧತೆ ನಡೆಸುತ್ತಾಳೆ. ಹೊದೆದ ಹಚ್ಚಡ-ಪದರು ಮುಖವನ್ನು ಮುಸುಕಿರಲು, ಒಂದೊಂದುಮಾತು ಹೇಳಿನಗುವ ನಗಿಸುವ ಗಂಡನ ಹಲ್ಲುಗಳೇ ಹಚ್ಚಡಪದರೊಳಗಿನ ಬಿಚ್ಚುಮಲ್ಲಿಗೆ. ಅಂಥ ಪರಿ-ಶುಭ್ರಮಲ್ಲಿಗೆಯನ್ನು ತನ್ನಮೇಲೆ ಬಿಚ್ಚಿಯೊಗೆವ ರಾಯರನ್ನುಬಿಟ್ಟು ತವರು ಮನೆಗೆ ಹೇಗೆಬರಲಿ ಎಂದು ಕೇಳುವ ಮಟ್ಟಿಗೆ ಆ ಸರಸಸಂಬಂಧವು ಅಳವಟ್ಟಿರುತ್ತದೆ.

ಗಂಡ ಹೆಂಡಿರಲ್ಲಿ ವಾದ-ಸಂವಾದ ನಡೆದಾಗ ಕೊಂಕುನುಡಿ ಕತ್ತೆತ್ತಿ ಬರುವುದು ಸಹಜಕ್ರಮ, ಕೊಂಕುನುಡಿ ಚೇಳಿನಕೊಂಡೆಯಾಗಗೊಡದೆ, ಅದು ಕಿವಿ ಸೇರಿ ಹೃದಯಕ್ಕಿಳಿವ ಒಂಕು ಕೊಳವೆಯಾಗುವಂತೆ ಎಚ್ಚರ ವಹಿಸುವುದುಒಳ್ಳೆಯದು, ಅದುಉಭಯರಿಗೂ ಕಲ್ಯಾಣಕರವಾದಪಥ್ಯದೂಟ

"ಮಾತು ಮನೆಕೊಂಡಿತು" ಎಂಬ ಲೋಕೋಕ್ತಿಯುಂಟು. "ಮಾತಿಗೆ ಮಾತು ಮಥಿಸಿದರೆ ವಿಧಿಬಂದು ಆತುಕೊಂಡಿಹುದು" ಎಂದು ಸರ್ವಜ್ಞ ಹೇಳುತ್ತಾನೆ. ಇವೆರಡು ಎಚ್ಚರಿಕೆಗಳನ್ನು ಲೆಕ್ಕಿಸದೇ, ಸತಿಪತಿಯರು ಮಾತು ಬೆಳೆಸಿದರೆ ಅಲ್ಲಿ ವಿರಸವುಂಟಾಗುವುದು ನಿಶ್ಚಯ. ಅಂಥ ವಿರಸವು ಸುಳಿಯದಂತೆ ಜೋಕೆಯಾಗಿ, ಮಾತಿಗೊಂದು ಪಡಿಮಾತು ನುಡಿದರೆ ಅದು ಸರಸೋಕ್ತಿಯೆನಿಸುವದು.

ಒಮ್ಮೆ, ಗಂಡಹೆಂಡಿರು ಉಂಡು ಮಲಗಿದರು. ಆದರೆ ಇಬ್ಬರಿಗೂ ನಿದ್ರೆ ಬರಲಿಲ್ಲ. ಅದಕ್ಕೆ ಕಾರಣವನ್ನು ಕೇಳುತ್ತಾನೆ ಗಂಡ. ಹೆಂಡತಿ ಕಾರಣವನ್ನು ಹೇಳುತ್ತಾಳೆ.

ಸರದು ನಾ ಮಲಗಟಗೆ ಸರಗೀಯು ಕೊಂಡ್ಯೊತ್ತಿ
ಕಾಲುಂಗುರೊತ್ತಿ ಬಳಿಯೊತ್ತಿ। ರಾಯರ।
ನತ್ತೊತ್ತಿ ನಿದ್ರಿ ಬಾರದ॥

ರಾಯರು ಬರಿಗೈಬಂಟರೆಂದು ತೋರುತ್ತದೆ. ಸರಗಿ, ಬಳಿ,-ಕಾಲುಂಗರ, ನತ್ತು ಇವುಗಳನ್ನು ಒದಗಿಸಲು ರಾಯರು ಅಸಮರ್ಥರಾಗಿ-ದ್ದರು. "ಒಲುಮೆ ನಮ್ಮ ಬದುಕು" ಎಂಬ ನಿಲುಮೆ ಉಭಯರಿಗೂ ಸಮ್ಮತ-ವಾಗಿತ್ತು. ಆದರೆ ಸತಿಯು ಹಾಸ್ಯಕ್ಕಾಗಿ ಕೊಂಕು ನುಡಿಯಲ್ಲಿ " ಸರಗಿಯು ಕೊಂಡಿ ಒತ್ತಿತ್ತು. ಕಾಲುಂಗುರ ಒತ್ತಿತು, ಬಳೆ ಒತ್ತಿತು, ನತ್ತು ಒತ್ತಿತು. ಆ ಕಾರಣದಿಂದನಿದ್ರೆಬಾರದಾಗಿದೆ." ಎಂದು ಮೆಲ್ಲನೆ ನುಡಿದಳಲ್ಲದೆ, ನಿಮಗೇಕೆ ನಿದ್ರೆಬರಲೊಲ್ಲದು ಏದು ಎಂದು ಕೇಳಿದಳು.

ಸತಿಯಾಡಿದ ಕೊಂಕ ಮಾತಿಗೆ ಸಿಟ್ಟಿಗೇಳದೆ, ಗಂಡನು ಕೊಂಕಿ-ಕೊಂದು ಮರುಕೊಂಕು ನುಡಿಯುತ್ತಾನೆ.-

ಜಾಡಿ ಜಮಖಾನ್ಯೊತ್ತಿ ಕಂಬಳಿಯು ಕರಿಯೊತ್ತಿ
ಉಂಗುರುಹಗೂಣಿ ಖಡೆಯೊತ್ತಿ। ಸತಿಯಳ।
ಮುರುವೊತ್ತಿ ನಿದ್ದೆ ಬಾರದ॥

ಅಳಿಯನಾದವನಿಗೆ ಹೆಂಡತಿಯ ತವರವರು ಹಾಸಿಗೆ ಹೊದಿಕೆ ಎಂದು ಜಾಡಿ-ಜಮಖಾನೆ – ಕಂಬಳಿಗಳನ್ನು ಮತ್ತು ಉಂಗುರ–ಉಡುಗುಣಿ–ಖಡೆ-ಗಳನ್ನು ಕೊಡುವುದು ವಾಡಿಕೆ. ಆದರೆ ಇಲ್ಲಿ ಅಳಿಯನಿಗೆ ಹಾಸಿಗೆ ಹೊದಿಕೆ-ಗಳನ್ನು ಕೊಟ್ಟಿದ್ದರೋ ಇಲ್ಲವೋ! ಕೊಟ್ಟಿದ್ದರೆ ಉತ್ತಮವಾದವುಗಳನ್ನು ಕೊಟ್ಟಿರಲಿಕ್ಕಿಲ್ಲ. ಉಂಗುರ, ಉಡಗುಣಿ, ಖಡೆಗ-ಗಳ ವಿಷಯವೂ ಅಂತೆಯೇ ಎಂದು ತಿಳಿಯೋಣ. ಜಾಡಿ–ಕಂಬಳಿಗಳ ಕರೆ ಹಾಗೂ ಉಂಗುರ–ಕಡಗಗಳ ಏಣು ಒತ್ತಿ ನಿದ್ರೆ ಬಾರದಾಗಿದೆಯೆಂದು ಗಂಡನು ಪ್ರತಿನುಡಿದದ್ದು ಕಲಹಕೋಲಾಹಲಕ್ಕೆ ಕಾರಣವಾಗದೆ, ಸರಸೋಕ್ತಿಗಳಿಗೆ ಕಾರಣವಾದಂತೆ ತೋರುತ್ತದೆ.

ಅಕ್ಕನಾದವಳು ತಮ್ಮನಿಗೆ ಮಗಳನ್ನು ಕೊಟ್ಟು ಲಗ್ನ ಮಾಡಿದ-ಳೆಂದು ಕಾಣುತ್ತದೆ. ಸೊಸೆಯಾದವಳಿಗೆ ಅತ್ತೆಯ ಮನೆಯಾಗಿರದೆ ಅಜ್ಜಿಯ ಮನೆಯೇ ಆಗಿತ್ತು, ಹೊಸನೆಂಟುತನವಲ್ಲ. ಗಂಡ ಅಂದರೆ ಸೋದರಮಾವನು, ಸೋದರ ಸೊಸೆಯೊಂದಿಗೆ ಚಿಕ್ಕಂದಿನಿಂದಲೂ ಸಲಿಗೆಯಿಂದ ಚಕ್ಕಂದವಾ-ಡುತ್ತ ಬಂದವನು. ವಿನೋದವು ತುಸು ಕೈಮೀರಿತೇನೋ, ಸೊಸೆ ಬಾಯಿ-ಪಾಠವಾದರೂ ಮೌನದಿಂದ ಅಳುತ್ತ ಕುಳಿತಳು. ಆಗ ಅಜ್ಜಿ ಕೇಳುತ್ತಾಳೆ ಮಗನಿಗೆ ಅಂದರೆ ಮೊಮ್ಮಗಳ ಗಂಡನಿಗೆ.

**ಮಾತಿನ ಮಡದೀಗಿ ಸೂತಕದ ಗೊಂಬೀಗಿ**
**ಯಾತರಲೆ ಹೊಡದ್ಯೋ ನನತಮ್ಮ! ನಿನ್ನಾಕಿ!**
**ಮಾತಿಲ್ದೆ ಅಳುತ ಕುಂತಾಳೋ||**

ಮಗನ ಅಥವಾ ಮೊಮ್ಮಗಳ ಗಂಡನ ಉತ್ತರ ಹೀಗಿದೆ–

**ಕಾರಿ ಹಣ್ಣಿಲೆ ಹೊಡೆದೆ ಕಮಳದೂಳಿಕೆ ಹೊಡೆದೆ**
**ತ್ವಾಟದಾಗಿರುವ ಗಜಲಿಂಬಿ| ಲ್ಹೊಡೆದರ**
**ನೋಚೀಲಳತಾಳ ಹಡೆದವ್ವ||**

ಮೋಜಿನಿಂದ ಹೊಡೆದ ಪೆಟ್ಟು ಮೋಜಿನಿಂದ ಅಳಹಚ್ಚುತ್ತದೆ. ಕಾಕಿಹಣ್ಣು-ಕಮಲದ ಹೂಗಳಿಂದ ಹೊಡೆದಾಗ ಪರಿಣಾಮ ಬೇರಿದಂತೆ ತೋರುವದಿಲ್ಲ.ಆದರೆ ಗಜಲಿಂಬಿಯಿಂದ ಹೊಡೆದಾಗ ಹತ್ತಿದ ಪೆಟ್ಟು ಅಳುವು ಮಾತ್ರ ತರಿಸಿತಲ್ಲದೆ, ಕವಳು ಹತ್ತಿ ಬೀಳಿಸಲಿಲ್ಲ. ಇದೇ ಪುಣ್ಯ.

ಹಾಗೂ ಉಂಟು, ಹೀಗೂ ಉಂಟು. ಭಿನ್ನವಾದ ಅಭಿರುಚಿಯಿಂದೆ ಲೋಕದಲ್ಲಿ. ಕೆಂಪು-ಕಪ್ಪುಗಳ ಮೇಲು ಕೀಳಾಟ, ಕಪ್ಪಗಿನವರು ಕಾಗದ ಮೇಲೆ ಕೆಂಪಗಿನವರು ಮೊಚ್ಚೆಯ ಮೇಲೆ— ಎನ್ನುವ ಲೋಕೋಕ್ತಿಯಿದೆ. "ಮಾವಿನ ಹಣ್ಣು ಮನಿಯಾಗ ಇಟಗೊಂಡು, ನೇರಲಕ್ಯಾಕ ಮನವಿಟ್ಟಿ" ಎಂದು ಕೇಳಿ-ದವರೂ ಉಂಟು.

**ಕಪ್ಪು ಹೆಂಡತಿಯಂತ ಕರಕರಿ ಮಾಡಬ್ಯಾಡ**
**ನೀರಲದ ಹಣ್ಣು ಬಲುಕಪ್ಪು । ಇದ್ದರು।**
**ತಿಂದು ನೋಡಿದರ ರುಚಿಭಾಳ ॥**

ಎಂಬ ಹಾಡಿಗೆ ಮಾರ್ನುಡಿಗೊಡುವ ಹಾಡು ಯಾವುದೆಂದರೆ—

**ಕೆಂಪು ಹೆಂಡತಿಯೆಂದು ಸಂತೋಷ ಪಡಬ್ಯಾಡ**
**ಅತ್ತಿಯ ಹಣ್ಣು ಅತಿಕೆಂಪು। ಇದ್ದರು।**
**ಒಡೆದು ನೋಡಿದರ ಹುಳಭಾಳ॥**

ಇದು ಹೆಣ್ಣುಮಕ್ಕಳಲ್ಲಿ ಹುದುಗಿರುವ ರಸಿಕತನದ ಮಾದರಿ, ಮೆಚ್ಚಿದ ನಾಯಿಗೆ ಮರಣವೂ ಸುಖವಂತೆ, ಒಬ್ಬರ ಕಣ್ಣಿಗೆ ಕೆಂಪುಹೆಣ್ಣು ಆಕರ್ಷಕ—ವಾದರೆ, ಇನ್ನೊಬ್ಬರ ಕಣ್ಣಿಗೆ ಕರೆಹೆಣ್ಣು ಮನಸೆಳೆಯುವಂಥದು. ಗುಣದೋಷ ಗಳು ಎರಡರಲ್ಲಿಯೂ ಉಂಟು. ಕೆಂಪು ಹೆಣ್ಣಿಗೆ ಮನಸೋತವನಿಗೆ ಆಡಿ-ಸಾಡುವ ರೀತಿ ಹೇಗೆಂದರೆ—

**ಕೆಂಪನ ಹೆಣ್ಣಿಗೆ ಸಂಪೀಗಿ ತೆನಿಯಿಂದ**
**ಅಂತರಲೆ ಬೆಳೆವ ಎಳೆಹುಣಚಿ। ಕಾಯೀಗಿ।**
**ಎಂಥವರು ಬಾಯಿ ಬಿಡತಾರ॥**

ಕಪ್ಪು ಹೆಣ್ಣೆಂಬುದು ಕಂತೆ ಕುಳ್ಳಿರಿಸಿದ ಲೀಗವೆಂದು ಉಪಾಸಿಸು-ವವನನ್ನು ಕುರಿತು ಇನ್ನೊಬ್ಬರು ಇನ್ನೊಂದು ಬಗೆಯಲ್ಲಿ ಆಡಿಸಾಡುತ್ತಾರೆ.

ಕರ್ರನ ಹೆಣ್ಣೇಗಿ ಕಮಳದ ಹೂವೆಂದ
ಕರಲಾಗ ಬೆಳೆವ ಕಡಲಿಯ। ಗಿಡಕಾಗಿ।
ಧೊರಿ ಮಗ ತೇಜಿ ಇಳಿದಾನ॥

ಹಡೆದತಾಯಿ, ಪಡೆದ ಅತ್ತೆ. ತಾಯ ಕರುಳಿನಲ್ಲಿ ಹುದುಗಿರುವ ಜೀವಚೇತನ ಬೇರೆ, ಅತ್ತೆಯ ಹೊಟ್ಟೆಯಲ್ಲಿ ಅಡಗಿರುವ ಭಾವಚೇತನ ಬೇರೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಒಮ್ಮೊಮ್ಮೆ ಆ ನಿಲುವೇ ತಿರುಗು ಮುರಗೂ ಆಗಬಹುದು. ಒಂದಕ್ಕೊಂದು ಹತ್ತಿಕೊಂಡಂತಿದ್ದರೂ ನೆಲ ಮುಗಿಲಗಳ ಅಂತರಕ್ಕೆ ಅಳತೆಯಿಲ್ಲ. ಅದನ್ನು ಕೆಳಗಿನ ಎರಡು ತ್ರಿಪದಿಗಳು ಸ್ಪಷ್ಟಪಡಿಸುತ್ತವೆ.

ಅತ್ತೆ ಸತ್ತರೆ ಸೊಸೆಯು ಏನೆಂದು ಮರಗುವಳು
ಹಿತ್ತಲ ಕದವ ತಡಕೊಂಡು। ನಮ್ಮನೆ।
ಮೃತ್ಯುದೇವತೆಯೆ ತೊಲಗಿತು॥

ತಾಯಿ ಸತ್ತರೆ ಮಗಳು ಏನೆಂದು ಕೊರಗುವಳು
ಬಾಗಿಲ ಕದ ಹಿಡಕೊಂಡು।ನಮ್ಮನೆ।
ಭಾಗ್ಯದೇವತೆಯೇ ನಡೆಯಿತು॥

ಕವಿಯೆನಿಸಿದವನು ಕಾಂತೆಯ ಮಾತಿನಂಥ ಸವಿ ನುಡಿಯನ್ನು ರಚಿಸಿದರೆ, ಕವಿಯನ್ನು ಹಡೆದವಳು ಕಾಂತೆಯ ಮಾತನ್ನೇ ಕವಿತೆಯಾಗಿ ಮಾರ್ಪಡಿಸುವಳು, ತೋರ್ಪಡಿಸುವಳು. ಕೆಳಗೆ ಕಾಣಿಸಿದ ಈ ತ್ರಿಪದಿ ಭಾವಗೀತೆಯೋ ಬೆಡಗಿನ ಬಿನ್ನಾಣವೋ ಅಥವಾ ಅವೆರಡರ ಇಮ್ಮೈಯೋ ತಿಳಿಯುವವರು ವಿರಳ.

ಬಾಯಾಗ ಹಲ್ಲಿಲ್ಲ ಎದಿಮ್ಯಾಲ ಮಲಿಯಿಲ್ಲ
ನೂರೊಂದು ಮಕ್ಕಳ ಹಡೆದೆವ್ವ। ಕಾಳವ್ವ।
ತಿಪ್ಪಿಯ ಕೆದರುತ ಹೊರಟೆವ್ವ॥

ಬಚ್ಚ ಬಾಯಿ, ಒಣಗಿದ ಎದೆ. ಹಡೆದ ಮಕ್ಕಳೋ ನೂರಾರು. ಹೊಟ್ಟೆಯ ಪಾಡಿಗೇನು ದಾರಿ ? ತಿಪ್ಪಿ ಕೆದರಿದಾಗ ಸಿಕ್ಕಿದ್ದೇ ಊಟ. ಹಣ್ಣು ಶರೀರದ ಹಾಗೂ ಬಹುಮಕ್ಕಳಿಗೆ ಜನ್ಮ ಕೊಟ್ಟ ಮುದಿಕೆ ತನ್ನ ಹಾಗೂ ಮಕ್ಕಳ ಹೊಟ್ಟೆಗೆ ಏನು ಹಾಕುವಳು ? ತಿಪ್ಪೆಯಲ್ಲಿ ಚೆಲ್ಲಲ್ಪಾಗಿರುವ ಹಳಸು-ಹೊತ್ತಿಕ ಅನ್ನದ ಚೂರು. ಆ ಮುದುಕಿಯ ಹೆಸರು ಕಾಳವ್ವನಿದ್ದುದನ್ನು ಕೋಳೆವ್ವ ಮಾಡಿದರೆ, ಆ ತ್ರಿಪದಿಯು ವಿಚಿತ್ರವಾದ ಸತ್ಯಚಿತ್ರವಾದ ಬೇರೊಂದು ಅರ್ಥವನ್ನೇ ನೀಡುತ್ತದೆ. ತಿಪ್ಪಿಕೆದರಿ ನೂರಾರು ಮಕ್ಕಳನ್ನು ಸಲಹುವ ಕೋಳೆವ್ವ ಮುಪ್ಪಿನ ಮುದಿಕೆಯಾಗಿದ್ದಾಳೆನ್ನುವುದಕ್ಕೆ ಬಾಯಾಗ ಹಲ್ಲಿಲ್ಲ, ಎದಿಯಾಗ ಮಲಿಯಿಲ್ಲ ಎನ್ನುವುದೇ ಸಾಕ್ಷಿ.

ಒಬ್ಬ ಗೆಳತಿಯ ರೂಪರೇಷೆಗಳನ್ನು ಎಳೆದು ತೋರಿಸುವ ವಿಚಿತ್ರ ರೀತಿಯನ್ನು ಇಲ್ಲಿ ಕಾಣಬಹುದು-

ಮೂಗುತಿ ಮುಂಭಾರ ತುರುಬಿನ ಹಿಂಭಾರ
ಸೇರಿನ ವಂಕಿ ಕೈ ಭಾರ । ನನ ಗೆಳದಿ
ನಾ ಕೊಟ್ಟ ಸೀರಿನಿರಿ ಭಾರ ॥

ಮುಂಭಾರಕ್ಕೆ ಮೂಗುತಿ. ಹಿಂಭಾರಕ್ಕೆ ತುರಬು. ಪ್ರತಿಯೊಂದೂ ತೋಳಿನಲ್ಲಿ ಸೇರು ಸೇರುವಂಕಿ, ಎಡಬಲ ಭಾಗಗಳಲ್ಲಿ ಸಮತೋಲ ಕಾಯ್ದುಕೊಂಡವು. ಇನ್ನು ಗೆಳತಿಕೊಟ್ಟ ಸೀರೆಯ ನಿರಿ ಭಾರವು ಪತ್ತರ ಸಮತೋಲ ಕಾಯ್ದು ಕೊಳ್ಳುವ ಸಲುವಾಗಿ ಎಂಬುದನ್ನು ತುಸು ಯೋಚಿಸಿದರೆ ತಿಳಿಯುವಂತಿದೆ. ನಿತಂಬವೇ ಆ ಹಿಂಭಾಗವಾಗಿರಬಹುದೇ ?

ಹೆಣ್ಣುಮಕ್ಕಳು ತಮ್ಮ ಪ್ರಕೃತಿಗೊಪ್ಪುವ ರೀತಿಯಲ್ಲಿ ರಸಿಕರಾಗಿದ್ದುದ್ದು ಸ್ಪಷ್ಟ. ಅಂತೆಯೋ ಅವರಲ್ಲಿ ಕೆಲಸ ಮಾಡುವ ಹುರುಪು. ಮಕ್ಕಳನ್ನಾಡಿಸುವ ಉತ್ಸಾಹ ಕಂಡು ಬರುತ್ತದೆ. ಕೊಟ್ಟು ಹಿಗ್ಗಬೇಕು. ಕರಕೊಂಡು ತಿನ್ನ ಬೇಕು ಎನ್ನುವ ಸಹಜ ಬುದ್ಧಿ ಹೆಣ್ಣು ಮಕ್ಕಳಲ್ಲಿ ಕಂಡುಬರುವುದಕ್ಕೆ ರಸಿಕತನದಿಂದ ಗಳಿಸಿಕೊಂಡ ಹಾರ್ದಿಕ ವಿಶಾಲಭಾವನೆಯೇ ಕಾರಣವಾಗಿದೆ.

## ೧೨ ಕೊಡಹಾಲಿನಲ್ಲಿ ಹರಳುಪ್ಪು.

ಸಮೃದ್ಧವಾದ ದಾಂಪತ್ಯ ಜೀವನವೊಂದು ಕೊಡ ಹಾಲು ಇದ್ದಂತೆ. ಆ ಹಾಲಿನಲ್ಲಿ ಒಂದೇ ಒಂದು ಉಪ್ಪಿನ ಹರಳು ಬಿದ್ದರೆ, ಅದೆಲ್ಲ ಕೆಟ್ಟು ವಿಷವಾಗುವದು. ದಾಂಪತ್ಯಜೀವನದ ಕೊಡ ಹಾಲು ಕೆಡಿಸುವ ಉಪ್ಪಿನ ಹರಳು ಯಾವುದೆಂದರೆ– ಗಂಡನಲ್ಲಿರುವ ಹೊರಬುದ್ಧಿಯ ಹವ್ಯಾಸ. ಅದು ನಿಜವೋ ಹಾರುಸುದ್ದಿಯೋ–ಎಂಬುದನ್ನು ಗೃಹಿಣಿ ಹಲವು ವಿಧದಲ್ಲಿ ಪರೀಕ್ಷಿಸುವಳು. ದುರ್ವಾಸನೆ ಮೂಗಿಗೆ ಬಡಿಯುವದು. ಗಂಡನನ್ನು ಸರಿದಾರಿಗೆ ತರದೆ ಬಿಡು-ವದಿಲ್ಲವೆಂದು ಹೂಣಿಕೆ ತೊಡುವಳು. ಆ ಹೂಣಿಕೆಯನ್ನು ಕೇಳಿದರೇ ಎದೆ–ನಡುಗುವದು.

ಆರ್ಯಾಣದಡವ್ಯಾಗ ಯಾರಾಣಿ ಕೊಡಲೆವ್ವ
ಸೂರ್ಯ ನಿನ್ನಾಣೆ ಶಿವನಾಣೆ। ಕೊಟ್ಟರ
ಆರ್ಯಾಣ ಗೆದ್ದು ಬರುವೇನ॥

ಅತ್ತೆ, ಮಾವ, ಭಾವ ಮೊದಲು ಮಾಡಿಕೊಂಡು ಮನೆತನವೇ ಸುಖದ ನೆಲೆಯಾಗಿರಲು ಪತಿದೇವನಿಗೆ ಈ ದೆವ್ವ ಹೇಗೆ ಬಡಕೊಂಡಿತು? ಮುಂಜೇಳಗಿನಲ್ಲಿ ದಿನತಪ್ಪದೆ ಹಾರಯಿಸುತ್ತಿದ್ದ ಪವಿತ್ರ ಹಾರಯಿಕೆಗೊಂದು ನುಸಿ ಹಿಡಕೊಂಡಿತೇ? ಎಂದೇನೇನೋ ಯೋಚನೆಯಲ್ಲಿ ತೊಡಗುವಳು.

ಅತ್ತೆ ಅತ್ತೀಕಾಯಿ ಮಾವ ಮಲ್ಲಿಗೆ ಹೂವ
ಭಂಗಾರ ಕೋಲ ಹಿರಿಭಾವ। ನನ ಮನಿಯು।
ಅರಿಸಿಣ ಕೆನೆಯು ಅರಸರು॥

ಎನ್ನುವ ರೀತಿಯಲ್ಲಿ ಕಂಗೊಳಿಸುವ ಚೆಂಗಳಸವೇ ಜೋಲಿಟ್ಟಿತಲ್ಲ ಎಂಬ ಕಳವಳಕ್ಕೀಡಾಗಿದ್ದರೂ ಎದೆಗೆಟ್ಟಿರಲಿಲ್ಲ. ಹಿಂದೊಮ್ಮೆ ತನ್ನ ಔದಾ-ರ್ಯವನ್ನು ಕೊಚ್ಚಿಕೊಳ್ಳುವ ಸಲುವಾಗಿ ಆಡಿದ ಮಾತು ನೆನಪಾದರೆ ಅವಳಿಗೇ ನಾಚಿಕೆಯೆನಿಸುತ್ತಿರಬಹುದು.

ಗಂಡ ಪಂಡಿತರಾಯ ರಂಡೀಯ ಮಾಡಿದರ
ಭಂಡ ಮಾಡವರ ಮಗಳಲ್ಲ। ಕೊರಳಾನ
ಗುಂಡು ಬೇಡಿದರ ಕೊಡುವೆನ॥

"ಅತ್ತೆ ಕಲಿಸಿದ ಕಳವು, ಗಂಡ ಕಲಿಸಿದ ಹಾದರ" ಎನ್ನುವ ಗಾದೆ ವೇದಕ್ಕೆ ಸಮಾನವಾಗಿ ನಿಂತಿರುವಾಗ ಅದನ್ನು ಮಾರ್ಪಡಿಸುವ ಹಾಗೂ ಬೇರ್ಪಡಿಸುವ ಪ್ರಸಂಗ ಬಂದೀತೆ? ರಂಡಿ ಮಾಡುವ ಗಂಡನಿಗೆ ಕೊರಳೊಳಗಿನ ಗುಂಡು ಕೊಟ್ಟು ಉತ್ತೇಜಿಸ ನಿಂತ ಹೆಂಡತಿ ಗಂಡನಿಗೆ ಪರ್ಯಾಯದಿಂದ ಹೊರಬುದ್ಧಿಯನ್ನು ಕಲಿಸಿದಂತಾಗುವದಿಲ್ಲವೇ?

**ಎಲ್ಲಿ ಹೋಗಿದ್ದಿ ನನ್ನ ಮಲ್ಲಿಗೆಂಥರಾಯಾ**
**ಎಲ್ಲಾರು ನನ್ನ ಬಯ್ದಾರು। ಆಕತಿಯ।**
**ನಿಲ್ಲಿಸಿ ಕೇಳು ನಿನ ಕುದರೀಗೆ॥**

ಇದರಲ್ಲಿ ಬರುವ "ಆಕತಿ" ಯಾವುದಿರಬೇಕು? "ಎಲ್ಲಾರು ನನ್ನ ಬಯ್ದಾರು " ಎಂದು ಹೇಳಿಕೊಳ್ಳುವ ಘಟನೆ ಎಂಥದಿರಬೇಕು? ಗಂಡಪಂಡಿತರಾಯನ ಭಂಡಲೀಲೆಯೋ ಇರಬಹುದೆಂದು ಯಾರಿಗಾದರೂ ತೋರುತ್ತದೆ. ಚಂಚಲ ಮನಸ್ಸಿನ ಹೊಂಚಿನ ದೃಷ್ಟಿಯನ್ನು ಗಂಡನಲ್ಲಿ ಎಂದೋ ಕಂಡಿದ್ದಳು ಹೆಂಡತಿ. ಹೆಚ್ಚಾಗಿ ಮನೆಯಲ್ಲಿಯೇ ಮಡಗುವ ಮಡದಿಯಾದರೂ ಹಾರು ಹಕ್ಕಿಯ ಪುಚ್ಚ ಎಣಿಸಬಲ್ಲ ಚಾಣಾಕ್ಷಳಾಗಿರುತ್ತಾಳೆ. ನೀರಲ್ಲಿ ಹರಿದಾಡುವ ಮೀನಿನ ಹೆಜ್ಜೆಯನ್ನು ಗುರುತಿಸಬಲ್ಲ ಚತುರೆಯಾಗಿರುತ್ತಾಳೆ ಆಕೆ.

**ಕಾಗೀಗಿ ಕಣ್ಣಿಟ್ಟ ಕರಿಯ ಹುಬ್ಬಿನ ಜಾಣ**
**ಮಾವಿನ ಹಣ್ಣು ಮನಿಯಾಗ। ಇಟಗೊಂಡು।**
**ನೀರಲಕ್ಯಾಕ ನೆದರಿಟ್ಟ॥**

ಹೇಳಿಕೇಳಿ ಅವನು ಕರಿಯ ಹುಬ್ಬಿನ ಜಾಣ. ಕಾಗಿಗೇ ಕಣ್ಣಿಡತಕ್ಕವನು. ಮಾವಿನ ಹಣ್ಣಿಗಿಂತ ನೀರಲಹಣ್ಣೇ ಅವನಿಗೆ ಆಗಿ ಬರುತ್ತದೆ. ಹೆರವರ ಹೆಣ್ಣಿಗಾಗಿ ಆ ಜಾಣ ಹೊರಗೆ ಮಲಗತೊಡಗಿದಾಗಲೇ ಕೈ ಹಿಡಿದವಳು ಕಳವಳಕ್ಕೀಡಾದಳು. ಅದನ್ನು ಇನ್ನಾರ ಮುಂದೆ ತೋಡಿಕೊಳ್ಳುವುದು ? ನಡೆಪಥದಲ್ಲಿ ತಾಯಿಯೇ ಆಗಿರುವ ಹಿರಿಯಮ್ಮನ ಮುಂದೆ ತನ್ನ ಹೊಟ್ಟೆಯೊಳಗಿನ ಸಂಕಟವನ್ನು ಬಿಚ್ಚಿಡಲು ಆಕೆ ಸಾಂತ್ವನ ಪಡಿಸಿದ್ದು ಹೇಗೆಂದರೆ–

ಪರಿಮಳದರಸರು ಪರನಾರಿಗ್ಹೋದರ
ಮನಿ ಮಡದಿ ಬಾಯಿ ಬಿಡಬ್ಯಾಡ। ತಾವ್ಹವ್ವ
ಮನಹೇಸಿ ಮನಿಗಿ ಬರತಾರ॥

ಪರಿಮಳದರಸರು ಮನಹೇಸಿ ಮನೆಗೆ ಬರುವುದು ನಿಶ್ಚಿತವಾಗಿ ಸಾಧಿಸುವ ವಿಷಯವಲ್ಲ. ನಿರ್ಧನನಾದ ನಂತರ ಜ್ಞಾನ ಬಂದು ಉಪಯೋಗ-ವೇನು? ಹೇಳಿ ಕೇಳಿ ಅದು ಮುಗಿಲಮೇಲಿನ ಚಿಕ್ಕಿ. ರಾತ್ರಿಕಾಲದಲ್ಲಿ ಮೂಡಿದರೆ ಮಾತ್ರ ಕಣ್ಣಿಗೆ ಬೀಳಬಲ್ಲದು. ಹಗಲು ಮೂಡಿ ಪ್ರಯೋಜನವೇನು?

ಮುಗಿಲಮ್ಯಾಲಿನ ಚಿಕ್ಕಿ ಹಗಲು ಮೂಡಿದರೇನ
ಅಗಲಿ ಇರುವವರ ಗೊಡವೇನ। ಮಾಣಿಕ।
ಹಾವಿನ ಬದಿಲಿದ್ದು ಫಲವೇನ।।

ಎಂದು ನಿಟ್ಟುಸಿರಿಡುವಳು. ಮಾಣಿಕವಾದರೇನಾಯಿತು, ಹಾವಿನ ಬಳಿಯಲ್ಲಿದೆಯಲ್ಲ! ಹೊರಬುದ್ಧಿಯ ಸವಿಗಂಡವನು ಸರಿದಾರಿಗೆ ಬರುವುದೇ ದುಸ್ಸಾಧ್ಯ. ಸರಿದಾರಿಗೆ ಬರುವ ಹೊತ್ತಿಗೆ ಇಳಿವಯಸ್ಸಾಗಿರುತ್ತದೆ. ಸಿರಿ-ವಂತನಿಗೆ ನಿರ್ಧನತೆಯುಂಟಾಗಿರುತ್ತದೆ. ಮೈಯಲ್ಲಿ ಹಸಿ, ಕಿಸೆಯಲ್ಲಿ ಬಿಸಿಯಿ-ರುವ ವರೆಗೆ ಸೂಳಿಯ ಸಾನ್ನಿಧ್ಯಕಳಕೊಳ್ಳುವಂತಿಲ್ಲ.

ಸೂಳೀಗಿ ಹೋಗವನ ಸುಲಿದು ಮಟ್ಟೀಕಟ್ಟಿ
ಊರಹೊರಗವನ ಹೆಡಮುರಗಿ। ಕಟ್ಟಿದರ
ಸೂಳೆಂಬ ಶಬ್ದ ಬಿಡುವಲ್ಲ।।

ಹೊರಬುದ್ಧಿಯಲ್ಲಿ ಮೂರು ನಿಲುಮೆಗಳಿರುತ್ತವೆ. ಮೊದಲ ನಿಲುಮೆಯಲ್ಲಿ ಗಂಡಸನೇ ಸೂಳೆಯನ್ನು ಹಿಡಿದಿರುತ್ತಾನೆ. ಆಗ ತಪ್ಪಿಸಿಕೊಳ್ಳಬೇಕೆನ್ನುವ ಬುದ್ಧಿ ಬಂದರೆ ಸಹಜವಾಗಿ ಸಾಧ್ಯವಾಗುತ್ತದೆ. ಯಾಕಂದರೆ ಸೂಳೆಯನ್ನು ಹಿಡಿದವನೇ ಗಂಡಸು. ಹಿಡಿದವನು ಬಿಡುವದು ಸುಲಭ, ಸಹಜ. ಎರಡನೇ ನಿಲುವಿನಲ್ಲಿ ವಿಟನು ಸೂಳೆಯನ್ನೂ, ಸೂಳೆ ವಿಟನನ್ನೂ ಹಿಡಿದಿರುತ್ತಾರೆ. ಆವಾಗ ಬಿಡಿಸಿಕೊಳ್ಳುವುದಕ್ಕೆ ಬಿಗಿಯೆನಿಸುವುದು. ವಿಟ ಬಿಟ್ಟರೂ ಸೂಳೆ ಹಿಡಿದಿರುತ್ತಾಳೆ! ಇನ್ನು ಮೂರನೇ ನಿಲುಮೆಯಲ್ಲಿ ವಿಟನ ಕೈ ಸೋತದ್ದರಿಂದ ಸೂಳೆಯನ್ನು ಬಿಟ್ಟಿರುತ್ತಾನೆ. ಆದರೆ ಸೂಳೆಮಾತ್ರ ಆತನನ್ನು ಗಟ್ಟಿಯಾಗಿ ಹಿಡಿದಿರುತ್ತಾಳೆ. ಆವಾಗ ಗಂಡಸು ಅಲ್ಲಿಂದ ಪಾರಾಗಲಾರನು. ನಿರ್ಜೀವ-ನಿರ್ಧನನಾದಾಗ ಸೂಳೆ ಕೈಬಿಟ್ಟು ಚೆಲ್ಲಿಹಾಕುತ್ತಾಳೆ.

ಅತೃಪ್ತ ಜೀವಿಯಾದ ಗಂಡಸು ಪರಹೆಣ್ಣನ್ನು ದಿಟ್ಟಿಸಿ ನೋಡು-ತ್ತಾನೆ. ಹರಕೊಂಡು ತಿನ್ನುವಂತೆ ಆಶೆ ಬೀರುತ್ತಾನೆ. ಆದರೆ ಫಲವೇನು? ಸೇದಿಭಾವಿನೋಡಿ ನಾಯಿ ಸಂತೋಷ ಪಡುವಂತೆ, ಭಾವಿಯೇನೋ ಕಂಡಿತು. ನಾಯಿಗೆ ನೀರಡಿಕೆ. ಆದರೆ ಅದು ಸೇದಿಭಾವಿ, ಭಾವಿಯ ನೀರು ಕೈಗೆಟಕುವ ಬಗೆ ಹೇಗೆ? ಬಾಯಿಗೆ ಬೀಳುವುದಂತೂ ದೂರವೇ ಉಳಿಯಿತು.

"ನಿನಗಿದ್ದ ದಾರಿ ನನಗಿಲ್ಲವೇ" ಎಂದು ಕೇಳುವ ಹೆಂಡತಿ ಗಂಟು ಬಿದ್ದರೆ, ಗಂಡಯ್ಯನ ಗತಿ ಏನಾದೀತು? ಗಂಡನು ಸೂಳೆಯುಂಗಳದಲ್ಲಿ ಕಾಲ್ಮರೆಯಾಗಿ ಬಿದ್ದರೇನು, ಹೆಂಡತಿಗೆ ಗಂಡನೇ ಅಲ್ಲವೇ? ಅದರಲ್ಲಿಯೂ ಮದುವೆಯ ಗಂಡ. ಅವನ ಪುಣ್ಯದಿಂದ ಗರತಿಯ ಹಣೆ ಕುಂಕುಮ ಕಾಣುವುದು! ಗಲ್ಲ ಅರಿಸಿಣ ಕಾಣುವುದು! ಕೊರಳಲ್ಲಿ ಗುಳ್ಳ, ಕಾಲಲ್ಲಿ ಕಾಲುಂಗುರ ಈ ವೈಭವವನ್ನು ಕಳಕೊಳ್ಳಬೇಕೇ? ಗಂಡನನ್ನು ಕಳಕೊಂಡು ಅಂದರೆ ಸೂಳೆಗೆ ಒತ್ತಿಗೊಟ್ಟು ತಣ್ಣಸಿದ್ದರೆ ಮುತ್ತೈದ್ತನ ಉಳಿಯುವದಿಲ್ಲವೇ? ಅದೇ-ಭಾಗ್ಯ. ಸೌಭಾಗ್ಯ!

ಮದುವೆಯ ಹೆಂಡತಿಯಿದ್ದರೂ, ಆಕೆ ಮಕ್ಕಳ ತಾಯಿಯಾಗಿದ್ದ-ರೂ ಗಂಡನು ಉಡಿಕೆಯಾಗಿ, ಪಳಗಿದ ಹೆಂಗಸನ್ನು ಮನೆಗೆ ತರುತ್ತಾನೆ. ಉಡಕಿಯ ಹೆಂಡತಿ ಉಡಿಯೊಳಗಿನ ಅಂಗವಂತೆ. ಆದರೆ ಕಿರಿಬೆರಳು ಹಿಡಿದ ಮಡದಿಯೊಂದಿಗೆ ಸಿಡಿಪಿಡಿ ಏಕೆ? ಕೈಲಾಗದ್ದು ಮೈ ಪರಚಿಕೊಳ್ಳುವುದಂತೆ. ಸಹನೆಯೆನ್ನುವದು ಹೆಂಗಸಿಗಿರುವ ಇನ್ನೊಂದು ಹೆಸರು. ಆಕೆ ನಡೆದಾಡುವ-ಭೂಮಿಯೆನ್ನುವುದು ಹದಿನಾರಾಣೆ ಸತ್ಯ.

ಮಗನನ್ನು ತಾಯಿಯಿಂದ ಕಸಗೊಂಡು ಸೊಸೆ ಗಂಡನನ್ನಾಗಿಸಿ-ಕೊಳ್ಳುವಂತೆ, ಹೆಂಡತಿಯಿಂದ ಗಂಡನನ್ನು ಅಗಲಿಸಿ ತನ್ನವನನ್ನಾಗಿ ಮಾಡಿ-ಕೊಳ್ಳುತ್ತಾಳೆ ಸೂಳೆ. ತಾಯಿ ಬೊಬ್ಬಿಡುತ್ತಾಳೆ. ಹೆಂಡತಿ ಶಂಖ ಹೊಡಿಯುತ್ತಾಳೆ. ಹೆಂಡತಿಗೆ ಒಬ್ಬ ಗಂಡು ಮಗ ಜೊತೆಯಾಗಿದ್ದರೆ; ಗಂಡನ ಗೊಡವೆಯನ್ನೇ ಬಿಟ್ಟು ಕೊಡುತ್ತಾಳೆ. "ಎಲ್ಲಿ ಹೋಗಿದ್ದಿರಿ ರಾಯ" ಎಂದು ಕೇಳುವುದನ್ನು ಬಿಟ್ಟುಕೊಡುತ್ತಾಳೆ.

ಅರ್ಧರಾತ್ರಿ ಕಳೆದರೂ ಮನೆಗೆ ಬರಲಿಲ್ಲದ ಗಂಡ ಬಂದಾಗ ಹೆಂಡತಿ ಕೇಳುತ್ತಾಳೆ-

**"ನೀವೆಲ್ಲಿ ಹೋಗಿ ಬಂದ್ರಿ? ನೀವೆಲ್ಲಿ ಆಡಿಬಂದ್ರೀ?"**
**"ಬೆಟ್ಟಂಬು ಬ್ಯಾಸಗಿ ತನುಗಾಳಿಗೆ ಹೋಗಿದ್ದೆವು"**
**"ಎದೆಯ ಮೇಲೆ ಎಳೆಚಂದ್ರನಂತೆ ಗಾಯಗೊಂಡಿದೆ. ಅದೆಲ್ಲಿ ಹಾದು ಬಂದ್ರಿ?"**
**"ಬಾಳೆಯ ಬನದಲ್ಲಿ ಹಾದು ಬರುವಾಗ ಬಾಳೆಯ ಗರಿ ತಾಕಿದೆ."**

ಹೀಗೆ ಒಂದು ಸುಳ್ಳನ್ನು ಸತ್ಯಮಾಡಿ ತೋರಿಸುವ ಸಲುವಾಗಿ ನೂರು ಸುಳ್ಳುಗಳ ಶರಬಿ ಸುತ್ತುತ್ತಾನೆ ಗಂಡ. ಒರೆಗೆ ಹಚ್ಚುವ ಸಲುವಾಗಿ ಹೆಂಡತಿ ಪ್ರಶ್ನೆ ಮಾಡುತ್ತಲೆ ಇದ್ದಾಗ, ಗಂಡ ನಿರುತ್ತರನಾಗಿ ಸಿಟ್ಟಿಗೆದ್ದು ಆಣೆ ಮಾಡಲು ಸಿದ್ಧನಾಗುತ್ತಾನೆ.

**ತೋಳುದ್ದ ತಲೆಗಿಂಬು ಮಾರುದ್ದ ಹಾಸೀಗಿ**
**ಮಾಣಿಕದಂಥ ಮಗ ಮುಂದ| ಮಲಗಿದರ**
**ಮಾರಾಯರ ಗೊಡವೆ ನಮಗೇನ||**

ಎನ್ನುವ ನಿಲುಮೆಗೆ ಬಂದ ಹೆಂಡತಿ ಗಂಡನ ಹಾದಿಗೆ ಅಡ್ಡ ಬರದೆ, ತನ್ನ ಮಟ್ಟಿಗೆ ತಾನು ಹಾಯಾಗಿರುತ್ತಾಳೆ. ರಟ್ಟೆಯಲ್ಲಿ ಚಿಂತಾಕು ಇಟ್ಟು-ಕೊಳ್ಳುವ ಶ್ರೀಮಂತಿಕೆ ಇದೆ. ಆರೆಂಟು ಎತ್ತುಗಳ ದೊಡ್ಡ ಕಮಂತವಿದೆ ಮನೆಯಲ್ಲಿ. ಆದರೆ ತನ್ನ ಮನೆಗೆಲಸ ತಾನು ಅಕ್ಕರೆಯಿಂದ ಮಾಡುತ್ತಾಳೆ.- ಎಷ್ಟು ಆಸವಿಸಿಗೊಳ್ಳುವುದಿಲ್ಲ. ಆಕೆ ಆಸರಿಕೆಯನ್ನು ಅಳದಿಟ್ಟು, ಬೇಸರಿಕೆ-ಯನ್ನು ಒಳದಿಟ್ಟು, ಚಿಂತೆಯನ್ನು ಕಾಲಲ್ಲಿ ತುಳದಿಟ್ಟು ನೆಮ್ಮದಿಯಲ್ಲಿರುತ್ತಾಳೆ.

ಅಂಥ ಸಂದರ್ಭದಲ್ಲಿ ಯಾವಳೋ ಹಿತಚಿಂತಕಳು ಒಂದು ಸುದ್ದಿ-ಯನ್ನು ಆಕೆಯ ಕಿವಿಯಲ್ಲಿ ಉಸುರುತ್ತಾಳೆ.-

**ಚಿಂತಾಕು ಇಟಗೊಂಡು ಚಿಪ್ಪಾಟ ಬಳಿಯುವ ಬಾಲಿ**
**ಚಿಂತಿಲ್ಲವೇನು ನಿನಗಿಷ್ಟು| ನಿಮ್ಮರಾಯ|**
**ಅಲ್ಲೊಬ್ಬಳ ಕೂಡ ನಗತಾನೆ||**

ಅದನ್ನು ಕೇಳಿ ಆ ಗರತಿ ಬೆರಗುಬಟ್ಟಳೇ? ಬೇಸರು ಪಟ್ಟಳೇ ? ಕಕ್ಕಾವಿಕ್ಕಿಯಾದಳೇ? ದಿಙ್ಮೂಢಳಾದಳೇ? ಏನೂ ಇಲ್ಲ. ನಗುನಗುತ್ತಲೆ ಸಹ-ಜವಾಗಿ ಮರುನುಡಿದಳು.

ನಕ್ಕರೆ ನಗಲೆವ್ವ ನಗೆಮುಖದ ಕ್ಯಾದಿಗಿ
ನಾ ಮುಚ್ಚಿ ಮುಡಿವ ಪರಿಮಳ| ದಾ ಹೂವ
ಅವಳೊಂದು ಘಳಿಗೆ ಮುಡಿಯಲಿ||

**ಗರತಿಯ ಬಾಳಸಂಹಿತೆ|೫೯**

"ಮೊದಲೇ ನಗೆಮುಖದ ಕೇದಿಗೆ. ಅದು ನಾ ಮುಚ್ಚಿ ಮುಡಿವ ಪರಿಮಳದ ಹೂ. ಪಾಪ ! ಅವಳಿಗೆಲ್ಲಿ ಸಿಗಬೇಕು? ಸಹಜವಾಗಿ ಸಿಕ್ಕಾಗ ಅವಳೊಂದು ಗಳಿಗೆ ಮುಡಿಯಲಿ ಎನ್ನುವ ಸಹಾನುಭೂತಿಯು ನಮ್ಮ ಗರತಿಯಲ್ಲಲ್ಲದೆ ಇನ್ನೆಲ್ಲಿ ಸಿಕ್ಕೀತು? ಜೀವನಸಿದ್ಧಿಯಲ್ಲಿ ಕ್ಷಮೆಯೆನ್ನುವುದೂ ಅದ್ಭುತ-ಸಿದ್ಧಿ. ಅಂಥ ಸಿದ್ಧಿಯನ್ನು ಗರತಿಯು ಅತುಲ ಶ್ರೀಮಂತಿಕೆಯಲ್ಲಿಯೂ ಅಪಾರ ದುಡಿಮೆಯಿಂದ ಸಾಧಿಸಿದಳೆಂದರೆ, ಜೀವನವು ಅವಳ ಪಾಲಿಗೆ ಅದೆಂಥ ಸಹಜಯೋಗ ? ಬಾಳ ಕಡಲು ಬಿಟ್ಟು, ಸನ್ಯಾಸದ ಕಾಡಿನಲ್ಲಿ ಈಸ ಕಲಿಯುವ ಎತ್ತುಗಡೆ ನಡೆಸದೆ, ಆಕೆ ಗಟ್ಟಿಜೀವ ಮಾಡಿ ಜೀವನದ ಮಡುವಿನಲ್ಲಿಯೇ ಧುಮಕಿ ಮುಳುಗುತ್ತ ತೇಲುತ್ತ ಈಸ ಕಲಿತವಳು. "ಈಸಬೇಕು ಇದ್ದು ಜೈಸಬೇಕು" ಎಂದು ಪುರಂದರದಾಸರು ಹಾಡಿದರು. ಗರತಿ ಅದನ್ನು ನಡೆದು ತೋರಿಸಿದಳು. ಗೃಹವೆಂಬ ರಂಗಸ್ಥಳದಲ್ಲಿ ಗೃಹಿಣಿ ಸಾಧಿಸಿ ಗಳಿಸಿದ ಜ್ಞಾನವನ್ನು ತ್ರಿಪದಿಯಲ್ಲಿ ಹಾಡಿ ಹಾಡಿ, ಗೃಹಿಣೀ ಗೀತವನ್ನು ಸ್ತ್ರೀ ಜಾತಿಗೇ ಹೇಳಿಕೊಟ್ಟಳು. ಬರೆದಿಟ್ಟ ಗ್ರಂಥವಲ್ಲವಾದರೂ ಅದು ಆಕಾಶದಡವಿಯಲ್ಲಿ ಪ್ರತಿ-ಧ್ವನಿಸುತ್ತಲೇ ಇದೆ.

## ೧೩ ತನ್ನಂಗ ನೋಡಿದರೆ

"ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ" ಎಂದು ಗರತಿ ಹಾಡಿದರೆ "ತನ್ನಂತೆ ಬಗೆದೆಡೆ ಕೈಲಾಸ ಬಿನ್ನಾಣವಕ್ಕು" ಎಂದು ಸರ್ವಜ್ಞ ಹಾಡುತ್ತಾನೆ. ಆ ಎರಡೂ ಹಾಡುಗಳ ಪೂರ್ತಿ ಪಾಠ ಒಂದೇ ಆಗಿದೆ. ಕಣ್ಣ ಮುಂದಾದ ಕೈಲಾಸ-ಎಂದು ಗರತಿ ಸ್ಪಷ್ಟ ಪಡಿಸುವಂತೆ, ಕೈಲಾಸ ಬಿನ್ನಾಣವಕ್ಕು-ಎಂದು ಸರ್ವಜ್ಞ ನಿಚ್ಚಳಗೊಳಿಸುತ್ತಾನೆ.

ತನ್ನಂಗ ನೋಡುವುದು ಸುಲಭವೆಂದು ತಿಳಿಯಲಾಗದು. ತನ್ನನ್ನೇ ಸರಿಯಾಗಿ ನೋಡಿಕೊಳ್ಳಲಾರದವನು, ತನ್ನಂತೆ ಪರರ ಬಗೆದರೆ ಏನು

ಪ್ರಯೋಜನ? " ಹಿಗ್ಗುವ ಮುಗ್ಗುವ ನೆಗ್ಗುವ ತಗ್ಗುವ, ಅಗ್ನಿಯೊಳಗೆ ದಗ್ಧವಾಗುವ ದೇಹಕೆ ಹಿಗ್ಗುವಿಯಾಕೋ " ಎಂದು ದಾಸರು ಕೇಳಿದ್ದು ನಿಜ. ಆದರೆ ಯಾವ ಪ್ರಸಂಗದಲ್ಲಿ, ಏತಕ್ಕಾಗಿ ಹಾಗೆ ಕೇಳಿದರೋ ತಿಳಿಯದು. ತನ್ನ ದೇಹವನ್ನೇ ಅಸಡ್ಡೆ ಮಾಡಿದವನು ತನ್ನನ್ನೂ ಅಸಡ್ಡೆ ಮಾಡದಿರುವನೇ? ತನ್ನ ಹೊಟ್ಟೆ ಹಸಿದಿಲ್ಲವೆಂದಾಗ, ಅನ್ಯರ ಹೊಟ್ಟೆಗಳೂ ಹಸಿದಿಲ್ಲವೆಂದು ಭಾವಿಸಿ, ಅವರನ್ನು ಉಪವಾಸ ಕೆಡಹುವ ನೀತಿಯು, ತನ್ನಂತೆ ಪರರ ಬಗೆಯುವ ನೀತಿಯಾಗಲಾರದು.

ಯಾರ ಹೊಟ್ಟೆ ಕಡಿದರೆ ಯಾರು ಅಜವಾನ ತಿನ್ನಬೇಕು? ಈ ಲೋಕೋಕ್ತಿಯು ತನಗೆ ಆಡಸಿದ ಆಪತ್ತನ್ನು ತಾನೇ ಭೋಗಿಸಬೇಕಲ್ಲದೆ, ಅನ್ಯರಾರೂ ಅದರಲ್ಲಿ ಪಾಲುಗೊಳ್ಳುವದಿಲ್ಲ– ಎಂಬರ್ಥವನ್ನು ನೀಡುತ್ತ–ದಷ್ಟೇ? ಆದರೆ ಕೂಸಿನ ಹೊಟ್ಟೆ ನೋಯತೊಡಗಿದಾಗ ತಾಯಿಯಾದವಳು ಅಜವಾನ ತಿಂದು, ಅದರ ಕಿವಿಯಲ್ಲಿ ಊದುವದಿಲ್ಲವೇ? ಇನ್ನೊಬ್ಬರಿಗೆ ಆಡಸಿದ ಆಪತ್ತನ್ನು ಯಾವುದೇ ರೀತಿಯಲ್ಲಿ ಹಗುರುಗೊಳಿಸಬಹುದಾಗಿದೆ.

ಕಡಬುಕೊಟ್ಟ ಕಲ್ಲಕ್ಕನಿಗೆ ಮಲ್ಲಕ್ಕನಾಗಿ ದೋಸೆ ಕೊಡುವುದು— ಇದೊಂದು ಮೊದಲ ಪಾಠ. ಕಡಬು ಕೊಡಲಿ ಬಿಡಲಿ ಕಲ್ಲಕ್ಕನಿಗೆ ಕೈಲಾ–ದಷ್ಟು ನೆರವು ನೀಡುವುದು ಮನುಷ್ಯನಾದವನಿಗೆ ಸಹಜಧರ್ಮವಾಗಿದೆ. ತಾನು ಹೊಟ್ಟೆತುಂಬ ಉಂಡಬಳಿಕ ಉಳಿದದ್ದು ನಾಳೆಗಾಗಿ ಇರಲಿ–ಎನ್ನುವುದಕ್ಕಿಂತ ಇನ್ನೊಬ್ಬರಹೊಟ್ಟೆಯುರಿತಣಿಯಲೆನ್ನುವುದು ವಿಶ್ವಾಸಗೊಂಡ ಉದಾರತೆಯೇ ಅಹುದು. ಹೆರವರಿಗೆ ನೆರವು ನೀಡುವ ಶಕ್ತಿ ತನ್ನಲ್ಲಿರದಿದ್ದರೆ ಉಳ್ಳವರಿಗೆ ಹೇಳಿಕೊಡಿಸುವುದು ಸಾಧ್ಯ. ಅದೂ ಹೋಗಲಿ "ಒಳ್ಳೆಯದಾಗಲಿ" ಎಂದು ಬಾಯಿಂದ ಗುಣಗುಣಿಸದಿದ್ದರೂ ಮನಸಿನಲ್ಲಿ ಹಾರಯಿಸುವುದು ಅಸಾಧಾರಣ ಧರ್ಮವೇ ಆಗಿದೆ.

**ಹಸುವಿಗೆ ಹಾಲಕೊಟ್ಟು ಶಿಸುವಿಗಿ ಬೆಣ್ಣಿ ಕೊಟ್ಟು**
**ಬಿಸಲೀಗಿ ನಿಂತವರ ನೆರಳೀಗಿ। ಕರೆದರ।**
**ಅಸನಲ್ಲದ ಪುಣ್ಯ ಮಗನೀಗಿ।।**

ಕೆಲವೊಂದು ಕೊರತೆಗಳನ್ನು ಸ್ವಂತಬುದ್ಧಿಯಿಂದ ನೀಗಿಸಿಕೊಳ್ಳಲು ಸಾಧ್ಯವಿರುತ್ತದೆ. ಇನ್ನು ಕೆಲವು ಕೊರತೆಗಳನ್ನು ಬಳಗದವರಿಂದಲೋ ಸ್ನೇಹಿತರಿಂದಲೋ ಪರಿಹರಿಸಿಕೊಳ್ಳಲಿಕ್ಕಾಗುತ್ತದೆ. ಕೆಲವೊಂದು ಸೌಕರ್ಯಗಳನ್ನು ದೇವನಲ್ಲಿ ಬೇಡಿ ಪಡೆಯಬೇಕಾಗುತ್ತದೆ. ಬಿಕನಾಸಿ ಕಂಗಾಲರಿಗೆ ಬೇಡುವುದನ್ನು ಬಿಟ್ಟು, ಕೊಡುವ ದೇವದಾನಿಗೆ ಬೇಡಿಕೊಳ್ಳುವುದು ಉತ್ತಮವಾದ ಹಾಗೂ ಸಾರ್ಥಕಕರವಾದ ಉಪಾಯವಾಗಿದೆ. ಅದೊಂದು ಬಡವರಿಗೆ ರಾಜ-ಮಾರ್ಗವೇ. ಯಾರಿಲ್ಲದವರಿಗೆ ನೀನೇ ಶಿವಾ ಎಂದು ಹೇಳುವುದು ಅರ್ಥಪೂರ್ಣವಾಗಿದೆ.

ಕೂಡಲ ಸಂಗಯ್ಯ ನೀಡು ಮಕ್ಕಳ ನನಗ
ನನಗಿಲ್ಲ ನನ್ನ ಗೆಳತಿಗೆ।ಕೊಟ್ಟರ
ಬಾಗಿಲಿಗೆ ಹೊನ್ನ ಬಡಿಸೇನ॥

ಗೆಳತಿಗಾಗಿ ಪ್ರಾರ್ಥನೆ ಮಾಡುವ ಗೆಳತಿ ದೇವರಿಗೆ ಸಲ್ಲಿಸಬೇಕಾದ ಕೃತಜ್ಞತಾ ಭಾವದ ಕಾಣಿಕೆಯನ್ನು ತಾನು ಒಪ್ಪಿಸುವೆನೆಂದು ಹೇಳುವುದು ಅದೆಂಥ ಸ್ನೇಹ, ಅದೆಂಥ ಭಕ್ತಿ, ಅದೆಂಥ ತ್ಯಾಗ ? ಕೊಟ್ಟಿದ್ದು ತನಗೆ ಎನ್ನುವ ಭಾವ ಆಕೆಯಲ್ಲಿ ಮೈಗೂಡಿ ಮನಗೂಡಿ ಹೋದಂತಿದೆ; ರಕ್ತಗತವಾಗಿಯೂ ಬಿಟ್ಟಂತಿದೆ. ಇದೇ ಮಾದರಿಯ ಔದಾರ್ಯದ ಪ್ರಸಂಗವನ್ನು ಇಲ್ಲಿ ಉದಾಹರಿಸದೆ ಮುಂದುವರಿಯಲಿಕ್ಕಾಗದು.

ಯಾರಾಸಿ ನನಗಿಲ್ಲ ಭಾಗ್ಯದ ಬಲವಿಲ್ಲ
ಕಲ್ಲೊಳ್ಳಿ ಊರ ಕರಿರಂಗ।ವೆಂಕೋಬ
ನಿನ್ನಾಸೆ ನನಗೆ ಅನುಕೂಲ॥

ನಂಬಿದ ದೈವತವು ಕೇಳಿದ್ದನ್ನು ಕೊಡಲು ಒಂಟಿಗಾಲ ಮೇಲೆ ನಿಂತಿರುತ್ತದೆ. ಕೂಡಲೇ ಕೊಡಬಹುದು. ಇಲ್ಲವೆ ತುಸು ತಡೆದು ಕೊಡಬಹುದು. ಆದರೆ ಬೇಡಲಾರೆ ಎನ್ನುವ ಭಕ್ತನಿಗಾಗಿ ಸರ್ವಬಾಗೀನುಗಳು ಸಿದ್ಧವಾಗಿಯೇ ಇರುವವು. ಶ್ರದ್ಧೆಯಲ್ಲಿ ಇನ್ನೂ ಸ್ಥಿರತೆ ಬಾರದಿರುವವರು ಬೇಡಲಾರೆ ಎನ್ನುವ ಧೈರ್ಯ ಮಾಡಲಾರರು. ಅದು ಸಾಮಾನ್ಯರ ತುತ್ತಲ್ಲ ಅಸಾಮಾನ್ಯರ ಗುತ್ತು.

ಸಾವಿರಕ ಸತ್ಯರು ನೂರಕ ಧರ್ಮರು
ಆಗ ಬಿತ್ತ್ಯಾಗ ಬೆಳೆದಾರ ನಮ್ಮವರು
ಬಲವಂತ ಹಾರ ತವರವರು ॥

ತವರವರ ಬಲವಂತಿಕೆ ಬಂಡಾಟಿಕೆಯದಲ್ಲ; ಹಗಲುದರೋಡೆಖೋರತನದ್ದಲ್ಲ. ಆಗ ಬಿತ್ತಿ ಆಗ ಬೆಳೆಯಬಲ್ಲ ಸತ್ಯರ ಹಾಗೂ ಧರ್ಮರ ಬಲವಂತಿಕೆ. ಅದು ಎಲ್ಲರಿಗೂ ಎಟಕುವಂಥದಲ್ಲ. ಸಾವಿರಕೊಬ್ಬರು ಸತ್ಯರು ಸಿಕ್ಕರೆ, ನೂರಕ್ಕೊಬ್ಬರು ಧರ್ಮರು ಸಿಗುತ್ತಾರೆ.

ಕಾಣ್ಕೆಯೆಂದೋ ಆಶೀರ್ವಾದವೆಂದೋ ಐದು ತೆಂಗಿನಕಾಯಿಗಳು ಗರತಿಗೆ ದೊರೆತರೆ ಆಕೆಗೆ ಹಿಗ್ಗೇನೋ ಆಯಿತು. ಆದರೆ ಅದಕ್ಕಿಂತ ಚಿಂತೆ ಹೆಚ್ಚಾಯಿತು. ಏನು ಆ ಚಿಂತೆ? ಆ ಅಯ್ದು ತೆಂಗುಗಳನ್ನು ಯಾರಾರಿಗೆ ಕಳಿಸಬೇಕು? - ಎನ್ನುವುದೇ ಆಕೆಗೆ ತಿಳಿಯದಾಯಿತು. ಯಾಕಂದರೆ, "ನಮ್ಮಮ್ಮನ ಬಳಗವೆಂದರೆ ಹೇರುಬಿಟ್ಟಂತೆ" ತನಗಿರಿಸಿಕೊಳ್ಳದೆ ತೆಂಗುಗಳನ್ನೆಲ್ಲ ಬಳಗಕ್ಕೆ ಹಂಚಿಸಿತ್ತರೆ, ಮೂಸಿನೋಡುವುದಕ್ಕೂ ಸಾಕಾಗುವದಿಲ್ಲ. ಅಷ್ಟೊಂದು-ದೊಡ್ಡ ಬಳಗ!

ತೆರೆದ ಹೃದಯಕ್ಕೆ, ಕೊಡಬೇಕು, ಕೊಟ್ಟು ಸಂತೋಷಪಡಬೇಕು. ಎನ್ನುವುದೇ ಸ್ವಾಭಾವಿಕ ಧರ್ಮ. ಕೊಟ್ಟಿದ್ದು ತನಗೆನ್ನುವ ನಂಬಿಗೆ ಪೂರ್ಣ-ವಾಗಿರುತ್ತದೆ. ಅದು ಸ್ವರ್ಗದ ಬುತ್ತಿಯಾಗುವುದೆಂಬ ಆಶೆಯಿಲ್ಲ; ಉದ್ದೇಶ-ವೂ ಇಲ್ಲ. ಕೊಟ್ಟಿದ್ದು ತನಗೆ ಎಂಬರೆ, ತನಗೆ ತಾನೇ ಕೊಟ್ಟುಕೊಂಡ ಹಾಗೆ.

**ಸೊಲ್ಲಾಪುರದಣ್ಣಗ ನಿಲ್ಲದೆ ಬರಹೇಳ**
**ಸೀರ್ಯೊಲ್ಲ ಅವಸ ಕುಬಸ್ಯೊಲ್ಲ, ಅಣ್ಣನ**
**ಮಾರಿ ನೋಡುವ ಮನವಾಗಿ||**

ಲೌಕಿಕರಿಗೆ ಪರಮಾವಧಿ ಹೆಚ್ಚಿನ ಪ್ರೀತಿಯೆಂದರೆ ಇದೇ ಅಲ್ಲವೇ? ಸೊಲ್ಲಾಪುರದಲ್ಲಿರುವ ಅಣ್ಣನನ್ನು ಬರಹೇಳಿರಿ; ಕೂಡಲೇ ಬರಲಿ. ತಂಗಿಗೆ ಸೀರೆಬೇಕಾಗಿದೆಯೋ ಕುಬಸ ಬೇಕಾಗಿದೆಯೋ ಎನ್ನುವ ಅನುಮಾನವೇ ಬೇಡ. ಅಣ್ಣನ ಮುಖನೋಡುವ ಅಪೇಕ್ಷೆಯಾಗಿದೆ ಅಷ್ಟೇ. ಇಲ್ಲಿ ಪ್ರೀತಿಸುವ ತಂಗಿಯೂ ಧನ್ಯಳು. ಅಂಥ ತಂಗಿಯನ್ನು ಪಡೆದು ಪ್ರೀತಿ ಪಡೆಯುವ ಭಾಗ್ಯ-ವನ್ನೂ ಪಡೆದ ಅಣ್ಣನೂ ಧನ್ಯನು! ಪ್ರೀತಿಯಂಥ ಭಾಗ್ಯ ಈ ಜಗತ್ತಿನಲ್ಲಿ ಇನ್ನೇನಿದೆ? ಜಗತ್ತಿನ ಸಿರಿಯೆಂದರೂ ಸಿಂಗರವೆಂದರೂ ಪ್ರೀತಿಯೇ ಅಹುದು. ಸೌಂದರ್ಯವೆನ್ನುವುದೂ ಆ ಪ್ರೀತಿಯ ಕುರುಹೇ ಆಗಿದೆ.

ಅಕ್ಕತಂಗಿಯರೆಂದರೆ ಆಡಿಗಿರುವ ಜೋಡು ಮೊಲೆಯಂತೆ. ಕಣ್ಣು ಎರಡಿದ್ದರೂ ಕಾಣ್ಕೆ ಒಂದೇ ಇರುವಂತೆ, ಮೊಲೆಯೆರಡಾದರೂ ಹಾಲು ಒಂದೇ. ಅಕ್ಕತಂಗಿಯರೆಂದರೆ ತಂತಮ್ಮ ಗಂಡನ ಮನೆಗೆ ಅಗಲಿ ಹೋಗವ ಹಕ್ಕಿಗಳಿದ್ದಂತೆ. ಕದನವಾಡಿಯೋ ಕಚ್ಚಾಡಿಯೋ ಮುಖಮುರಿಯಿಸುವ-ರೀತಿಯಲ್ಲ. ಅಕ್ಕತಂಗಿಯರು ಎರಡು ಮನೆತನಕ್ಕೆ ಹೊಂದಿಕೊಳ್ಳುವ ಜೀವ-ಗಳು. ಆದರೂ ಜೀವನವು ಬೇರೆ ಬೇರೆ ಅಲ್ಲ, ಒಂದೇ. ಹಕ್ಕಿಗಳಂತೆ ಒಂದರ. ತಲೆಯನ್ನು ಇನ್ನೊಂದು ಕುಕ್ಕಿ ಓಡಿಸುವುದಲ್ಲ; ಓಡಿಹೋಗುವುದೂ ಅಲ್ಲ.

**ಆಡೀನ ಮಲಿಹಾಂಗ ಜೋಡು ನಾವಿಬ್ಬರು**
**ಆಡಬೇಡ ತಂಗಿ ಕದನವ। ಜಗಳಕ**
**ಜೋಡಿನ ಹಕ್ಕಿ ಅಗಲ್ಯಾವ॥**

ಎಂದು ಅಕ್ಕನಾದವಳು ತಂಗಿಗೆ ಹಿತನುಡಿ ಉಸಿರುತ್ತಾಳೆ. ಆ ಮಾತು ತಂಗಿಯ ಎದೆಯಲ್ಲಿ ಅಚ್ಚೊತ್ತುವದು. ಆಗಾಗ ಅದನ್ನು ಓದಿ ಕೊಳ್ಳುವಳು. ಮುಂದೆ ದುರ್ದೈವದಿಂದ ಅಕ್ಕನ ಗಂಡನು ಅಗಲಿ ಶಿವನಡಿ-ಯನ್ನು ಸೇರುವನು. ಅಕ್ಕಮಕ್ಕಳೊಂದಿಗಳು, ಆಕೆಗೊಂದು ಚಿಕ್ಕತೋಟ ಇದೆ. ಅದರಲ್ಲಿ ಮೆಕ್ಕೆಯನ್ನು ಬಿತ್ತಿದ್ದಾಳೆ, ತೀವ್ರ ಕಾಳುಬರಲೆಂದು. ಆದರೆ ಮಳೆರಾಯಂ ಕಣ್ಣುತಪ್ಪಿಸಿ, ತನ್ನಗೆಳದಿಯ ಮನೆಯಲ್ಲಿ ತಂಗಿದನೇನೊ. ಅಕ್ಕನಿಗೆ ಸಹಾಯನೀಡುವಷ್ಟು ಅನುಕೂಲತೆ ತಂಗಿಗೂ ಇರಲಿಲ್ಲ. ಒಣ ಮಾಯೆ, ಮೊಲೆಯಲ್ಲಿ ಹಾಲಿಲ್ಲವೆನ್ನುವಂತಾಗಿದೆ. ಆದರೆ ಮಳೆರಾಜನನ್ನು ಒಲಿಸುವು-ದಕ್ಕೆ ಹದವಾದ ಹೃದಯ ಮಾತ್ರ ಆಕೆಯಲ್ಲಿದೆ. ಪ್ರಾರ್ಥನೆಯೆಂದರೆ ಹೃದ-ಯದ ಕೂಗು, ಅದು ಹುಸಿಹೋಗದ ಬಾಣ; ರಾಮಬಾಣವೇ. ಸಫಲಗೊಳ್ಳದಿದ್ದರೆ ಅದು ಪ್ರಾರ್ಥನೆಯೆ ಅಲ್ಲವೆಂದು ನಿರ್ವಿವಾದವಾಗಿ ಹೇಳಬಹುದು.

**ಅಕ್ಕನ ಊರಾಗ ಮೆಕ್ಕಿಯ ಫಡದಾಗ**
**ಗಕ್ಕನೆ ಬಾರೊ ಮಳೆರಾಜ। ನನ್ನಕ್ಕ।**
**ಮಕ್ಕಳ ತಾಯಿ ಮರಗ್ಯಾಳೋ॥**

ತಾಯಿಯಿದ್ದರೆ ತವರು ಹೆಚ್ಚು; ತಂದೆಯಿಂದ್ದರೆ ಬಳಗ ಹೆಚ್ಚು. ಗೆಳತಿಯೆಂದರೆ ಒಂದು ವಿಧದಲ್ಲಿ ನಡೆಪಥದ ಸಹೋದರಿಯೇ. ನಡೆಪಥಕ್ಕೆ ಕುಲಭೇದವಾಗಲಿ, ಜಾತಿಭೇದವಾಗಲಿ ಇರುವದಿಲ್ಲ, ಹೆರವರಿಗೆ ಹಾಗೆ ಕಾಣಿ-ಸುವುದೂ ಇಲ್ಲ. ಕಳೆಯಿದ್ದರೆ ಗುಣ ಹೊಂದಿಕೆಯಾಗುವುದಲ್ಲದೆ, ದನಿಹೊಂದಿಕೆಯೂ ಆಗುವುದೆಂದರೆ ಆಶ್ಚರ್ಯವಲ್ಲವೇ? ಸಮಾನ ಶೀಲರಾದವರಲ್ಲಿ ಸಖ್ಯವುಂಟಾಗುವುದೆಂದು ಹಿರಿಯರು ಹೇಳುತ್ತ ಬಂದಿದ್ದಾರೆ.

ಮನೆಯ ಮುಂದಿನ ಗೆಳದಿ ದನಿಯ ಕೂಡಿಸಬಾರೆ
ದನಿಸುದ್ದ ನಿನ್ನ ಗುಣಸುದ್ದ। ಗೆಳದೆವ್ವ।
ಗುಣಕ ಕಟ್ಟೇನಿ ಗೆಳತನ॥

ಗೆಳೆತಿಯರ ಬಳಗದಲ್ಲಿ ಅತಿ ಚೆಲುವೆಯಾದ ಆ ಗೆಳದಿಯ ತಲೆ ಕೂದಲು ಜೊಗಚಿಯ ಕ್ರಾಯಂತೆ, ನಿಗುಚಿ ಬೈತಲೆ ತಗೆದಿದ್ದಾಳೆಂದರೆ "ಸಿರಿ-ಗೇನು ಕಡಿಮೆ ಸಿಂಗರಕೇನು ಕಡಿಮೆ ಸೌಂದರ್ಯಕೇನು ಕಡಿಮೆ" ಎನ್ನಬಹುದಾಗಿದೆ. ಅಂಥ ಗೆಳತಿಯನ್ನು ಒಡಗೂಡಿ ನೀರಿಗೆ ಹೋದಾಗ, ಕೂಡಿದವರು ಕುಲಕೇಳುವರು, ಏನು ಹೇಳಬೇಕು?

ನಾನು ನನ್ನ ಗೆಳತಿ ಕೂಡಿ ನೀರಿಗಿ ಹೋಗಿ
ಕುಲವಕೇಳ್ಯಾರ ಬಹುಮಂದಿ। ಕೇಳಿದರ।
ಕುಲವೆರಡು ನಮ್ಮ ಮನ ಒಂದು॥

ಕುಲವೊಂದಾಗುವುದಕ್ಕಿಂತ ಮನವೊಂದಾಗುವುದರಲ್ಲಿ ಸಾರ್ಥಕತೆ ಹೆಚ್ಚು. ಮನಒಂದಾದಲ್ಲಿ ಧಾರಾಳತೆ ಕಾಣಿಸಿಕೊಳ್ಳುವದು. ಧಾರಾಳತೆ-ಯೆಂದರೆ ಒಂದು ಕೊಟ್ಟು ಎರಡು ಬೇಡುವುದಲ್ಲ; ಕೊಟ್ಟು ಹಿಗ್ಗುವುದು, ಈ ಕಿಸೆಯಿದ ತೆಗೆದ ವಸ್ತುವನ್ನು ಆ ಕಿಸೆಯಲ್ಲಿ ಹಾಕುವುದು. ಅವು ಒಂದೇ ಅಂಗಿಯ ಎರಡು ಕಿಸೆಗಳು. ಒಬ್ಬನೆ ತೊಟ್ಟ ಅಂಗಿ ಅದು.

ಗೆಳತಿ ಹಡೆದಾಳಂತ ನಗತ ಬಾಗೀಸೊಯ್ದು
ಜರತಾರದಂಗಿ ಮುಯ್ಯೊಯ್ದು। ಗೆಳದೆವ್ವ।
ಜನಕೊಪ್ಪುವ ಮಗನ ಹಡೆದಾಳ॥

“ ಮಗ, ನಿನ್ನ ಹಡಿಲಾಕ ಮುಗಿಲು ಮುಟ್ಟಿತು ಜೀವ” ಎನ್ನುವ ಗೆಳದಿಯ ಆನಂದೋತ್ಸವದಲ್ಲಿ ಭಾಗಿಯಾಗುವ ಸಂದರ್ಭವೊದಗಿದ್ದು ಒಂದು ಆನಂದೋತ್ಸವವೇ.

## ೧೪ ಬಾಳ ಪ್ರಸಾದ

ಬಹುವಿಸ್ತಾರವೂ ಆಳವೂ ಆದ ಒಂದು ಸರೋವರವಿದೆ. ನೀರು ಬಾಯಲ್ಲಿ ಹಾಕಿದರೆ ಸಿಹಿ ಸಿಹಿ ಸಕ್ಕರೆ! ಹಿತವಾಗಿ ಬಳಸಿದರೆ ಆರೋಗ್ಯ. ಜೀವನವೆನ್ನುವುದು ಅಂಥ ಸರೋವರವೆಂದು ಜಾನಪದರು ಬಗೆದಿದ್ದಾರೆ. ಆ ಸರೋವರಕ್ಕೆ ಆನೆ-ಒಂಟೆ, ಎತ್ತು-ಕೋಣ ಬಂದು ಹೊಟ್ಟೆತುಂಬ ನೀರು ಕುಡಿಯುತ್ತವಂತೆ. ಗುಬ್ಬಿ ಕಾಗೆಗಳೂ, ಇಣಚಿ-ನರಿಗಳೂ ಹೊಟ್ಟೆತುಂಬುವಷ್ಟು ನೀರು ಕುಡಿಯುತ್ತವೆ. ಆನೆ ಒಂಟೆಗಳ ಹೊಟ್ಟೆ ದೊಡ್ಡದು. ಗುಬ್ಬಿ ಕಾಗೆಗಳ ಒಡಲು ಚಿಕ್ಕದು. ನೀರಿನ ಪಾಲು ಸರಿಯಾಗಲಿಲ್ಲವೆಂದು ಯಾವ ಪ್ರಾಣಿಯೂ ಗೊಣಗುಟ್ಟುವುದಿಲ್ಲ. ಅದೇ ಪ್ರಕಾರ ಜಾನಪದರು ದೊಡ್ಡ ಹೊಟ್ಟೆಯವರಿಗಾಗಿ ಕರಬುವಂತಿಲ್ಲ; ಚಿಕ್ಕ ಹೊಟ್ಟೆಯವರಿಗಾಗಿ ಕನಿಕರಿಸುವಂತಿಲ್ಲ.

“ ಬಂದಾಳ ಬಾಲಿ ಬಂದಾಳ ಹೊಲದಿಂದ ಬಂದಾಳ” ಎಂದು ಆರಂಭವಾಗುವ ದಿ. ಮಧುರಚೆನ್ನರ ಗೀತೆ ಜನಪದ ಸಾಹಿತ್ಯವೆನಿಸಲಿಕ್ಕಿಲ್ಲ. ಆದರೆ ಜಾನಪದ ಜೀವನವನ್ನು ವಿಶ್ಲೇಷಿಸಿದ ಸಾಹಿತ್ಯವೆನ್ನಬಹುದಾಗಿದೆ. ಹಾಡಿನ ವಿಷಯ ಜಾನಪದ, ಹಾಡಿನ ದಾಟಿ ಜಾನಪದ, ಅದರ ಸ್ವಾರಸ್ಯವನ್ನು ಒಂದಿಷ್ಟು ಸವಿಯೋಣ.

ಹೊಲದಿಂದ ಮನೆಗೆ ಹೊರಟವಳು ಒಬ್ಬ ಬಾಲೆ, ಎರಡು ಮಕ್ಕಳ ತಾಯಿ. ಸಂಜೆಯಾಗಿದೆ, ಆಕೆಯ ತಲೆಯಮೇಲೆ ಉರುವಲಿನ ಹೊರೆಯಿದ್ದರೆ ಬಗಲಲ್ಲಿ ಒಂದು ಕೂಸಿದೆ. ಒಬ್ಬ ಮಗಳು ಮುಂದೆ ಸಾಗಿದ್ದಾಳೆ; ಕೈಯಲ್ಲಿ ಆಡಿನ ಕೊರಳ ಹಗ್ಗವಿದೆ. ಮನೆಯಲ್ಲಿ ಬಿಟ್ಟುಬಂದ ಕೂಸಿನತ್ತ ಬಾಲೆಯ ಹಂಬಲವಿರುವಂತೆ, ಮನೆಯಲ್ಲಿರುವ ಮರಿಯ ಸಲುವಾಗಿ ಆಡಿನ ಹಂಬಲವಿದೆ. ಲಗುಬಗೆಯಿಂದ ಆ ಗುಂಪು ಮನೆಗೆ ಬರುವ ಸುಳುಹು ಕಂಡು ಆಡಿನ ಮರಿ-

ಗಳು ಓಡಿಬಂದವು ಬಾಗಿಲಿಗೆ. ಆಡು ಹೋಗಿ ಅಕ್ಕರೆಯಿಂದ ಮರಿಯನ್ನು ನೆಕ್ಕಿತು. ಬಾಲೆ ಮನೆಯಲ್ಲಿ ಬಿಟ್ಟುಬಂದ ತನ್ನ ಶಿಶುವನ್ನು ಮುದ್ದಿಟ್ಟಳು. ಬಾಲೆ ಮತ್ತು ಆಡು ಓಡಿ ಬಂದು ಮಗು-ಮರಿಗಳನ್ನು ಮುದ್ದಿನಿಂದ ನೆಕ್ಕಿ ಅಕ್ಕರೆಯನ್ನು ತೋರ್ಪಡಿಸಿದಂತೆ, ಮಗಳೂ ತನ್ನ ಕೂಸನ್ನು ಮನೆ-ಯಲ್ಲಿ ಬಿಟ್ಟು ಬಂದಿದ್ದಳಲ್ಲವೇ? ಆ ಕೂಸು ಕಟ್ಟಿಗೆಯ ಗೊಂಬೆಯಾದರೂ ಮಗಳು ಓಡಿಹೋಗಿ ಅದನ್ನೆತ್ತಿಕೊಂಡಳು. ಕರಿಗೊಂಬೆ ಕಟ್ಟಿಗೆಯದಾಗಿದ್ದರೂ ಆಕೆಯ ಮನಸ್ಸು ಹರ್ಷದಿಂದ ತುಂಬಿತು.

ಅಂಗಳದಲ್ಲಿರುವ ತನ್ನ ಸ್ಥಳದಲ್ಲಿ ನಿಂತು ಆಡು ಎಳೆಹುಲ್ಲು ಕಚ್ಚಿತು. ಮರಿ ತಾಯಮೊಲೆಹಾಲು ಕುಡಿಯಿತು. ಬಾಲೆಯಂತೂ ಸಂಜೆಯ ಹೊಟ್ಟೆಗೂ ಸಾಕಾಗುವಷ್ಟು ಅಡಿಗೆಯನ್ನು ಮುಂಜಾ-ವಿನಲ್ಲಿಯೇ ಮಾಡಿಟ್ಟಿದ್ದಳು. ಮಕ್ಕಳು ಮರಿ ಉಂಡವು. ತಕ್ಕನೆ ತಾನೂ ಉಂಡಳು. ಆಮೇಲೆ ತಡವೇಕೆ ? ಮೆತ್ತಗಿನ ಹಾಸಿಗೆ ಸಿದ್ಧ-ವಾಯಿತು. ಗುರುವಿನನ್ನು ಸ್ಮರಿಸಿದಳು. ಹರನನ್ನು ನೆನೆದಳು. ಅದೇ ನೆನಪಿನಲ್ಲಿ ನಿದ್ದೆ ಹತ್ತಿಬಿಟ್ಟಿತು. ನಿದ್ರೆಯ ಭರದಲ್ಲಿ ಹೊಲವನ್ನೂ ಮರೆತಳು. ಮನೆಯನ್ನೂ ಮರೆತಳು. ನಿದ್ದೆಯೆಂದರೆ ಸುಖನಿದ್ರೆ. ಕನಸೆಂದರೆ ಸವಿಗನಸು.

ಬಾಲೆ ಕನಸು ಕಂಡಳು. ಮನಸ್ಸಿನ ಕೋಣೆಯಲ್ಲಿ ಹಣತಿಯ ದೀವಿಗೆ ಜಡೆಮುಡಿಯ ತಂದೆ ಬಂದು- ನೋಡು ಮಗಳೇ ಎನ್ನುತ್ತಲೇ ಬಾಲೆ- ಸ್ವಾಮೀ, ಶಿರಬಾಗುವೆ. ಪ್ರೇಮೀ, ಕರವ ಮುಗಿಯುವೆ” ಎಂದಳು.

ಜಡೆಮುಡಿಯ ತಂದೆ ಕೇಳಿದ ಒಂದೊಂದು ಪ್ರಶ್ನೆಗೆ ಬಾಲೆ ಮರು ನುಡಿದದ್ದು ಹೇಗೆಂದರೆ-

**ಹೊಲ ಮನೆ ಯಾರದು ? — ನೆಲಜಲ ನಿನ್ನದು.**
**ಸುಖದ ಶಿಶು ಯಾರದು ? — ಸಕಲ ಜೀವ ನಿನ್ನದು.**
**ನಿನ್ನವಲ್ಲ ವೇತಕೆ ? — ನೀನೆ ತಂದೆ ಲೋಕಕೆ**
**ನೀನು ಒಡತಿ ಅಲ್ಲವೇ ? — ಪ್ರಾಣ ತೊತ್ತು ಅಲ್ಲವೇ ?**
**ಕೆಲಸ ಗೈವುದಿಲ್ಲವೇ ? — ಚಲನ ವಲನ ಬೇಡವೇ ?**
**ಸುಖಕೆ ನಲಿವುದಿಲ್ಲವೇ ? — ನಿಖಿಲ ಲೀಲೆ ಹೊಲ್ಲವೇ ?**
**ನಾನು ನಿನಗೆ ಮೆಚ್ಚಿದೆ. — ಏನು ಬೇಕು ಹೆಚ್ಚಿಗೆ.**

ಏನುಬೇಕು ಹೆಚ್ಚಿಗೆ! ಯಾವುದು ಪರಮವಸ್ತು?ದೇವನ ಮೆಚ್ಚುಗೆ. "ನಾನು ನಿನಗೆ ಮೆಚ್ಚಿದೆ!" ದೇವನು ನಮ್ಮವ, ದೇವನು ನಮ್ಮವ–ಎಂದು ನಾವೆಲ್ಲರೂ ಸಹಜವಾಗಿ, ಸುಲಭವಾಗಿ ನುಡಿಯುತ್ತೇವೆ. ಆದರೆ ಅದನ್ನೊಪ್ಪುವಂತೆ ದೇವನು- "ಇಂವ ನಮ್ಮವ" ಎನ್ನಬೇಕಲ್ಲ! "ಇವನಾರು ಇವನಾರು" ಎನ್ನುವಂತಾದರೆ ಪ್ರಯೋಜನವೇನು ?

ಯಾವ ಒಂದನ್ನು ಪಡೆದರೆ ಇನ್ನೇನೂ ಪಡೆಯುವ ಅಗತ್ಯವಿಲ್ಲವೋ ಆ ಒಂದು ಯಾವುದು ? ಅದು ಒಂದೇ ಒಂದಾದ ದೇವ! ಆ ದೇವನು ಎಲ್ಲಿದ್ದಾನೆ? ಎಂದು ಕೇಳಿದವರಿಗೆ, ಆದೇವನು ಎಲ್ಲಿಲ್ಲ–ಎಂದು ಮರುಪ್ರಶ್ನೆ ಮಾಡಬಹುದಾಗಿದೆ; ಜಗತ್ತಿನೊಳಗಿರುವ ಯಾವ ವಸ್ತುವೂ ದೇವನಷ್ಟು ಹತ್ತಿರವಿಲ್ಲ. ಅಷ್ಟು ಹತ್ತಗಡೆಯುವನೂ, ನಿರಂತರ ಸಂಗಡಿಗನೂ ಆದ ದೇವನೊಬ್ಬನನ್ನು ಪಡೆದರೆ, ಇಡಿಯ ಜಗತ್ತಿನ ಒಡೆಯರೇ ನಾವು. ಸಮ್ರಾಟರೇ ನಾವು ಎಂದು ಹೆಮ್ಮೆಪಡಬಹುದಾಗಿದೆ ಆ ಒಬ್ಬ ದೇವನನ್ನು ಪಡೆವುದಕ್ಕೆ ಮಾಡಬೇಕಾದ ಸಾಧನವೇನು ? ಸಾಧನ ಅದೇಕಾದೀತು, ಸಹಜಕ್ರಮವೆಂದರೆ ಸರಿಹೋದೀತು.

ಶ್ರಮದ ದುಡಿಮೆ, ಸಾಧಾರಣಊಟ, ಮಕ್ಕಳು. ಸಾಕಿದಪ್ರಾಣಿ; ಆಟದಗೊಂಬೆ ಮೊದಲಾದವುದಗಳನ್ನು ಅಕ್ಕರೆಯಿಂದ ಪ್ರೀತಿಸುತ್ತ ಅಂತರಂಗದ ಅರಸನನ್ನು ಪ್ರಸನ್ನಗೊಳಿಸುವ ಜೀವನವೇ ಸುಖದಬಾಳು. ಬಡತನ ಒಡೆತನಗಳ ಭೇದಭಾವವನ್ನು ಅಳಿಸಿಹಾಕಿ, ನಿತ್ಯತೃಪ್ತರಾದವರಿಗೆ ಸುಖನಿದ್ರೆ ಸವಿಗನಸು ದಿವ್ಯಕೊಡುಗೆಗಳಾಗಿವೆ.

ಬಂಥನಾಳ ಶರಣಯ್ಯನನ್ನು ಕುರಿತು ಪ್ರಾರ್ಥಿಸಿದ ರೀತಿಯನ್ನು–ನೋಡಿದರೆ, ಇದೇ "ಬಾಲೆ" ಯ ಅಭೀಪ್ಸೆಯೊಂದು ಕಂಡು ಬರುವನು. "ನಾ ನಿನ್ನ ಮಗಳಯ್ಯ. ಲೇಸಗಿತ್ತೆಯ್ಯ. ಬಡವೆಯ್ಯ ನನ್ನ ಮೇಲೆ ಸಾಸೀವೆ ಕಾಳಷ್ಟು ದಯೆವಿರಲಿ." ಪರಮಾತ್ಮ ಕೃಪೆಯು ಒಂದು ಅಣುವಿನಷ್ಟು ಸ್ಪರ್ಶಿಸಿದರೂ ನಾವು ಈ ಜಗತ್ತಿನ ಭಯ–ಸಂಕಟ–ಗಂಡಾಂತರಗಳಿಗೆ ಬೆದರುವ ಕಾರಣವಿಲ್ಲ. ಬೆಚ್ಚುವ ಕಾರಣವಿಲ್ಲ. ಒಂದೇ ಒಂದು ಕೂದಲು ಸಹ ಕೊಂಕದೆ ಅದರೊಳಗಿಂದ ಪಾರಾಗಬಹುದು. ಎಂದು ಶ್ರೀ ಅರವಿಂದರು ತಮ್ಮ

"ಮದರ್" ಎಂಬ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ. ಗರತಿಯಬಾಳು ಪ್ರೇಮಾರಾಧನೆಯ ಪ್ರತೀಕ. ನೇರವಾದ ಜಪತಪಗಳಾಗಲಿ, ವ್ರತನಿಯಮಗಳಾಗಲಿ ಇರಲೇಬೇಕೆಂದೇನೂ ಇಲ್ಲ. ನಾರದ ಮುನಿಗಳು ಅನುಷ್ಠಾನದಲ್ಲಿರುವಾಗ ಅವರಿಗೆ ಕೇಳಿಸಿಬಂದ ಅಶರೀರವಾಣಿ, ಅಮರವಾಣಿ ನಮ್ಮ ಗರತಿಯ ಪರಿಸ್ಥಿತಿಯನ್ನೇ ಬಣ್ಣಿಸಿದಂತಿದೆ-

**ಪ್ರೇಮದೊಳಾರಾಧಿಸೆ ಆ ದೇವನ ಜಪತಪವಿನ್ನೇಕೆ ?**
**ಪ್ರೇಮದೊಳಾರಾಧಿಸದಿದ್ದರೆ ಆ ಜಪತಪವಿನ್ನೇಕೆ ?**
**ಒಳಗು ಹೊರಗು ಆ ದೇವನೇ ಕಾಣಲು ಜಪತಪದಿಂದೇನು ?**
**ಒಳಗು ಹೊರಗು ದೇವನ ಕಾಣದ ಆ ಜಪತಪದಿಂದೇನು ?**

ದುಡಿಮೆಯೇ ದೇವಪೂಜೆ. ಮಕ್ಕಳ ಜೋಪಾಸನೆಯೇ ದೇವನಿಗರ್ಪಿಸಿದ ಬಡಿವಾಣ. ಕೊರೆಯುವ ಚಿಂತೆಯನ್ನು ದೇವನಡಿಗೆ ಇಡುವುದೇ ದಕ್ಷಿಣೆ. ಗರಗತಿಗೆ ಗಂಡನಾಗಲಿ ಮಗನಾಗಲಿ ದೇವನ ಪ್ರತಿನಿಧಿಯೆಂದೇ ತೋರುವರು.

ತಂದೆಯ ಹಿಂದೆ ಮಗಬಂದನೆಂಬ ಮಾತನ್ನು ಗರತಿ ಹೇಳುವ ರೀತಿಯೇ ಬೇರೆ. ಪತಿ ಗಾಳಿದೇವರಾದರೆ, ಮಗಂಗೂಳಿ ದೇವರು. ಆಕಳ ಹಿಂದೆ ಕರುಬಂದ ಹಾಗೆ, ತಂದೆ ಮಗ ಬಂದರು, ಎನ್ನುವ ವಿಷಯ ಸಂಸಾರ ವೇದದ ಒಂದು ತ್ರಿಪದಿಯಾಗಿದೆ.

**ಗಾಳಿದೇವರ ಗೂಡ ಘೂಳಿದೇವರ ಬಂದಾ**
**ಆಕಳ ಹಿಂದೆ ಕರು ಬಂದಾ। ನನ ಮನಿಯ**
**ಮಾರಾಯರ ಹಿಂದೆ ಮಗ ಬಂದಾ।।**

ಗಂಭೀರವಾದ ನಡಿಗೆ ಆಕಳದು: ಟುಣುಪುಣು ಜಿಗಿಯುತ್ತ ಬರುವ ರೀತಿ ಕರುವಿನದು. ಅದೇ ರೀತಿಯಲ್ಲಿ ಮಾರಾಯರ ಹಿಂದೆ ಮಗಬರುವುದು.
ಬಡತನವೆಂದರೆ ಜೀವದ ಹಂಗುದೊರೆದು ನಿಂತಸ್ಥಿತಿ ಅದಕ್ಕಾಗಿ ಅಳುಕುವವರಿದ್ದಂತೆ, ಅದಕ್ಕೆ ಗುರುಪ್ರಸಾದವನ್ನು ಸೋಂಕಿಸಿ ದಿಟ್ಟರಾಗಿ, ಧೀರರಾಗಿ ದೈತ್ಯಶಕ್ತಿಯನ್ನು ಎದುರಿಸಿ ಗೆಲುಪಡೆದವರುಂಟು. ಪ್ರಾಣಕೊಟ್ಟಾರೆ ಹೊರತು, ಸ್ವಾಭಿಮಾನವನ್ನು ಮಾರಿಕೊಳ್ಳರು. ಪೈಶಾಚಿಕ ಪ್ರವೃತ್ತಿಯು

ಧೂಳಿಯನ್ನು ಹಾರಿಸಿ, ಈ ನೆಲವನ್ನು ಉಜ್ವಲಗೊಳಿಸಬಲ್ಲ ಪ್ರಾಸ್ತಾವಿಕ ಜೀವನವನ್ನು ಬದುಕಿ, ಬರೆದು ಹೋದವರುಂಟು.

ಅತ್ತಿಯ ಮನೆ ಸೊಸೆ ಎತ್ತೇರಿಬರುವಾಗ
ಕಿತ್ತೂರ ದೊರೆಯು ನೆದರಿಟ್ಟು। ಕೇಳ್ಯಾನ।
ಹತ್ತು ರೂಪಾಯಿ ಮೊಗದೋರ॥

ಪುಂಡಪೋಕರಲ್ಲಿ ಮಾತ್ರ ಇಂಥ ಹುಚ್ಚುಮುಂಡೇಗಂಡತನ ಇರುವುದೆಂದು ಬಹುಜನರು ತಿಳಕೊಂಡಿದ್ದಾರೆ. ಆದರೆ ದೇಶವನ್ನಾಳುವ ದೊರೆಗಳಲ್ಲಿಯೂ ಸಾಕಷ್ಟಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಹುಚ್ಚುಮುಂಡೆಗಂಡತನ ಹುದುಗಿರಬಹುದು. ಅದು, ಮೊದಲಗಿತ್ತಿಯಾಗಿ ಅತ್ತೆಮನೆಗೆ ಎತ್ತೇರಿಬರುವ ಚೆಲುವೆಯನ್ನು ಕಂಡು, ಕಿತ್ತೂರದೊರೆಯ ಆಶೆ ಚಿಗುರಿ ಬಾಯಿಗೆ ನೀರೂರಿತು. ಕೇಳಿಯೇ ಬಿಟ್ಟನು—" ಹತ್ತು ರೂಪಾಯಿ ಮೊಗದೋರೆ" ಆದರೆ ಆ ಮಾತು ಕೇಳಿ, ಆ ಬಾಲೆ ಬೆದರಲೂ ಇಲ್ಲ, ಬೆಚ್ಚಲೂ ಇಲ್ಲ. ನಾಚಿಕೊಂಡು ಮುಖ ತಗ್ಗಿಸಲಿಲ್ಲ; ದೋಚಿಕೊಂಡು ಓಡಿಹೋಗಲಿಲ್ಲ. ಚೊಕ್ಕಟವಾದ ಮಾತಿನಲ್ಲಿ ಮರುನುಡಿದಳು ಏನೆಂದರೆ—

ಹತ್ತು ನಿನ ರೂಪಾಯಿ ನತ್ತೀನ ಬೆಲೆಯಿಲ್ಲ
ಅತ್ತಿ ಹೊಟ್ಯೇಲಿ ಅರ್ಜುನ್ನ। ಕಾಲಾನ್ನ
ಮೆಟ್ಟಿನ ಬೆಲೆಯು ನಿನಗಿಲ್ಲ॥

ಆಕೆಯ ಮೊನೆಮಾತು ಆತನ ತಿಳಿಗೇಡಿತನವನ್ನು ತಿವಿದು ಎಚ್ಚರಗೊಳಿಸಿರಲೇಬೇಕು. ಕಟುನುಡಿದು ಹೆಣ್ಣನ್ನು ಒಡಿತಂದು ದಗ್ಗುದುಳಿಯಬೇಕೆಂದು ವಿಚಾರಿಸಿರಲೇಬೇಕು. ಗಂಡ ಅರ್ಜುನನಾಗಿದ್ದಾನೆ, ಆತನ ಕಾಲ್ಮರೆಯ ಬೆಲೆ ದೊರೆಯ ಕಿಸೆಯಲ್ಲಿ. ಎಂಥ ಮಾತು ಮರುನುಡಿದದ್ದು! ಮಾನವಂತರು ಮುಖತೋರದೆ ಉರುಲು ಹಾಕಿಕೊಂಡು ಸಾಯಬೇಕು! ಜಾನಪದದಲ್ಲಿ ಈ ಕತೆ ಮುಗಿಯುವದಿಲ್ಲ. "ಅವನು ಹೇಳಿಕೇಳಿ ಕಿತ್ತೂರಿನ ದೊರೆ. ಕಡು ಪೀಡೆಕಾರ. ನನಗಾಗಿ ನನ್ನ ಮಾತಿಗಾಗಿ ಕುನಸಿಟ್ಟು, ಹಂಗುದೊರೆದು ನನ್ನನ್ನೂ. ನನಗಾಗಿ ನನ್ನ ಮನೆತನದವರನ್ನೂ ಕ್ರೂರೋಪಾಯಗಳಿಂದ ಮಣ್ಣುಗೂಡಿಸಬಹುದು, ಧೂಳಿಹಾರಿಸಬಹುದು. ಮನೆತನದವರ ಹೆಣಗಳನ್ನು ಹದ್ದು-ಕಾಗೆಗಳಿಗೆ ಹಬ್ಬದಡಿಗೆಮಾಡಿ ಎಡೆಬಡಿಸಬಹುದು. ಆದ್ದರಿಂದ ಪ್ರಸಂಗ

ವೇ ಬಂದೊದಗದಂತೆ, ಅದರ ಬೇರನ್ನೇ ಕತ್ತರಿಸಿಹಾಕುವುದು ಪರಮೋಪಾಯ" ವೆಂದು, ಅದೆಂಥದೋ ವಿಷ ತೆಗೆದುಕೊಂಡು ಆ ಮೊದಲಗಿತ್ತಿ ಅಸುನೀಗಿ ಭವಿಷ್ಯತ್ತಿನಲ್ಲಿ ಮನೆತನಕ್ಕೆ ಅಡಸುವ ಘೋರವಿಪತ್ತಿನಿಂದ ಉಳಿಸಿದಳಂತೆ.

ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಏಕಕಾಲಕ್ಕೆ ಕೀರ್ತಿತರುವ ಹೆಣ್ಣುಮಕ್ಕಳಿರುವುದು ನಾಡಿನಭಾಗ್ಯವೇ. ಆದರೆ ಅಕ್ಕಿಯಲ್ಲಿ ಅಪ್ಪಿತಪ್ಪಿ ಒಂದೊಂದು ಹರಳು ಕಾಣಿಸುವುದೂ ಉಂಟು. ಅದು ಅಕ್ಕಿಯಿಂದ ಹೊರ-ಬಿದ್ದು ಉಸುಕಿನಲ್ಲಿ ಬೆರೆತರೆ, ಅದು ಒಂದು ಭೂಷಣವೇ. ಬಳಗದಲ್ಲಿ ಸೇರಿಕೊಂಡತೆಯೋ, ಸ್ವಾರ್ಥಕವೆನಿಸುವುದು.

ಕೂಡಿದರ ಕೂಡಬೇಕು ಬೇಡರ ಹುಡಗನ
ಪಾವುಡದ ಚುಂಗು ನೊಳದುದ್ದ | ಬಿಟಗೊಂಡು,
ಓಡ್ಹೋಗೋ ನೊಲನ ಜಡಿದಾನ||

ಕಿತ್ತೂರ ದೊರೆಗೆ ಮಾರ್ಮಿಕ ಉತ್ತರ ನೀಡಿದ ನೊದಲಗಿತ್ತಿಯಲ್ಲಿ ಒಂದು ಕ್ಷಾತ್ರವೃತ್ತಿ ಕಾಣಿಸಿಕೊಂಡರೆ, ಈ ಕೊಡುಗೂಸಿನಲ್ಲಿ ಅಲ್ಲ, ಕನ್ಯೆಯು ಲ್ಲಿ ಇನ್ನೊಂದು ಕ್ಷಾತ್ರವೃತ್ತಿ ಹಣಿಕೆ ಹಾಕುತ್ತದೆ. ಅದು ಜೀವವನ್ನೇ ಬಲಿ ದಾನವಿತ್ತ ದುರಂತವಾದರೆ, ಇದು ಜೀವವನ್ನೇ ಪಣಕ್ಕಿಟ್ಟ ಬಲಿದಾನದ ಪ್ರಸಂಗಕ್ಕೂ ಸಿದ್ಧವಾದ ಹೂಣಿಕೆ.

ಹುಟ್ಟಿಬಂದ ಮನುಷ್ಯರಿಗೆಲ್ಲ ಸುಪ್ರಸಂಗಗಳು ಬರುವಂತೆ, ಪರೀಕ್ಷಾಪ್ರಸಂಗಗಳೂ ಬರುವುದುಂಟು. ಸುಪ್ರಸಂಗವು ಪ್ರಸಾದವೆನಿಸಿದರೆ, ಪರೀಕ್ಷಾಪ್ರಸಂಗವು ಪರಮೌಷಧಿಯೆನಿಸುತ್ತದೆ. ಪ್ರಸಾದವಾಗಲಿ ಔಷಧವಾಗಲಿ ಹೊಟ್ಟೆತುಂಬ ತಿನ್ನುವ ದೀನಸಲ್ಲ. ಪ್ರಮಾಣವನ್ನು ಮೀರಿ ಸ್ವೀಕರಿಸಿದರೆ ವಿಪರೀತ ಪರಿಣಾಮವುಂಟಾಗುವುದು ನಿಶ್ಚಯ. ಒಬ್ಬರಿಗೆ ಪ್ರಸಾದವಾದದ್ದು ಇನ್ನೊಬ್ಬರಿಗೆ ಆಗಲಿಕ್ಕಿಲ್ಲ. ಒಬ್ಬರೋಗಿಗೆ ಕೊಡಮಾಡಿದ ಔಷಧಿ ಇನ್ನೊಬ್ಬ ರೋಗಿಗೆ ತಾರಕವಾದೀತೆಂದು ಹೇಳಲಿಕ್ಕಾಗದು.

ತಿರುಗಿ ಕೇಳಿದರೆ ಮಾರಕವೇ ಆದೀತು. ಪ್ರಸಾದವನ್ನೇ ಆಗಲಿ, ಔಷಧವನ್ನೇ ಆಗಲಿ ಪ್ರಸನ್ನ ಭಾವದಿಂದ ಸ್ವೀಕರಿಸುವುದೇ, ಪರಮಾತ್ಮನಿಗೆ ಒಪ್ಪಿತವಾದ ಬಾಳು. ಹುಟ್ಟಿದ ತಪ್ಪಿಗಾಗಿ ಬದುಕುವುದು ಬಾಳಲ್ಲ. ಬಾಳನ್ನು ಒಪ್ಪ ಮಾಡಿಕೊಂಡು ಜೀವಿಸುವುದೇ ಬದುಕು.

# ೧೫ ಕಠಾರರನ ಕಮ್ಮಟ

ಜಗತ್ತು ಕಠಾರರನ ಕಮ್ಮಟವೆಂದಾಗ ಅಲ್ಲಿ ಅಡಿಗಲ್ಲು, ಸುತ್ತಿಗೆ, ಇಕ್ಕಳಿಕೆ, ಕಂಬಿಚ್ಚು, ಅಗಿಷ್ಟಿಗೆ ಇರತಕ್ಕುವೇ. ಆ ಉಪಕರಣಗಳೆಲ್ಲ ನಿರ್ದಯವಾಗಿ ತಮತಮಗೆ ಒಗ್ಗುವ ಕರ್ತವ್ಯಗಳನ್ನು ಮಾಡುತ್ತವೆ. ಆ ಕಾರ್ಯಕಲಾಪಗಳನ್ನೆಲ್ಲ ನಿರ್ವಹಿಸಬಲ್ಲ ಒಬ್ಬ ಕಠಾರರನಿರುತ್ತಾನೆ. ಅವನ ಕಣ್ಣಂಕೆಯಲ್ಲಿ ಅವನ ಕೈಸನ್ನೆಯಲ್ಲಿ, ಅವನ ಬಾಯುಸೂಚನೆಯಲ್ಲಿ ಕ್ರಮವಾಗಿ ಕೆಲಸಗಳು ಮುಂದುವರಿಯುತ್ತವೆ. ಲೋಕದಲ್ಲಿ ಕುಳಿತು ತಣಿಯುವ ನೆರಳಿನ ಭಾಗ ತೀರ ಕಡಿಮೆಯಾಗಿದ್ದು, ನಿಗ್ಗರದ ಬಿಸಿಲಿನ ಭಾಗವೇ ಅತಿಶಯವಾಗಿದೆ.

ಹುಟ್ಟಿದ ಕೂಸಿನಿಂದ ಆರಂಭವಾಗಿ, ಸುಡುಗಾಡಿಗೋ ಗೋರಿ ಮರಡಿಗೋ ಹೊರಟ ಮುದುಕನ ವರೆಗೆ ಎಲ್ಲರಿಗೂ ಒಂದಿಲ್ಲೊಂದು ಚಿಂತೆ, ಒಂದಿಲ್ಲೊಂದು ದುಃಖ ಅಡಗಿರುತ್ತದೆ. ಸತಿಯಿಲ್ಲದ ಚಿಂತೆ ಒಬ್ಬಗಿದ್ದರೆ, ಸತಿಯಾದ ಚಿಂತೆ ಇನ್ನೊಬ್ಬಗಿರುತ್ತದೆ. ಸತಿಯಾದರೆ ಮಕ್ಕಳ ಚಿಂತೆ ಒತ್ತಟ್ಟಿಗೆ ಕಾಣಿಸಿಕೊಂಡರೆ, ಮಕ್ಕಳು ಹೆಚ್ಚಾದ ಚಿಂತೆ ಇನ್ನೊತ್ತಟ್ಟಿಗೆ ಗೋಚರಿಸುತ್ತದೆ. ಮಕ್ಕಳು ಪ್ರಭುದ್ಧರಾಗಿ ತಮಗೆಟಕುವ ಉದ್ಯೋಗ ಕೈಕೊಳ್ಳಬೇಕೆಂದು ಚಿಂತಿಸುವವರಿಗೆ ಸರಿಯಾದ ರೀತಿಯಲ್ಲಿ ಕೆಲಸಮಾಡಿ ಯಶಸ್ವಿಯಾಗಬೇಕೆನ್ನುವ ಚಿಂತೆ.

ಚಿಂತೆ ಹೆಣ್ಣಿಗೂ ಬಿಟ್ಟಿಲ್ಲ, ಗಂಡಿಗೂ ಬಿಟ್ಟಿಲ್ಲ. ಅಭೀಷ್ಟವನ್ನು ಪೂರಯಿಸಿದರೆ ಸಂತೋಷವೋ ಸುಖವೋ ಕೆಲಹೊತ್ತು ಸಂಗಳಿಸುವದು. ಅಭೀಷ್ಟವು ಪೂರಯಿಸದಿದ್ದರೆ ದುಃಖವು ಆವರಿಸುತ್ತದೆ. ಅಕ್ಕಸಾಲಿಗನು ಚಿನ್ನದ್ದೋ ಬೆಳ್ಳಿಯದೋ ಗಟ್ಟಿಯನ್ನು ಅಜಗಣೆಯ ಮೇಲಿಟ್ಟು ಸುತ್ತಿಗೆಯಿಂದ ಬಡಿಯುತ್ತಿರುವಾಗ, ನಾಲ್ಕೇಟು ಗಟ್ಟಿಯ ಮೇಲೆ ಹಾಕಿ, ಒಂದೆರಡು ಹುಸಿಯೇಟುಗಳನ್ನು ಅಜಗಣೆಯ ಮೇಲೆ ಹಾಕುವನು. ಗಟ್ಟಿಯ ಮೇಲಿನ ಪೆಟ್ಟು ದುಃಖದ ಪ್ರತೀಕ, ಅಜಗಣೆಯ ಮೇಲೆ ಹಾಕಿದ ಪೆಟ್ಟು ಸುಖದ ಪ್ರತೀಕ ಎಂದು ಹೇಳಬಹುದು.

ಮನುಷ್ಯನು ನೂರು ವರುಷಗಳ ಕಾಲವನ್ನು ನೂಕುತ್ತ ಹೋಗುವಂತೆ ಮಾಡುತ್ತದೆ ಸುಖವೆನ್ನುವದು.ದು:ಖವು ಬಾಲ್ಯದಿಂದ ಯೌವ್ವನಕ್ಕೂ ಯೌವನದಿಂದ ವೃದ್ಧಾಪ್ಯಕ್ಕೂ ಅಟ್ಟುವ ಕೆಲಸವನ್ನು ನಿರ್ವಹಿಸುತ್ತದೆ. ಬಡವನಿಗೆ ಗಳಿಸುವ ಚಿಂತೆ. ಗಳಿಸಿದವನಿಗೆ ಅದನ್ನು ಕಾದಿಡುವ ಚಿಂತೆ. ಕಾದಿಟ್ಟವನಿಗೆ ಅದನ್ನು ವಿನಿಯೋಗಿಸಿ ಭಾಂಡಾರವನ್ನು ಹೆಚ್ಚಿಸುವ ಚಿಂತೆ. ಅಂಥವರಿಗಾಗಿ ಜನಪದದಲ್ಲಿ ಒಂದು ಗಾದೆಯ ಮಾತೇ ಹುಟ್ಟಿಕೊಂಡು ಬಳಕೆಯಲ್ಲಿ ಬಂದಿದೆ. "ಇಟ್ಟು ಮರುಗುವ ನಾಯಿ. ಕೊಟ್ಟು ಕೊರಗುವ ನಾಯಿ. ತಿತಿಮತಿಯಿಲ್ಲದೆ ತಿರುಗುವ ನಾಯಿ." ಮನೆಯಲ್ಲಿ ಇಟ್ಟುಕೊಳ್ಳುವಬದಲು, ಸಾಲಗಾರರಿಗೆ ಸಾಲಕೊಟ್ಟುಬಳಿಕಕಾಲಕಾಲಕ್ಕೆಬಡ್ಡಿಬರದಿದ್ದರೆಅದೊಂದುಕೊರಗು. ಕೊಟ್ಟು ಕೊರಗುವ ರೀತಿಯದು. "ಯುಗಾದಿಯ ವರೆಗೆ ಬಡ್ಡಿ ಕೇಳ ಬೇಡಿರಿ" ಎಂದು ವಿನಂತಿಸುವವನ ಮನದಲ್ಲಿ, "ಯುಗಾದಿ ಆದಬಳಿಕ ಗಂಟನ್ನೂ ಕೇಳ ಬೇಡಿರಿ" ಎಂಬ ಭಾವನೆಯಿರುತ್ತದೆ. " ಯಪ್ಪಾ, ಸಾವಕಾರ್ರೆ, ಖರೇ ಹೇಳಬೇಕೆಂದರೆ ನಾವು ಒತ್ತುವಷ್ಟು ಒತ್ತಿದೆವು. ನೀವು ತಾಳುವಷ್ಟು ತಾಳಿಕೊಂಡಿರಿ. ಇನ್ನು ನಾಳಿನ ಯುಗಾದಿಗೆ ಹಿಂದಿನದೂ ಮುಂದಿನದೂ ಕೂಡಿಯೇ ಹರಿದು ಬಿಡುತ್ತೇವೆ. ಸಾವುಕಾರರಿಗೆ ಸಮಾಧಾನ ಹೇಳಿರಿ" ಇಂಥ ವ್ಯವಹಾರಗಳಿಗೆ "ಕೊಟ್ಟವ ಕೋಡಗ, ತಗೊಂಡವ ಹಣಮಂತ" ಎಂದು ಹೇಳುವುದುಂಟು. ಅದಕ್ಕೆ "ಕೊಟ್ಟವ ಕೋಡಗ ಇಸಗೊಂಡವ ಈರಭದ್ರ" ಎನ್ನುವ ಪಾಠಾಂತರವೂ ಉಂಟು,

ಜಗತ್ತೆನ್ನುವುದು ಸೆರೆಮನೆಯೆಂದೂ. ನಾವೆಲ್ಲರೂ ಅದರೊಳಗಿನ ಸೆರೆಯಾಳುಗಳೆಂದೂ, ನಮ್ಮನ್ನೆಲ್ಲ ಕರುಣೆಯಿಲ್ಲದೆ ಕಟ್ಟಿ, ಹೊಡೆಬಡಿದು ತ್ರಾಹಿತ್ರಾಹಿ ಎನಿಸಿ ಬಿಡುತ್ತದೆ. ಈ ಜನ್ಮ ತಳೆದದ್ದು ದು:ಖಭೋಗಕ್ಕಾಗಿಯೇ ಎಂದು ಸಂತರು ಹೇಳುತ್ತಾರೆ. ಇದೆಲ್ಲ ಅಯ್ಯನ ಜೋಳಿಗೆಯೊಳಗಿನ ಹೋಳಿಗೆ. ಅಯ್ಯಾ ಎಂದರೂ ಕೊಡುವದಿಲ್ಲ, ಅಯ್ಯನವರೇ ಎಂದರೂ ಕೊಡುವದಿಲ್ಲ. ಕಸುಗೊಳ್ಳುವ ತ್ರಾಣ ನಮ್ಮಲ್ಲಿಲ್ಲ. ಆದರೆ ಜೋಳಿಗೆಯೊಳಗಿನ ಹೋಳಿಗೆಯ ಆಶೆಗಾಗಿ ಜಗತ್ತು ಕೈಚಾಚುತ್ತದೆ, ಬೊಗಸೆಯೊಡ್ಡುತ್ತದೆ. ಕೊಡದಿದ್ದವರ ಮೇಲಿನ ಸಿಟ್ಟಿಗಾಗಿ ಹಾವುಗಾರನು ಪಾಪಿಚಂಡಾಲ ಎಂಬ ಆರಿವೆಯ ಗೊಂಬೆಯನ್ನೆತ್ತಿ ನೆಲಕ್ಕೆ ಅಪ್ಪಳಿಸಲಾಗುತ್ತದೆ.

ಆದರ ಕಣ್ಣಲ್ಲಿ ಮಣ್ಣು ತೂರಲಾಗುತ್ತದೆ. ಕಾಸು ಕೊಟ್ಟವರು ಕೊಟ್ಟರು. ಕೊಡದಿದ್ದವರು ಮುಖ ಹೊರಳಿಸಿ ಬದಿಗೆ ಹೋದರು.

" ಮಕ್ಕಳ ಕಾಡು ಶಿವನೇ "-ಎಂದು ಗಂಡುಳ್ಳ ಬಾಲೆ ಹಾರಯಿಸಿದರೆ, "ಇನ್ನೊಬ್ಬ ಹೆಂಡತಿಯನ್ನು ಒದಗಿಸು ಗುರುವೇ" ಎಂದು, ಹೆಂಡತಿಯುಳ್ಳ ತರುಣನು ಅಪೇಕ್ಷಿಸುತ್ತಾನೆ. ಬೇಡುವ ಬಾಯಿ ಒಂದೇ ಆದರೂ ಬೇಡುವ ವಸ್ತುಗಳು ನೂರೆಂಟು. ಅಂಥ ನೂರೆಂಟು ವಸ್ತುಗಳನ್ನು ಬೇಡುವವರು ನೂರು ಸಾವಿರ ಜನರು. ಒಂದು ಬೇಡಿರೋ, ಒಂದೇದನಿಯಲ್ಲಿ ನೂರ್ಜನ ಬೇಡಿರೋ ಎಂದು ದೇವರ ಅಪೇಕ್ಷೆಯಿದ್ದಂತೆ ತೋರುತ್ತದೆ. ಯಾವ ಒಂದನ್ನು ಬೇಡಿದರೆ ಇನ್ನೇನೂ ಬೇಡುವ ಆಗತ್ಯವುಳಿಯುವದಿಲ್ಲವೋ ಆ ಒಂದನ್ನು ಅರಿತು ಬೇಡಿರಪ್ಪಾ ಕೊಡುವೆನು ಅನ್ನುತ್ತಾನೆ ಶಿವ. ಒಬ್ಬ ಅನಾಥಳಾದ ಕುರುಡ ಮುದಿಕೆಗೆ ಒಲಿದು ದೇವರು-"ಒಂದೇ ಮಾತಿನಲ್ಲಿ ಬೇಕಾದ ವರವನ್ನು ಕೇಳಿಕೋ" ಅಂದಾಗ, ಆ ಮುದಿಕೆ ಕೇಳಿದಳಂತೆ- "ನನ್ನ ಮರಿ ಮಕ್ಕಳು ಬೆಳ್ಳಿ ಬಂಗಾರದ ತಾಟಿನಲ್ಲಿ ಸಕ್ಕರೆ-ತುಪ್ಪ ಉಣ್ಣುವುದನ್ನು ನನ್ನ ಕಣ್ಣು ಕಾಣಲಿ" ಆ ಮಾತಿಗೆ ದೇವನು ತಥಾಸ್ತು ಅನ್ನಲು, ಆ ಮುದಿಕೆಗೆ ಕಣ್ಣು ಬಂದವು. ಪ್ರಾಯ ಬಂತು. ಲಗ್ನವಾಯಿತು. ಶ್ರೀಮಂತಿಕೆ ಬಂತು. ಅದು ೨-೩ ತಲೆಗಳ ವರೆಗೆ ಉಳಿಯಿತು. ಮರಿಮಕ್ಕಳನ್ನು ಕಾಣುವ ಭಾಗ್ಯದೊಡನೆ ದೀರ್ಘಾಯುಷ್ಯ-ಆರೋಗ್ಯಗಳು ಆಕೆಗೆ ದೊರೆತವು.

ಮನಸ್ಸಿಗೆ ಬಂದಿದ್ದನ್ನು ಅಪೇಕ್ಷಿಸುವುದು, ಅದು ಇಜ್ಜೋಡವಾಗಲು. "ಕೋಡಗನ್ನು ಕೋಳಿ ನುಂಗಿತ್ತ" ಎಂದು ತಂತಿ ಬಾರಿಸುವುದು " ಅಂಗಿಯ ಮೇಲಂಗಿ ತರವಲ್ಲೋ ರಾಯ" ಎಂದು ಹೆಂಡತಿ ಗಂಡನಿಗೆ ಹೊಟ್ಟೆಸೊಕ್ಕು ಆಲುಪರೆದು ಹೇಳಿಕೊಂಡರೂ ಅವನು ೨ನೇ ಮಡದಿಯನ್ನು ತರದೆ ಬಿಡಲಿಲ್ಲ. ಅವನು ಶಿವಭಕ್ತನೆಂದು ತೋರುತ್ತದೆ. ನಮ್ಮನ್ನು ಕಂಡು ಶಿವನು ಕಲಿತನೋ, ಶಿವನನ್ನು ಕಂಡು ನಾವು ಕಲಿತೆವೋ ಈ ಇಬ್ಬರು ಹೆಂಡಿರ ಸಮಾಗಮ ಸುಖವನ್ನು.

ಇಬ್ಬರ್ಹೆಂಡರ ಕಾಟ ಇರಳು ತಗಣಿಕಾಟ
ಕಿಬ್ಬಕ್ಕಿ ಕಾಟ ಬಲುಕಾಟ। ಜವರಾಯ।
ಒಬ್ಬ ಬಿಟ್ಹೋಳ್ಳಿ ಕೊಂಡೊಯ್ಯೋ॥

ಇಬ್ಬರು ಹೆಂಡಿರ ಕಾಟ [illegible]ಥದಂಬುದನ್ನು [illegible]ನಿಂದ ಅರಸನ ವರೆಗೆ ಎಲ್ಲರೂ, ಚನ್ನಾಗಿಯೇ ಬಲ್ಲರು. [illegible] ಹೆಂಡಿರ [illegible]ಟಕಾಗಿ "ಮಗ್ಗದ ಕುಣಿಯಾಗ ಡೊಗ್ಗಿದನಪ್ಪೋ, ಹ್ಯಾಂಗ ಮಾಡಲೆಪ್ಪೋ। ಎಪ್ಪಾ। ಹ್ಯಾಂಗ ಮಾಡಲ್ಯೋ" ಎಂದು ಜನಪದ[illegible] ಹೇಳಿಕೊಡುವ ಹಾಡಿನ ಹಾಡು ಯಾರಿಗೆ ಗೊತ್ತಿಲ್ಲ?

**ಇಬ್ಬರ್ಹೆಂಡಿರನಾದ ಏಡಿಯು ಮುಳ್ಳಾದ**
**ಕೋಡಗನಾದ ಕೊರವಾದ। ಬಾಲೇರು।**
**ಮಾಡಿಟ್ಟ ಸಿಂಬಿ ಅರಿವ್ಯಾದ।।**

ಏಕ ಕಾಲಕ್ಕೆ ಇಬ್ಬರು ಹೆಂಡಿರು ಸವತಿಮಕ್ಕಳಾಗಿ ಗಂಡನೊಡನೆ ಬಾಳ್ವೆಮಾಡಿ ಪಡೆದ ಅನುಭವ ಹಾಡಿನಲ್ಲಿ ಕೇಳುತ್ತೇವೆ. ನಡವಳಿಕೆಯಲ್ಲಿ ಕಾಣುತ್ತೇವೆ. ಏಕ ಕಾಲಕ್ಕೆ ಇಬ್ಬರು ಹೆಂಡಿರು ಮನೆಯಲ್ಲಿ ಬಾಳ್ವೆಮಾಡು-ವುದು ಜಟಿಲವಾದ ವಿಷಯ. ಇದ್ದೊಬ್ಬ ಹೆಂಡತಿ ತೀರಿಹೋಗಿ ಗಂಡನನ್ನು, ಮತ್ತು ಇದ್ದರೆ ಒಂದೆರಡು ಮಕ್ಕಳನ್ನು ಬೀದಿಗೆ ನಿಲ್ಲಿಸಿದಾಗ ಆ ಬಡ ಪಾಲು ಗಂಡ ಏನು ಮಾಡಬೇಕು? ಎರಡು ಹರಕು ಸೀರೆಗಳೊಳಗಿನ ಗಟ್ಟಿಯಾದ ಭಾಗಗಳನ್ನು ಒಟ್ಟುಗೂಡಿಸಿ ಇಡಿಯು ಸೀರೆ ಮಾಡಿದಂತೆ ಆ ಸಂಸಾರ. ದಿಂಡುಹಾಕಿದ ಆ ಸೀರೆಯ ಒಂದು ತುಣುಕು ಹಸಿರು, ಇನ್ನೊಂದು ಕೆಂಪು ಅಥವಾ ನೀಲಿ ಇರಬಹುದು. ಅದು ಜಾತಗಾರ ಪರಂಪರೆಯ ಸೀರೆಯೆನಿಸಬಹುದು. ನೀನೇ ಮದಿವೆಯಾಗಲಿ ಉಡಿಕೆಯಾ-ಗಲಿ ಬಹುಶಃ ಜಾತಗಾರ ಸೀರೆಯು ನೆನಪು ತರುವುದರಲ್ಲಿ ಸಂಶಯುವೇ ಇಲ್ಲ.

**ಉಡಿಕಿಯು ಹೆಂಡತಿ ಉಡಿಯಾನ ಲಿಂಗೆಂದ**
**ಕಿರಿಬಳ್ಳು ಹಿಡಿದ ಮಡದಿಯು। ಸಂಗಾಟ**
**ಸಿಡಿಪಿಡಿ ಯಾಕೋ ಸಿರಿರಾಯ।।**

ಬೆನ್ನು ಸತ್ತ ಹೆಂಗಸು, ಬೆನ್ನು ಬಿರಿದ ಗಂಡಸು ಇವರನ್ನು ಗಂಡ-ಹೆಂಡಿರನ್ನಾಗಿ ಮಾಡುವ ಒಂದು ವಿಧಾನವೇ ಉಡಿಕೆ. ಆಕೆಯ ಜೊತೆಗೆ ಮೊದಲ ಗಂಡನ ಒಂದೆರಡು ಮಕ್ಕಳು ಇರಬಹುದು. ಈತನೊಡನೆ ಮದುವೆಯ ಹೆಂಡತಿಯಲ್ಲಿ ಹುಟ್ಟಿದ ಮಕ್ಕಳೂ ಇರಬಹುದು. ಅಂಥಲ್ಲಿ ಸಿಡಿಪಿಡಿ ಕಾಣಿಸಿ ಕೊಳ್ಳದೆ ಇನ್ನೆಲ್ಲಿ ಕಾಣಿಸಿಕೊಳ್ಳಬೇಕು. ?

ಇವೆರಡನ್ನೂ ಬಿಟ್ಟರೆ ಉಡಿಕೆಯೂ ಅಲ್ಲದ ೨ ನೇ ಮದುವೆಯೂ ಅಲ್ಲದ ಒಂದು ಪದ್ಧತಿಯನ್ನು ಜೀವವು ಆಯ್ಕೆ ಮಾಡಿಕೊಂಡಿದೆ. ಸೂಳೆಗಾರಿಕೆಯು ಪ್ರಯೋಜನ ಮಾಡಿಕೊಳ್ಳುವುದೇ ಮನೆಯ ಜಂಜಾಟಕ್ಕಿಂತ ಪ್ರಶಾಂತವಾದ ಉಪಾಯ. ಮೊದಮೊದಲು ಹೆಂಡತಿಸತ್ತ ವಿದುರನ್ನು ತನ್ನ ಪೌರುಷ ಪೂರ್ಣತೆಗಾಗಿಯೆನ್ನುವಂತೆ, ಗಂಡ ಸತ್ತವಳೊಬ್ಬಳ ಸಂಪರ್ಕ ಬೆಳೆಸುವ ರೂಢಿ ಉಂಟಾಯಿತೇನೋ. ಆಕೆ ಗಂಡನಿಗೆ ಹೆಂಡತಿ. ಗಂಡ ಸತ್ತಮೇಲೆ ರಂಡ ಮುಂಡೆಯಾದಳು. ಯಾರಾರಿಗೋ ರಂಡಿಯಾಗತೊಡಗಿದಳು. ಆ ದಾರಿ ಉಭಯರಿಗೂ ನಿರ್ಭಯದ ಉಪಾಯ. ಒಬ್ಬನನ್ನೇ ಹೊಂದಿಕೊಂಡವಳು ರಂಡೆಯೆನಿಸಿದಳು. ಹಲವರನ್ನು ಬರಮಾಡಿಕೊಳ್ಳುವವಳು ಸೂಳೆಯೆನಿಸಿದಳು.

ಸೂಳೆಗೆ ಹೋದವನು ಏನಾದ ಎಂತಾದ
ಕಾಡು ನಾಯಾದ ಕಪಿಯಾದ । ಆ ಮುದುವ
ಸೂಳೆ ಕಾಲಿಗೆ ಕೆರವಾದ ॥

ಹಸಿದ ನಾಯಿಗೂ ಹಳಸಿದ ನುಚ್ಚಿಗೂ ಗಂಟು. ಉಡಕಿಯಾಹೆಂಡತಿಗೂ ಸೂಳೆಗೂ ಎಂದೆಂದೂ ಹೋಲಿಸುವಂತಿಲ್ಲ. ಏನಾದರೂ ಆಕೆ ಹೆಂಡತಿ. ಹೆಂಡತಿ ಹೆಂಡತಿಯೇ, ಸೂಳೆ ಸೂಳೆಯೇ.

ಸೂಳೀಗಿ ಹೋದವನ ಸುಲಿದು ಮಟ್ಟೇಕಟ್ಟಿ
ಊರ ಹೊರಗವನ ಹೆಡ ಮುರಗಿ । ಕಟ್ಟಿದರ
ಸೂಳೆಂಬ ಶಬ್ದ ಬಿಡುವಲ್ಲ ॥

ಮಾಡಿಕೊಂಡ ಹೆಂಡತಿಯನ್ನಾದರೂ ಮರೆತಾನು, ಸೂಳೆಯನ್ನು ಹೇಗೆ ಮರೆತಾನು ? ಹೆಂಡತಿಯೊಂದಿಗೆ ಮಕ್ಕಳು ಮರಿಗಳ ಜಂಜಾಟವಿರುವುದು ಸಹಜವಷ್ಟೇ ? ಅಂಥ ಪರಿಸರವು ಗಂಡನಿಗೆ ಆಗಿಬರದು. ಹೆಂಡತಿಯೇನೂ ಬೇಕು. ಆದರೆ ಆ ಸಂಪರ್ಕದಿಂದ ಪ್ರಾಪ್ತವಾದ ಪ್ರತಿಫಲ ಮಾತ್ರ ಬೇಡವಾಗಿದೆ. ಆದರೆ ಸೂಳೆಮನೆಯ ಪರಿಸರವೇ ಬೇರೆ.

ಮಕ್ಕಳಿಲ್ಲ ಮರಿಯಿಲ್ಲ. ಕೂಸಿನ ಅಳುವಿಲ್ಲ. ಹಾಸಿಗೆಯು ಕೊಳೆಯಿಲ್ಲ. ಅಂದಾಗ ಸಿದ್ದಗಣ್ಣನಲ್ಲಿಯೂ ಸೂಳೆಯನ್ನು ಸ್ಮರಿಸಬಹುದಾಗಿದೆ. ಅಲ್ಲಿ ಕಂಡು ಬರುವ ಉಲ್ಲಾಸವಾಗಲಿ, ಉತ್ಸಾಹವಾಗಲಿ ಭುಜಗನಿಗೆ ಮನೆಮರೆಸುತ್ತದೆ. "ಸುಖವು ಬೇದಿಯ ನೆರಳು। ದುಃಖವು ದೂಡುವ ಬಿಸಿಲು!" ಎನ್ನುವ ಮಾತನ್ನು ಗಮನಿಸಿದರೆ ಬಾಳು ಆದಾವದೋ ಪ್ರಸಾದದಂತಿದೆಯೆಂದು ಹೇಳಬಹುದಾಗಿದೆ.

ಹೆಂಡತಿ ಗಂಡನಿಗೆ ಅರ್ಧಾಂಗಿ, ಜೀವನದ ಜೊತೆಗಾರ್ತಿ ಅನಿಸಿದರೂ ಗಂಡಹೆಂಡಿರಲ್ಲಿ ತಾಳಮೇಳ ಇರದಿದ್ದರೆ ಅರ್ಧಾಂಗಿ ಜಾಕೀಟು ಎನಿಸುತ್ತದೆ. ಜೊತೆಗಾರ್ತಿ ನಾಯಿರಾಧೆಯೆನಿಸುತ್ತಾಳೆ. ಈ ಬಗೆಯ ವಿಷಾದಕರ ಅನುಭವವನ್ನು ಗರತಿ ತ್ರಿಪದಿಯಲ್ಲಿ ಅದೆಷ್ಟು ಸೂಕ್ತವಾಗಿ ವಿವರಿಸಿದ್ದಾಳೆ ನೋಡಿರಿ.

**ಮುಗಿಲ ಮ್ಯಾಲಿನ ಹಕ್ಕಿ ಹಗಲು ಮುಡಿದರೇನ**
**ಅಗಲಿ ಇರುವವರ ಗೊಡವೇನ। ಮಾಣಿಕ**
**ಹಾವಿನ ಬದಿಲಿದ್ದು ಫಲವೇನ॥**

ಪತಿಯೆಂದರೆ ಮುಗಿಲ ಮೇಲೆ ಹೊಳೆಹೊಳೆವ ಚಿಕ್ಕೆ. ಆ ಚಿಕ್ಕೆ ರಾತ್ರಿಮೂಡದೆ ಹಗಲು ಮೂಡಿದರೆ ಅದೇತರ ಹೊಳಪು? ರಾಯರು ಹಗಲು ಮಾತ್ರ ಮನೆಗೆಸುಳಿದು, ರಾತ್ರಿಕಾಲದಲ್ಲಿ ಎಲ್ಲಿ ಮರೆಯಾಗುತ್ತಾರೋ ತಿಳಿಯದು. ಹಗಲು ಮೂಡುವ ಚಿಕ್ಕೆ ಮಾತ್ರ ಆಗಿರದೆ ಪತಿಯು, ಮಾಣಿಕ ಧರಿಸಿದ ಹಾವೂ ಆಗಿದ್ದಾನೆ. ಅವಕ್ಕೆ ಮಾಣಿಕದ ಸಿಂಗಾರಕ್ಕಿಂತ ಇನ್ನೊಬ್ಬರನ್ನು ಕಚ್ಚಿ ವಿಷಭಾಧೆಗೀಡುಮಾಡುವುದೇ ಈಪ್ಸಿತ.

**ವರಗೇಡಿ ವಗೆತನ ಕುಡಬ್ಯಾಡ ಹಡೆದವ್ವ**
**ವರನೋಡ ವರನ ಗುಣನೋಡ। ಮನಿಯಾನ।**
**ಸಾಸೀವಿ ಕಾಳಷ್ಟು ರಿಣನೋಡ॥**

ಏನಿದ್ದರೂ ಬಾಳು ಒಂದು ಪ್ರಸಾದ. ಅದನ್ನು ಒಲ್ಲೆನ್ನಲಾಗದು, ಚೆಲ್ಲಿಕೊಡಲಾಗದು. ಕಣ್ಣುಮುಚ್ಚಿ ಬೊಗಸೆಯೊಡ್ಡಿ ಕುಡಿದು ಬಿಡಬೇಕು.

# ೧೬ ದುಡಿಮೆಗೆ ಹೇಸಿಕೆಯೇ?

ದುಡಿಮೆಯೆಂದರೆ ಹಣಗಳಿಸುವ ಪರಿಶ್ರಮವೆಂದೇ ತಿಳಿದಿದ್ದೇವೆ. ಆದರೆ ವೈಯಕ್ತಿಕವಾಗಿ ಮೈ-ಕೈ, ಬಟ್ಟೆಬರೆ ಅಲ್ಲದೆ ಉಪಯೋಗಿಸುವ ವಸ್ತುಗಳು ಸ್ವಚ್ಛವಾಗಿ; ದೃಢವಾಗಿ ಉಳಿಯುವಂತೆ ಆಗಾಗ ಎಚ್ಚರವಹಿಸಿ ಸರಿಪಡಿಸುವುದೇ ದುಡಿಮೆ. "ತಾನು ಉಣ್ಣುವ ಊಟ, ತಾನು ಭೋಗಿಸುವ ರತಿಕೂಟ ಅನ್ಯರಿಂದ ಮಾಡಿಸಬಹುದೇ" ಎಂದು ಬಸವಣ್ಣನವರು ಕೇಳಿದ್ದಾರೆ. ಆದರೆ ಅವರ ಮಾತಿಗೆ ಸೇರಿಸಬೇಕಾದ ವಿಷಯಗಳು ಇನ್ನೂ ಬಹಳ ಇವೆ. ಕೂಸಿನ ಮೂಗು, ಕಣ್ಣು ಮೊದಲುಮಾಡಿ, ಮುಕುಳಿ ತೊಳೆಯುವ ಕೆಲಸವನ್ನು ತಾಯಿಯಾದವಳು ಇಲ್ಲವೆ ತಾಯಿಯಂಥವಳು ( ಅಜ್ಜಿ, ಅಕ್ಕ, ಅತ್ತೆ) ಮಾಡಬೇಕಾಗುತ್ತದೆ.-ಕೂಸು ಬಾಲಕನಾಗಿ ತಿಳುವಳಿಕೆ ಬಂದು, ಸ್ವಾವಲಂಬಿಯಾಗುವ ವಯಸ್ಸಾಗಲು ಅವನು ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುವ ರೂಢಿ, ಅಭ್ಯಾಸ ಮಾಡಿಸುವವರು ತಾಯಿ ತಂದೆಗಳೇ. ಕೈಕಾಲಿಗೆ ಹೋಗಿ ಬಂದವನು ಅದೆಂಥ ದೊಡ್ಡ ಮನುಷ್ಯನಾಗಿದ್ದರೂ ತನ್ನ ಕುಂಡಿಯನ್ನು ತಾನೇ ತೊಳೆದುಕೊಳ್ಳುವನು. ಅದಕ್ಕಿಂತ ಕೆಳಮಟ್ಟದ ಕಾರ್ಯ ಇನ್ನಾವುದಿದೆ?

ಮನೆಯೊಳಗಿನ ಕಸಗುಡಿಸುವುದು, ಮುಸುರೆ ತೆಗೆಯುವದು, ಭಾಂಡೆ ತಾಬಾಣ ತಿಕ್ಕುವುದು, ಬಚ್ಚಲ ತೊಳೆಯುವುದು; ಸಾರಿಸುವುದು. ಅಂಗಳದಲ್ಲಿ ಕಟ್ಟಿದ ದನಗಳ ಗಂಜಳ ಬಳಿಯುವುದು ಮೊದಲಾದ ಕೆಲಸಗಳನ್ನು ಹೆಂಗಸರೇ ಮಾಡುತ್ತಾರೆ. ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಆಳುಗಳಿಂದ ಮಾಡಿಸಲಾಗುತ್ತದೆ.

ಮಕ್ಕಳ ಆರಯಿಕೆ, ಸ್ವಚ್ಛತೆ, ಶಿಸ್ತು ಕಾಯ್ದುಕೊಂಡು ಹೋಗುವ ಕೆಲಸವನ್ನು ಹೆಣ್ಣುಮಕ್ಕಳು ಮಾಡುವಂತೆ, ದನಕರುಗಳ ಪರಾಂಬರಿಯನ್ನೂ ಮಾಡಬೇಕಾಗುವದು. ಮಕ್ಕಳೇ-ಮರಿಗಳಂತೆ ಆಕಳು, ಎಮ್ಮೆ ಎತ್ತು; ಕುದುರೆ, ಆಡು; ಮಣಕ ಕರು ಮೊದಲಾದವು ಸ್ವಚ್ಛವಾಗಿ ಉಳಿಯುವಂತೆ ಓರಣವಾಗಿ ಲಕಲಕಿಸುವಂತೆ ಮಾಡುವುದು ಹೆಣ್ಣುಮಕ್ಕಳಿಗೆ ಸಾಧ್ಯವಾದಷ್ಟು

ಗಂಡು ಮಕ್ಕಳಿಗೆ ಸಾಧ್ಯವೂ ಆಗುವುದಿಲ್ಲ: ಸಾಧಿಸುವದೂ ಇಲ್ಲ. ದನಗಳೆಂದರೆ ಮನೆತನದ ಆಸ್ತಿ; ಜೀವಂತ ಧನ. ಅವುಗಳ ರಕ್ಷಣೆ ಆರೋಗ್ಯ ಸ್ವಚ್ಛತೆ ಮೊದಲಾದವುಗಳನ್ನು ತಾನು ಮಾಡುವುದು ಉತ್ತಮ; ಮನೆಯೊಡೆಯ ಮನೆಯೊಡತಿಯರಿಗೆ ಗೊತ್ತು ಮಾಗ ಮಾಡುವುದು ಮಧ್ಯಮ. ಆಳು ಮಾಡುವುದು ಹಾಳು, ಎಂಬುದರ ಮನವರಿಕೆಯೂ ಆಗಿರುತ್ತದೆ. ಆಳುಹಚ್ಚಿ ಮಾಡಿಸುವ ಶ್ರೀಮಂತಿಕೆಯಿದ್ದರೂ ದುಡಿಮೆಯ ಆನಂದ ದೊರೆಯ ಬೇಕಾದರೆ ಕೈಮುಟ್ಟಿ ಕೆಲಸ ಮಾಡಬೇಕು. ರಟ್ಟೆಯಲ್ಲಿ ಚಿಂತಾಕು ಎಂಬ ಬಂಗಾರದ ಆಭರನವನ್ನು ಧರಿಸಿದ ಶ್ರೀಮಂತ ಮಹಿಳೆಯು, ಚಿಪ್ಪಾಟಿ ಬಳಿಯುವ ಕೆಲಸ ಅಂದರೆ, ಜಾನಪದ ಭಾಷೆಯಲ್ಲಿ ಹೆಂಡಿಕಸ ಬಳಿಯುವ ಕೆಲಸ ಮಾಡುತ್ತಿದ್ದಾಳೆಂದರೆ ಸೋಜಿಗವಲ್ಲವೇ? ಆಕೆ ಕಾರ್ಯಮಗ್ನಳಾಗಿರುವ ಹೊತ್ತಿನಲ್ಲಿ ಯಾರೋ ನೆರಮನೆಯವರು ಬಂದು ಕೇಳಿದರು-ಚಿಂತಾಕು ಧರಿಸುವ ಸಡಗರದಲ್ಲಿ ಚಿಂತೆಯನ್ನೆಲ್ಲ ಮರೆತುಬಿಟ್ಟಿರುವಿಯಲ್ಲ! ನಿಮ್ಮರಾಯ ಅಲೊಬ್ಬಳ ಕೂಡ ನಗುತ್ತ ಇದ್ದಾನೆ. ಆ ಮಾತು ಕೇಳಿ ಆಕೆಗೆ ಎಷ್ಟೂ ತಳ್ಳಂಕವೆನಿಸಲಿಲ್ಲ. ತಲೆ ತಿರುಗಲಿಲ್ಲ ಸಹಜವಾಗಿಯೇ ಹೇಳಿದಳು-

"ನಕ್ಕರೆ ನಗಲೆವ್ವ ಅದು ನಗೆ ಮುಖದ ಕೇದಿಗೆ, ಆ ಕೇದಿಗೆಯನ್ನು ನಾನು ದಿನಾಲು ಮುಚ್ಚಿ ಮುಡಿಯುತ್ತಿದ್ದೇನೆ. ಆಕೆಯೊಂದು ಬಾರಿ ಮುಡಿಯಲಿ. ಅದಕ್ಕೇಕೆ ಚಿಂತೆ?

ಮತ್ತಾರಾದರೂ ಹರಕಿಹೆಂಗಸಾಗಿದ್ದರೆ, ಚಿಪ್ಪಒತ್ತಟ್ಟಿಗೆ ಚಿಪ್ಪಾಟಿ ಮಾಡಿ, ಗಂಡನನ್ನು ಎಳತಂದು ಬೀದಿಗೆ ನಿಲ್ಲಿಸುತ್ತಿದ್ದಳೆನೋ. ಆದರೆ ಆ ಶ್ರೀಮಂತಿಯ ಮನಸ್ಸು ಸಹ ಶ್ರೀಮಂತವೇ ಆಗಿತ್ತು. ಶ್ರೀಮಂತ ಮನಸ್ಸು ಆಡಿಸಿದ ಮಾತು ಶ್ರೀಮಂತವೇ ಆಗಿರುವುದು ಸಹಜವಾಗಿದೆ. ಒಂದು ಕೈ ರಟ್ಟೆಯಲ್ಲಿ ಚಿಂತಾಕು, "ಇನ್ನೊಂದು ಕೈಯಲ್ಲಿ ಕಸಬರಿಗೆ. ರೊಜ್ಜರಾಡಿ ಬಳಿಯುವ ಕೆಲಸದಲ್ಲಿ ಆಕೆ ತಲ್ಲೀನಳಾಗಿದ್ದಾಳೆ, ಮನೆಯ ಕೆಲಸಮನದ ಕೆಲಸವಾದರೆ ಬಿಟ್ಟೀಬೆಸರ ಎಲ್ಲಿಂದ ಬಂದೀತು?

ತಮ್ಮನೇ ಆಗಲಿ, ಮಗನೇ ಆಗಲಿ, ಆ ಬೆಳ್ಳಗಿನ ಎತ್ತು; ಬೆಳ್ಳಿಯ ಬಾರಕೋಲು ಇವುಗಳೊಡನೆ ಹೊಲದ ಕೆಲಸ ಮಾಡುವನೆಂದು

ಅಕ್ಕನಿಗೆ ತಾಯಿಗೆ ಪರಮಸಂತೋಷ. ಅದು ಕೀಳು ಕೆಲಸ, ಥಡ್ಡರ ಥಾವತಿ ಎಂದು ಭಾವಿಸಿದವರೇ ಅಲ್ಲ. ಹೊಲತೋಟವೆಂದರೆ ಒಕ್ಕಲಿಗನಿಗೆ ಸುರ ಲೋಕ, ಸ್ವರ್ಗಲೋಕ. ಅಲ್ಲಿ ಹೋದರೆ ಮನೆ ಮರೆಯುತ್ತಾನೆ. ಅದಕ್ಕೆಲ್ಲ ಕಾರಣವೆಂದರೆ, ತೋಟದ ವೈಭವವೇ. ಅದನ್ನು ಕಂಡವರ ಹಸಿವೆ, ನೀರಡಿಕೆ ಹೇಳಹೆಸರಿಲ್ಲದೆ ಹೋಗಿಬಿಡುತ್ತವೆ.

ತೋಟಕ ಹೋದಣ್ಣ ' ಊಟಕ್ಕ ಬರಲಿಲ್ಲ
ತೋಟದ ಹೂವ ತಲೆತುಂಬ। ಇಟಕೊಂಡು।
ಊಟದ್ಹಂಬಲ ಮರೆತಾನ॥

ತೋಟದ ಹೂಗಳನ್ನು ತಲೆತುಂಬ ಇಟ್ಟುಕೊಂಡು ಊಟವನ್ನು ಹಂಬಲಿಸದೆ ಮಲಗುವ ಅಣ್ಣನ ಹಾಗೂ ಎಚ್ಚರಿಕೆಯಲ್ಲಿ ಅವನ ಚೈತನ್ಯದ ಚತುರಾಯಿಯನ್ನು ತಂಗಿಯು ಹೇಳುವ ಭಾಷೆಯಲ್ಲಿಯೇ ಕೇಳಬೇಕು.

ಕುದುರೆಯ ಕುಣಿಸುತ ಆನೆಯ ನಡಿಸುತ
ಅರಗಿಳಿಗೆ ಮಾತು ಕಲಿಸುತ । ಬರತಾನ ।
ಬರಿಗೊಡದಮ್ಮ ಬದಿಗಾಗ ॥

ಕುದುರೆ ಕುಣಿಸುವಾಗ ನುರಿತಸ್ವಾರ, ಆನೆ ನಡಿಸುವಾಗ ಸಮರ್ಥ ಮಾವುತ, ಇವೆರಡು ಅವನ ದೈಹಿಕ ಸಾಮರ್ಥ್ಯಕ್ಕೆ ಸ್ಪಷ್ಟಸಾಕ್ಷಿಯಾಗಿವೆ. ಅದ ರಂತೆ ಬೌದ್ಧಿಕ ಚಾತುರ್ಯವನ್ನೂ ಅಣ್ಣನು ಸಂಗ್ರಹಿಸಿದ್ದಾನೆ. ಅಂತೆಯೇ ಅರಗಿಳಿಗೆ ಮಾತುಕಲಿಸಬಲ್ಲವನಾಗಿದ್ದಾನೆ.

ಒಕ್ಕಲಿಗ, ತೋಟಗಾರ ಎಂದರೆ, ಬರೆ ಕೊಳಕು ಅಂಗಿಯನ್ನು ತೊಟ್ಟು, ಚಿಂದಿ ರುಮಾಲನ್ನು ಸುತ್ತುವ, ಹೊಟ್ಟೆ ಹುರಿಹಾಕಿಕೊಂಡು ಹಣೆ ಯಲ್ಲಿ ಹದಿನಾರು ಗಂಟು ಮೂಡಿಸಿಕೊಂಡು ನಿರಾಶೆಯ ಬಾಳಿನಲ್ಲಿ ತೊಳಲಾ ಡುವ ಕಂಗಾಲನಲ್ಲ. ನಗಬೇಕೆಂದರೆ ನಗುವಂಥ ಹೋರಿಗಳನ್ನು ಕಟ್ಟಿದ್ದಾನೆ. ಹಕ್ಕಿಹಾರಿದರೆ ಬೆದರುವಂಥ ಹೋರಿಗಳನ್ನು ಗಾಡಿಗೆ ಹೂಡಿದರೆ ಸುಂಕದ ಕಟ್ಟೆಯನ್ನು ಲೆಕ್ಕಿಸದೆ ಜಕಾತಿ ಮೀರಿಬರುವಂಥವು. ಒಕ್ಕಲಿಗನೆಂದರೆ ಬೆವರಿನಲ್ಲಿ ತೊಯ್ದು ಕೊಳಕು ವಾಸನೆ ಬೀರುವ ನಾತಬಡಕ ಕಾಡು-

ಪ್ರಾಣಿಯಲ್ಲ. ಕೆಲಸಕ್ಕೆ ಮಣಿಯದ, ಸಿಂಗಾರಕ್ಕೆ ದಣಿಯದ ರಾಜಜೀವಿ ಆಗಿರುತ್ತಾನೆ ಒಕ್ಕಲಿಗ.

ಸರದಾರ ಬರುವಾಗ ಸುರಿದಾವ ಮಲ್ಲಿಗೆ
ಧೊರೆ ನನ್ನ ತಮ್ಮ ಬರುವಾಗ। ಯಾಲಕ್ಕಿ
ಗೊನೆಬಾಗಿ ಹಾಲ ಸುರಿದಾವ।।

ಇಂಥ ಅಣ್ಣಗಳೆಂದರೆ ತಂಗಿಯ ಪಾಲಿಗೆ ಬಂಗಾರಬಳಿಯ ಮುಂದಿರುವ ಬಿಂದುಲಿ ಇದ್ದ ಹಾಗೆ. ಅವನ ಜೊತೆಗಿರುವ ಹಿಂದುಮುಂದಿ ಬಂಗಾರ ಬಳಿಯಾದರೆ, ಅಣ್ಣ ಬಿಂದುಲಿ. ಈ ಮಾತನ್ನು ಅಕ್ಕನ ಹಾಡಿನಲ್ಲಿ ಕೇಳಬೇಕು.

ಬಂಗಾರ ಬಳಿ ಮುಂದ ಬಿಂದುಲಿದ್ದರ ಚಂದ
ಹಿಂಡು ಮಂದ್ಯಾಗ ನನ್ನಣ್ಣ। ತಾ ಕೂತು
ಬಂದನೆಂದರೆ ಬಲುಚಂದ।।

ಭೂಮಿತಾಯಿಯ ಚೊಚ್ಚಲಮಗನೆನಿಸಿದ ಒಕ್ಕಲಿಗನ ಐಶ್ವರ್ಯದ ಮುಂದೆ, ಅರಮನೆಯ ಸಪ್ತಗರವನ್ನು ನಿವಾಳಿಸಬೇಕು. ಐಶ್ವರ್ಯವೆನ್ನುವುದು ಈಶ್ವರನ ಅಕ್ಷಯ ಸಾನ್ನಿಧ್ಯ. ಅದು ಒಕ್ಕಲಿಗನ ತುಂಬುಜೀವನಕ್ಕೆ ಮಾತ್ರ ಒಪ್ಪುತ್ತದೆ. ದುಡಿಮೆಗೆ ಹಿಂಜರಿಯದ ಸಾಮರ್ಥ್ಯ ಕಟ್ಟು. ಹಾಲು ಮೊಸರುಗಳಿಂದ ಕೈತೊಳಕೊಳ್ಳುವ ಸಿರಿಯೊಟ್ಟು. ಯಾವುದಕ್ಕೂ ಅವನ ಕೈಮೇಲೆ. ಕೊಡುಗೈ ದೊರೆ ಅಂದರೆ ಅವನೇ. ಹೊಲ ಉತ್ತಲಿ. ತೋಟದಲ್ಲಿ ಪೊಟ್ಟೆಹೊಡೆಯಲಿ. ಬೀಳು ಭೂಮಿಯಲ್ಲಿ ದನ ಮೇಸಲಿ, ಕುರಿದಡ್ಡಿಯಲ್ಲಿ ನಾಯಿಗಳ ಜೊತೆಗೆ ಮಲಗಿಕೊಳ್ಳಲಿ–ಎಲ್ಲವೂ ಚಂದವೇ. ಯಾವ ಕೆಲಸಕ್ಕೆ ನಿಂತರೂ ಮುಖ ಅರಳುವದು. ಅದನ್ನು ಕಂಡು ಅಕ್ಕತಂಗಿಯರು ಹಿರಿಹಿರಿ ಹಿಗ್ಗುವರು ದುಡಿಮೆ, ಉದ್ಯೋಗ ಇವು ಬರಿ ಹೊಟ್ಟೆಯ ಪಾಡಲ್ಲ.ಕೈಲಾಸದಸುಖ ತಂದೊದಗಿಸುವ ಉಪಾಯ.

ತನ್ನ ಮನೆಯ ಒಂದು ಭಾಗದಲ್ಲಿ ಕೊಟ್ಟಿಗೆ ಮಾಡಿಕೊಂಡು ಅಲ್ಲಿ ದನಕಟ್ಟಿ ಮೇವು ಹಾಕಿ ಕಾಲಕಾಲಕ್ಕೆ ಸೆಗಣಿ-ರೊಜ್ಜುಗಳನ್ನು ಬಳಿಯುವ ಕೆಲಸ ಹೀನವೆಂದು ಒಕ್ಕಲಿಗನು ತಿಳಿದೇ ಇಲ್ಲ. ಸೆಗಣಿಯೆಂದರೆ ದನಗಳ

ಮಲ ಎಂಬರ್ಥವನ್ನು ಲೆಕ್ಕಿಸಿದರೆ ಅದನ್ನು ಮುಟ್ಟುವುದೂ ಮುಡಿಕಟ್ಟಿನ ಕೆಲಸ ಎನ್ನಬೇಕಾದೀತು. ಆದರೆ ಅದೇ ಸೆಗಣಿಯಿಂದ ಅಡಿಗೆಯ ಮನೆ-ದೇವರ ಮನೆಗಳ ನೆಲವನ್ನು ಸಾರಿಸುವರೆಂದರೆ; ಸೆಗಣಿಯ ಬಗ್ಗೆ ಅವರ ಭಾವನೆ ಅದೆಷ್ಟು ಉದಾತ್ತವಾಗಿರಬಹುದೋ ತಿಳಿಯದು, ದೇವರಿಗೆ ಅಭಿಷೇಕ ಮಾಡಿಸುವಾಗ ಪಂಚಗವ್ಯಗಳನ್ನು ಅಂದರೆ ಆಕಳ ಹಾಲು, ಮೊಸರು, ತುಪ್ಪ, ಮೂತ್ರ ಸೆಗಣಿ ಗಳನ್ನು ಉಪಯೋಗಿಸುವುದು ಯಾರಿಗೆಗೊತ್ತಿಲ್ಲ ?

ದನಗಳೆಂದರೆ ಒಕ್ಕಲಿಗನ ಒಡನಾಡಿಗಳು, ಮೂಕ ಮಿತ್ರರು, ಕೂಡಿ ದುಡಿಯುವ ಸಹಕಾರಿಗಳು, ಕೂಡಿ ಉಣ್ಣುವ ಸಹಜೀವಿಗಳು ತೆನೆಯ ಕೆಳಗಿನ ದಂಟು ತಮಗೆ ದಂಟಿನ ತುದಿಯಲ್ಲಿರುವ ತೆನೆ ಒಕ್ಕಲಿಗನಿಗೆ ಎಂಬ ಪಟ್ಟಿಯನ್ನು ಸಮ್ಮತಿಸಿವೆ. ದನಕ್ಕೆ ತೊನಸಿ ನೊಣ ಕಡಿದರೆ ಒಕ್ಕಲಿಗನು ತುರಿಸಿ ಕೊಳ್ಳಬೇಕು. ಅಂಥಸಂಬಂಧವಿದೆ ಅವರಲ್ಲಿ.

ಹಂತಿಯ ಎತ್ತುಗಳ ಮೈಗೆ ಸುಂಕ ತಗುಲಿದರೆ ಒಕ್ಕಲಿಗನ ಜೀವಕ್ಕೆ ಕಸಿವಿಸಿ-

ಹಂತಿಯ ನಮ್ಮೆತ್ತು ಹಂತೀಲಿ ಬಂದರ
ಸೆರಗೀಲಿ ಸುಂಕ ವರಸೇನ ।ತಮ್ಮನ ।
ಹಂತಿಯ ಎತ್ತು ಹದಿನಾರು ॥

ದುಡಿಮೆಯೆಂದರೆ ಒಕ್ಕಲಿಗನಿಗೆ ದೇವ ಪೂಜೆಯೇ ಸರಿ. ದೇವರ ಪೂಜೆ ಮಾಡುವವನು ಮೊದಲು ತಾನು ಜಳಕ ಮಾಡಿ, ವಿಭೂತಿ ಇಲ್ಲವೆ ಗಂಧ ಧರಿಸಿ ದೇವರಿಗ ಮೀಸಲು ನೀರೆರೆದು ವಿಭೂತಿ ಗಂಧ ಧಾರಣ ಮಾಡು ವನು. ದೇವರಿಗೆ ನೈವೇದ್ಯ ಮೊದಲು. ಪೂಜಿಸುವವನ ಊಟ ಒಂದುಗಡೆ. ಇವೆಲ್ಲ ಕ್ರಮಗಳು ದನಗಳ ಆರೈಕೆಯ ರೀತಿಯಲ್ಲಿಯೂ ಕಂಡುಬರುತ್ತವೆ. ಎತ್ತು ಅಂದರೆ ಗಂಡು ದನವೆಂದು ತಿಳಿದಿಲ್ಲ ಒಕ್ಕಲಿಗ. ಬಸವಣ್ಣನೆಂದು ತಿಳಿದಿದ್ದಾನೆ.

ಹಸನುಳ್ಳ ವಿಭೂತಿ ನೊಸಲೀಗಿ ಹಚಗೊಂಡು
ಬಸವಣ್ಣಗ ಮೇವು ಕೊರೆಯುವ । ತಮ್ಮಗ ।
ಬಸವೇಶ ವರವ ನೀಡ್ಯಾನ ॥

ಗೊಬ್ಬರದ ಗಾಡಿ ಹೊಡೆಯುವಾಗ ಒಕ್ಕಲಿಗನ ವೇಷ-ಭೂಷಣಗಳನ್ನು ನೋಡಿದರೆ ಕಣ್ಣುಗಳು ಸಹ ಹೇಸಿಕೊಳ್ಳುವವು. ಆದರೆ ಆತನ ಅಕ್ಕ-ತಂಗಿಯರು ಆ ದೃಶ್ಯ ಒಂದು ಬಗೆಯ ಚೆಲುವೆಂದೇ ಬಗೆಯುವರು.

ಕಬ್ಬು ಕಾರುಳ್ಳವನೆ ಹುಬ್ಬು ಸೇರುಳ್ಳವನೆ
ಗೊಬ್ಬರದ ಗಾಡಿ ಹೊಡೆವವನೆ । ಅಣ್ಣಯ್ಯನ ।
ಹುಬ್ಬಿಗಿನ್ನೊಂದು ಸರಿಯುಂಟೆ ?

ಭೂಮಿ ತಾಯಿಗೆ ಪೂರ್ಣಗರ್ಭಿಣಿಯಾಗುವುದು ಗೊಬ್ಬರ. ಆ ಬಳಿಕ ಬಿತ್ತುವ ಬೀಜ, ಹೂಡಲು ಕೈಕೆಸರಾಗಬೇಕು. ಆ ಮೇಲೆ ಬಾಯಿ ಮೊಸರಾಗುವದು. ಹಿಡಿಬಿತ್ತಿ ಪಡೆ ಬೇಡುವ ಆ ಚಳಕ ಅದ್ಭುತ ಪವಾಡವೆಂದೇ ಹೇಳಬೇಕು. ಕಣದ ಅಗಲಳತೆಯೆಷ್ಟು, ಹರಿಯೆಷ್ಟು, ಎತ್ತುಗಳ ಸಂಖ್ಯೆ ಎಷ್ಟು, ಹಂತಿ ಹೊಡೆಯುವ ಆಳುಗಳೆಷ್ಟು, ಹಾಡುವರೆಷ್ಟು, ಅವರೆಲ್ಲರ ಉತ್ಸಾಹವೆಷ್ಟು, ಬಾಯಿಂದ ಹೇಳಲಿಕ್ಕಾಗದು. ನೋಡಿಯೇ ತಣಿಯಬೇಕು. ಕಂಡೇ ತಿಳಿಯಬೇಕು. ಹೊಲದ ಲಕ್ಷ್ಮಿಯು ಸಾಕ್ಷಾತ್ಕಾರವಾಗುವುದು ಹದ-ಮಾಗಿದಲ್ಲಿಯೇ ಮುತ್ತಿನಂಥ ಜೋಳ, ಹವಳದಂತಹ ಗೋಧಿ-ಎಂದು ಯಾರಬಾಯಿಂದಾದರೂ ಸಹಜ ಹೊರಡುವ ಮಾತಾಗಿದೆ.

ಹನ್ನೆರಡೆತ್ತಿನ ಬಾರಿ ಹೊನ್ನ ಮೇಟಿ ಕಂಬ
ಬಾಸಿಂಗ ಕೊಳಗ ಬಲಗೈಯು । ಅಣ್ಣಯ್ಯ ।
ರಾಶಿ ಅಳೆಯೋದು ಬೆಳಗಾಯ್ತು ॥

ಹೀಗೆ ಒಕ್ಕಲಿಗನು ಅನೇಕಮಾನ ದಾನಿ, ಅಪ್ರತಿಮ ದಾನಿ, ಸಂಗಮ ಜನಧನ ದಾನಿ, ಕೌತುಕದ ದಾನಿ, ಮಹೋನ್ನತದಾನಿಯೆನಿಸಿದರೆ ಆಶ್ಚರ್ಯವೇನು ?

## ೧೭ ಮನೆಯೊಂದು ಆಶ್ರಮ

ಋಷಿಗಳ ಆಶ್ರಮದಲ್ಲಿ "ಹರಿಣಾರಿಯು ಮರಿಗಳ್ಗೆದೆ ನೆಕ್ಕುತಿರ್ಕುಂ" ಎಂದು ಓದಿದ್ದು ನೆನಪಿದೆ. ಆಶ್ರಮದ ಅಧಿಪತಿಯಾದ ಋಷಿಯ

ಅಥವಾ ಮುನಿಯ ಪ್ರಭಾವದಿಂದ, ಪ್ರಾಣಿಗಳು ತಮ್ಮ ಹುಟ್ಟು ವೈರತ್ವವನ್ನು ಮರೆತು; ಒಂದನ್ನೊಂದು ಪ್ರೀತಿಸುತ್ತವೆಂದು ಕೇಳಿದ್ದೇವೆ ಮನೆಯೂ ಒಂದು ಆಶ್ರಮವೇ. ಅದಕ್ಕೆ ಗೃಹಸ್ಥನ ಆಶ್ರಮವೆನ್ನಬಹುದು. ಒಂದು ಮನೆಯಲ್ಲಿ ಅತ್ತೆ-ಸೊಸೆ, ಹಿರಿ ಚಿಕ್ಕಪ್ಪಗಳ ಮಕ್ಕಳಾದ ಭಾಗಾದಿಗಳು, ಸವತಿ-ಮಕ್ಕಳು ಇರುವುದುಂಟು. ಅವರೆಲ್ಲರೂ ಒಂದಕ್ಕೊಂದು ಸೇರದ ಜೀವಿಗಳು. ಒಂದೊಂದು ಮನೆಯಂತೂ ಹೇಳಿಮಾಡಿಸಿದ ಅರಗಿನಮನೆಯಂತಿರುತ್ತವೆ. ಯಾರು ಪಾಂಡವರೋ ಯಾರು ಕೌರವರೋ?

ಶಾಂತೀನಿಕೇತನ ಆಶ್ರಮದಲ್ಲಿ ದೇವೇಂದ್ರನಾಥ ಠಾಕೂರರು. ಧ್ಯಾನಸ್ಥರಾಗಿ ಕುಳಿತಾಗ ಇಣಚಿಗಳು ಅವರ ತೊಡೆಯನ್ನೇರಿ ಹಣ್ಣು ತಿನ್ನುತ್ತಾ ಕುಳಿತುಕೊಳ್ಳುತ್ತಿದ್ದವಂತೆ " ಅದ್ವೇಷ್ಟಾ ಸರ್ವ ಭೂತಾನಾಂ ಮೈತ್ರಃ ಕರುಣ ಏವಚ " ದ್ವೇಷಬುದ್ಧಿಯನ್ನು ಇಲ್ಲದಾಗಿಸಿ, ಸ್ನೇಹ ಬುದ್ಧಿಯನ್ನು ಸರ್ವತ್ರದಲ್ಲಿ ತೋರಿಸಬಲ್ಲ ಹಾಗೂ ಬೀರಬಲ್ಲ ಒಬ್ಬ-ವ್ಯಕ್ತಿಯಿದ್ದರೂ ಸಾಕು. ಆ ದಿವ್ಯಶಕ್ತಿಯ ಪ್ರಭಾವದಿಂದ ಮನೆಯೊಳಗೆ ಸ್ವಾಭಾವಿಕವಾಗಿ ಕಾಣಿಸಿಕೊಳ್ಳಬಹುದಾದ ದ್ವೇಷ ಬುದ್ಧಿಯು ತಲೆಯೆತ್ತದೆ ಕರಗಿಹೋಗಬಹುದಾಗಿದೆ. ಮನೆತನದಲ್ಲಿ ಅಗ್ನಿದಿವ್ಯಕ್ಕೆ ಮುಂಚೂಣಿಯಲ್ಲಿ ನಿಂತವಳೆಂದರೆ ಮನೆಯೊಡತಿ. ಆಕೆಯ ಹಾರಯಿಕೆ, ಪ್ರಾರ್ಥನೆ ಇಂತಿದೆ.

ಭಾಗಾದಿ ಬಲಕಿರಲಿ ವೈರಿತಾ ಎಡಕಿರಲಿ
ಛಾಡಿ ನಿನ ಮನಿಯು ಇದರಿರಲಿ | ಬಲಭೀಮ
ದೇವ ನನಮೇಲೆ ದಯವಿರಲಿ ||

ಬಲಭೀಮದೇವನ ದಯೆ ಮನೆಯೊಡತಿಯ ಮೇಲಿದ್ದರೆ, ತನ್ನ ಪರಿಸರದಲ್ಲಿ ಭಾಗಾದಿಯಿರಲಿ, ವೈರಿಯಿರಲಿ, ಛಾಡಿಹೇಳುವ ಪಿಸುಣಿಗರಿರಲಿ ಅವರೆನ್ನಲ್ಲ ಒಂದೇ ತಟ್ಟೆಯಲ್ಲಿ ನೀರು ಕುಡಿಸುವ ಸಾಮರ್ಥ್ಯ ಆಕೆಯಲ್ಲಿ ಉಂಟಾಗುತ್ತದೆ. ಮನೆಯ ಜನರಲ್ಲಿರುವ ವಿವಿಧ ಸ್ವಭಾವಗಳು ಅವೆಂಥವೇ ಇರಲಿ, ಮನೆಯಲ್ಲಿ ಸಾಕಿದ ನಾಯಿಯಂತೆ, ಸಾಕದಿದ್ದರೂ ಹೆಚ್ಚಿನ ಹಿರಿಮೆದೊಟ್ಟು ಮನೆಯ ಒಳ-ಹೊರಗು ಕಾರಭಾರಮಾಡುವ ಬೆಕ್ಕು

ಇರುತ್ತದೆ. ಜಂತೆಯಲ್ಲಿ ಮೂಲೆ ಮೂಲೆಗಳಲ್ಲಿ ಬಿಲ ಮಾಡಿಕೊಂಡು ಇಲಿಗಳು ವಾಸಿಸುವವು. ನಾಯಿಗಂಜುವ ಬೆಕ್ಕು, ಇಲಿಗಂಜಿಸಿ ಹಿಡಿದ ನೊಣೆದು ಹಾಕುತ್ತದೆ. ಅದೇ ಮುಸಡಿಯನ್ನು ಹಾಲುಗಡಿಗೆಯಲ್ಲಿ ಅದ್ದಿ ಹಂಸಕ್ಷೀರನ್ಯಾಯದಂತೆ ಹಾಲಮೇಲಿನ ಕೆನೆಯನ್ನು ಮಾತ್ರನುಂಗಿ, ಬೆಕ್ಕು ಬೆಕ್ಕು ಅನ್ನುವಷ್ಟರಲ್ಲಿ ಹಾರಿಹೋಗಿರುತ್ತದೆ. ಗುಬ್ಬಿಗಳು ಚಪ್ಪರದಲ್ಲಿ ಮನೆಮಾಡಿ, ಈ ಮನೆ ತನ್ನದೇಕಲ್ಲ-ಎಂದು ಕೇಳುತ್ತವೆ. ಅಗೋ ಅಲ್ಲಿ ಚೇಳು. ಇಗೋ ಇಲ್ಲಿ ಹಲ್ಲಿ. ಹಲ್ಲಿಯನ್ನು ಕಾಣುತ್ತಲೆ ಚೇಳು ಕೊಂಡಿಯನ್ನೇ ಚೆಲ್ಲುತ್ತದೆ. ಇಲ್ಲದಿದ್ದರೆ ಒಲೆಯ ಬೂದಿಯಲ್ಲಾಗಲಿ ಅಂಗಳದ ಸೆಗಣಿಯ ಬಟ್ಟಲಲ್ಲಾಗಲಿ ತಲೆಮರೆಸಿ, ಕೈಹಾಕಬಂದವರಿಗೆ ಕುಟುಕಿ, ಅಡಗಿಕೊಳ್ಳುವಷ್ಟರಲ್ಲಿ ಯಾರಕಣ್ಣಿಗಾದರೂ ಬಿದ್ದರೆ, ಕೆರವಿನಿಂದ ಕುಕ್ಕಿಸಿ-ಕೊಂಡು, "ಚೇಳು ಬಸಿರಾಗಿದ್ದೇ ಕಚ" ಅದಂತೆ, ಅಂದು ಅದು ಕುಟುಕಿದ್ದೇ ಕಡೆ ಆಗುತ್ತದೆ.

ಒಂದು ಮನೆಯಲ್ಲಿ ಇಷ್ಟೊಂದು ವೈವಿಧ್ಯದ ಪರಿಸರವನ್ನು ತೂಗಿಸಿಕೊಂಡು, ನೀಗಿಸಿಕೊಂಡು ನಿರ್ವಹಿಸುವ ನಿಸರ್ಗಶಕ್ತಿ ಗೃಹಿಣಿಯಲ್ಲಿಯಿದೆಯೆಂದೇ ಮನೆತನದ ಹೂರಣ ಕಡುಬಿನಲ್ಲಿಯೇಅವಿತುಕೊಂಡಿರುತ್ತದೆ. ಪ್ರಸಂಗಾನುಸಾರವಾಗಿ ಅದು ಹೊರಬೀಳಲೂಬಹುದಾಗಿದೆ. ಮನೆಯ ಕೋಣೆ-ಪಡಸಾಲೆಗಳಲ್ಲಿ ಮನೆಯವರಿದ್ದರೆ, ಕೊಟ್ಟಿಗೆಯಲ್ಲಿ ದನಕರುಗಳು ವಾಸಿಸುತ್ತವೆ. ಅಂಗಳದಲ್ಲಿಯೋ ತಲೆವಾಗಿಲಮುಂದೆಯೋ ನಾಯಿಬಿದ್ದಿರುತ್ತದೆ. ಈ ಎಲ್ಲ ಪ್ರಾಣಿಗಳು ಮನೆತನದ ಹೊಣೆಹೊತ್ತಹಾಗಿವೆ ಮತ್ತು ಅಧಿಕೃತವಾಗಿ ಮನೆತನದವರೆನಿಸಿವೆ.

ಎತ್ತು ನಂದಿಯ ಅವತಾರವೆನ್ನುವಂತಿದೆ. ಅದು ಶಿವನವಾಹನವಾದರೆ ನಂದಿ, ವೃಷಭ ಎನಿಸುತ್ತದೆ. ಶಿವನಿಗೆ ವಾಹನವಾಗದ ಎತ್ತು ಬಿಡಾಡಿ ದನವೆನಿಸುತ್ತದೆ. ಆ ಪಾಪವನ್ನು ಪರಿಹರಿಸಿಕೊಳ್ಳುವ ಸಲುವಾಗಿಯೋ ಏನೋ ಒಕ್ಕಲಿಗನ ಸಹಕಾರಿಯಾಗಿ, ಸಹಜೀವಿಯಾಗಿ, ಸಹವಾಸಿ-ಯಾಗಿರುತ್ತದೆ. ಬಸವೇಶ್ವರರು ನಂದಿಯ ಅವತಾರವಾಗಿ ಶಿವನನ್ನು ಹೊತ್ತುಕೊಂಡು ಭೂಮಿಗಿಳಿದು ಸಾವಿರ ಸಾವಿರವರುಷದ ಪ್ರಯೋಜನಕ್ಕೆ

ಬರುವ ಕೆಲಸ ಮಾಡಿ ಹೋದದ್ದನ್ನು ಮರೆಯುವಂತಿಲ್ಲ. ಬಸವೇಶ್ವರ ಹೇಳಿಕೇಳಿ ಅವತಾರಿ. ಆದರೆ ಎತ್ತು ಶಾಪಗ್ರಸ್ತನಂದಿ. ಅವತಾರಿಗೆ ಮನುಷ್ಯರೂಪ ಪ್ರಾಪ್ತವಾದರೆ, ಶಾಪಗ್ರಸ್ತನಿಗೆ ದನದ ರೂಪ ಪ್ರಾಪ್ತವಾಗುತ್ತದೆ. ಆದರೆ ಸಂಪೂರ್ಣ ಶಾಖಾಹಾರಿ, ಕನಸಿನಲ್ಲಿಯೂ ಮಾಂಸವನ್ನು ಮುಟ್ಟದು. ಹೀಗೆ ಎತ್ತು ಮನೆಯಾಶ್ರಮದಲ್ಲಿ ಒಂದು ಬಟುವಾಗಿ, ಬ್ರತಿಯಾಗಿ ಜೀವನ ಸಾರ್ಥಕಮಾಡಿಕೊಳ್ಳುತ್ತದೆ. ಬದುಕಿದ್ದರೆ ಎತ್ತು ಒಂದು ಪ್ರಯೋಜನಕ್ಕೆ ಬರುವಂತೆ, ಸತ್ತಮೇಲೆ ಹಲವಾರು ಪ್ರಯೋಜನಗಳಿಗೆ ಬರುವದು. ಮಿಣಿ, ಬಾರಕೋಲು, ಕೆರವು ಮೊದಲಾದವುಗಳನ್ನು ಸತ್ತದನದ ತೊಗಲಿನಿಂದ ಮಾಡುತ್ತಾರೆನ್ನುವುದು ಯಾರಿಗೆ ಗೊತ್ತಿಲ್ಲ? ಹೀಗೆ ಎತ್ತು ಅಥವಾ ಆಕಳು ಒಕ್ಕಲಿಗನ ರಿಣವನ್ನು ಇಡಿಯಾಗಿ ತೀರಿಸುತ್ತಿರುವುದು ಆಶ್ಚರ್ಯವಲ್ಲವೇ?

ಪ್ರಾಣಿಯಾದ ಎತ್ತು ಕೊಟ್ಟಿಗೆಯಲ್ಲಿ ವಾಸಮಾಡಿ ವಾನಪ್ರಸ್ಥಾಶ್ರಮಿಯಂತೆ ಶುದ್ಧ ಶಾಕಾಹಾರದಿಂದ ಬದುಕುವ, ಕಾಯಕದಲ್ಲಿ ತ್ರಿಕರಣಪೂರ್ವಕವಾಗಿ ನಿರತವಾಗುವ ಆ ಎತ್ತು, ಮನೆಯಾಶ್ರಮಕ್ಕೆ ಒಪ್ಪುವ ಒಂದು ಮಹತ್ ಪ್ರಾಣಿ ಅದಕ್ಕೆಜನ್ಮಕೊಟ್ಟ ಗೋಮಾತೆಯಂತೂ ಗ್ರಹಸ್ಥನಿಗೆ ಮಹತ್‌ಭಾಗ್ಯ; ಪ್ರತ್ಯಕ್ಷ ದೇವತೆ. ಅದರಂತೆ ಎತ್ತು ಅಂದರೆ ಶಾಪಗ್ರಸ್ತ ಬಸವನೆಂದೇ ಒಕ್ಕಲಿಗರು ತಿಳಕೊಂಡಂತೆ ತೋರುತ್ತದೆ. ಆ ವಿಷಯವನ್ನು ಅವನು ಹಂತಿಯ ಹಾಡುಗಳಲ್ಲಿ ಬಹಳಸಾರೆ ತೋರ್ಪಡಿಸಿದ್ದಾನೆ. ಗರತಿ ಸಹ ಬೀಸುಕುಟ್ಟುವಾಗ ಹಾಡುವ ಪದಗಳಲ್ಲಿ ಬಸವನ ಹೆಸರು ಸೇರಿಸಿದ್ದು ಕಂಡು ಬರುತ್ತದೆ.

ಸತ್ಯವಂತರೆಂದು ಶರಣು ಮಾಡಲಿಹೋದ
ಮುತ್ತ್ಯಾಕ ಮಾರಿ ತಿರಿವ್ಯಾರ | ಬಸವಣ್ಣ
ಮುತ್ತು ತಂದೀದ ಮುಗಡಾಕ ||
ಕಸವು ಹೊಡೆದ ಕೈಯುಕಸ್ತೂರಿನಾತಾವ
ಬಸವಣ್ಣ ನಿನ್ನ ಸೆಗಣೀಯು | ಬಳೆದಕ್ಕೆ
ಎಸಳ ಯಾಲಕ್ಕಿ ಗೊನಿನಾತ ||

ತುಂಬಿದ ಹೊಳಿಯಾಗ ಕೊಂಬು ಕಾಣಿಸತಾವ
ಇಂಬುಳ್ಳ ಇಣಿಯು ಬಸವಣ್ಣ । ಬರುವಾಗ ।
ಗಂಗೆಮ್ಮ ಕೈಯ ಮುಗಿದಾಳ ॥
ಹಾದಿಯ ಹೊಲನೋಡೊ ಗೋದಿಯ ಬೆಳೆನೋಡೊ
ಹಾದು ಹೋಗವನ ನಗಿನೋಡೋ । ನಂ ಬಸವ ।

ಆರಾಮ ನೋಡೊ ಅಡಿವ್ಯಾಗ ॥
ಆ ಕಲ್ಲ ಈ ಕಲ್ಲ ಹಸಿರು ಹಳದಿಯಕಲ್ಲು
ಹೆಸರಾದ ಕಲ್ಲ ಕೊಡೆಕಲ್ಲ । ಬಸವಗ
ಹಸರುಗಲ್ಲೀಪ ಹೊಲಿಸೇನ ॥

ಹೆಣ್ಣುಮಕ್ಕಳು ಅರಲಿನಿಂದ ಎತ್ತು ಮಾಡಿ, ಬಸವನೆಂದು ಪೂಜಿಸುವ [illegible]ದಲ್ಲಿ [illegible]. ಆಗ ಹೇಳುವ ಪದದ ಸೊಗಸು ಕೇಳಿದರೇ ಗೊತ್ತಾಗುವದು, "ಬಸವಗ ಬಸವೆನ್ನಿರೆ । ಬಸವನ ಪಾದಕ ಶರಣೆನ್ನಿರೇ" ಎಂದು ಆರಂಭವಾಗುವ ಹಾಡು –

ಒಂದು ಸುತ್ತಿನ ಕ್ವಾಟಿ । ಅದರಾಗ । ಒಂದುಕೂತಾನ ಬಸವ
ಎರಡು ಸುತ್ತಿನ ಕ್ವಾಟ । ಅದರಾಗ । ಎದ್ದುಕೂತಾನ ಬಸವ
ಮೂರು ಸುತ್ತಿನ ಕ್ವಾಟ ।ಅದರಾಗ । ಮೂಡಿಕೂತಾನ ಬಸವ

ಹೀಗೆ ನಾಕು ಸುತ್ತಿನ ಕೋಟೆಯಲ್ಲಿ ನಾಟಿ, ಅಯ್ದು ಸುತ್ತಿನ ಕೋಟೆಯಲ್ಲಿ ಹೊಯ್ದು, ಆರುಸುತ್ತಿನ ಕೋಟೆಯಲ್ಲಿ ಹಾರಿ, ಏಳು ಸುತ್ತಿನ ಕೋಟೆಯಲ್ಲಿ ಹೇಳಿ ........ಹೀಗೆ ಹತ್ತು ಸುತ್ತಿನ ಕೋಟೆಯವರೆಗೆ ಸಾಗುತ್ತದೆ.

ಸನ್ಯಾಸಿಗೊಂದು ಆಶ್ರಮವಿರುವಂತೆ, ಗೃಹಸ್ಥನಿಗೂ ಒಂದು ಆಶ್ರಮವಿರುತ್ತದೆನ್ನುವುದು ಸ್ಪಷ್ಟವಾಯಿತು. ಸನ್ಯಾಸಿಯು ಲೋಕದ ಅಂತರಂಗದ ಕಿಲ್ಬಿಷವನ್ನು ಕಳೆಯುವ ಎತ್ತುಗಡೆ ನಡೆಸಿದರೆ, ಲೋಕದ ಬಹಿರಂಗವು ಬಾಳಿಬದುಕುವುದಕ್ಕೆ ತಕ್ಕುದಾಗುವಂತೆ ಗ್ರಹಸ್ಥನು ಕೆಚ್ಚನ್ನು ಒದಗಿಸುತ್ತಾನೆ, ಸನ್ಯಾಸಿ. ಅರಣ್ಯವಾಸಿ, ಗ್ರಹಸ್ಥ ಗ್ರಾಮವಾಸಿ. ಗೃಹಸ್ಥರಲ್ಲಿ ಒಕ್ಕಲಿಗನು ಪ್ರಮುಖ ಪಾತ್ರವಹಿಸುತ್ತಾನೆ. ಅವನಿಗೆ ಎತ್ತು ಆಕಳುಗಳೇ ಸಹಕಾರಿ.

## ೧೮ ಒಲ್ಲದ ಒಗೆತನ

ಮಡಿಮೆ ಕಡಿಮೆ, ಒಲುಮೆಹೆಚ್ಚು–ಇದು ಕನ್ಯೆಯ ಅಪೇಕ್ಷೆ. ಅದು ಮುಗಿಲ ಮಲ್ಲಿಗೆಯಂಥ ಮಗಳ ಸುಖಕ್ಕೆ ತಾರಕವೂ ಅಹುದೆಂದ ತಾಯಿತಂದೆಗಳು ನಂಬುವುದೂ ಉಂಟು. ಮೊಟ್ಟಮೊದಲು ನೋಡುತ್ತಾರೆ

**ಸಾವಿರಕೊಟ್ಟರು ಸವತಿಯ ಮನಿಬ್ಯಾಡ**
**ಸಾವಿರದ ಮೇಲೆ ಐನೂರು। ಕೊಟ್ಟರು।**
**ಮಲಮಕ್ಕಳಿರುವ ಮನಿಬ್ಯಾಡ॥**

ಈ ಮಾತು ವರದಕ್ಷಿಣೆಯ ಪಿಡಗು ಹಬ್ಬಿದ ಕಾಲದ್ದಲ್ಲವೆನ್ನುವುದು ಸ್ಪಷ್ಟ. ಸುಮಾರು ಅರ್ಧಶತಮಾನದ ಹಿಂದೆ ಕನ್ಯಾಶುಲ್ಕ ಬಳಕೆಯುಲ್ಲಿತ್ತು. ಸಾವಿರದಿಂದ ಹದಿನೈದುನೂರರ ವರೆಗೆ ಆ ಶುಲ್ಕದಬೆಲೆಯಿತ್ತೆಂದು ಈ ಈ ಪದ್ಯ ಹೇಳುತ್ತದೆ. ಸವತಿಯ ಮೇಲೆ ಕೊಡುವ ಹೆಣ್ಣಿಗೆ ಸಾವಿರ ವರೆಗಿನ ಶುಲ್ಕವಿತ್ತೆಂದೂ, ಮಲಮಕ್ಕಳಿದ್ದ ಮನೆಗೆ ಕೊಡುವ ಹೆಣ್ಣಿಗೆ ಅದಕ್ಕಿಂತ ಐನೂರು ರೂಪಾಯಿ ಹೆಚ್ಚಿಗೆ ಶುಲ್ಕವಿತ್ತೆಂದೂ ತರ್ಕಿಸಬಹುದಾಗಿದೆ. ಸವತಿಯ ಮನೆಯವರು ಸಾವಿರವೇಕೆ; ಮಲಮಕ್ಕಳ ಮನೆಯವರು ಸಾವಿರದ ಮೇಲೆ ಐನೂರೇಕೆ? ಇದು ತಿಳಿಯಲಾರದ ಪ್ರಶ್ನೆಯೇನಲ್ಲ. ಸಹಜವೇ ಇದೆ. ಅಲ್ಲಿ ಸವತಿ ಒಬ್ಬಾಕೆಯೇ ಇದಿರಾಳು, ಇಲ್ಲಿ ಮಲಮಕ್ಕಳ ದಂಡೇ ಇದಿರಾಳು, ಪುಣ್ಯಕ್ಕೆ ಅವೆರಡೂ ಮನೆಗಳಲ್ಲಿ ಅತ್ತೆಯಿದ್ದಾಳೆನ್ನುವ ಸುಳುಹಿಲ್ಲ ಇಷ್ಟೆಲ್ಲ ಬೆಲೆಯೇರಿಕೆ ಮದುವೆಯ ಕನ್ಯೆಯನ್ನು ಕುರಿತದ್ದೇ ಇರಬಹುದು. ಉಡಿಕೆಯ ಹೆಣ್ಣಾಗಿದ್ದರೆ ಇಷ್ಟೊಂದು ಬೆಲೆಯೇರಿಕೆ ಇರುತ್ತಿತ್ತೋ ಇಲ್ಲವೋ.

ರೊಕ್ಕದಾಸೆಗಾಗಿಯೋ ಆಪ್ತತ್ವದ ಗಸಣೆಗಾಗಿಯೋ ಸವತಿಯ ಮನೆಗೆ ಹೆಣ್ಣು ಕೊಟ್ಟಿರಬಹುದು. ಅದರಂತೆ ಮಲಮಕ್ಕಳಿರುವ ಮನೆಗೂ ಇನ್ನೊಬ್ಬರು ಕೊಟ್ಟಿರಬಹುದು. ಆದರೆ ಇಷ್ಟೊಂದು ಲೋಕವಾಣಿಯಾಗಿ ಉಳಿಯುವಂಥ ಅನುಭವವು ಒಬ್ಬಿಬ್ಬರಿಗೆ ಬಂದರಾಗುವುದೇ? ಹೀಗೆ ಮಾಡಿದ ಶುಭವ್ಯವಹಾರಗಳೆಲ್ಲ ದುಷ್ಪರಿಣಾಮಗಳನ್ನೂ ಬೀರಿರಬಹುದಾಗಿದೆ.

ಕೆಂಪು ಹೆಂಡತಿ ಬೇಕೆಂದು ಕರಕರಿ ಮಾಡುವ ಗಂಡುಗಳೇ ಹೆಚ್ಚು. ಅಂಥ ಸತ್ಪ್ರಸಂಗವೊದಗಿದರೂ, ಕಾಗೀಗಿ ಕಣ್ಣಟ್ಟ ಕರಿಯಹುಬ್ಬಿನ ಜಾಣರಿರುವುದೂ ಉಂಟು. ಇದು ಕರಿಹುಬ್ಬುಳ್ಳ ಜಾಣನ ವಿವೇಕಹೀನ ಕೃತಿಯಾದ ಮಾತ್ರಕ್ಕೆ ಕೆಂಬಣ್ಣದ ಹೆಂಡಿರೆಲ್ಲರೂ ಒಳ್ಳೆಯವರೇ ಆಗಿರುವರೆಂದು ಹೇಳಲಿಕ್ಕಾಗದು. ಯಾಕೆಂದರೆ

ಕೆಂಪು ಹೆಂಡತಿಯೆಂದು ಸಂತೋಷ ಪಡಬ್ಯಾಡ
ಅತ್ತೀಯ ಹಣ್ಣು ಅತಿಕೆಂಪು | ಇದ್ದರು
ಒಡೆದು ನೋಡಿದರೆ ಹುಳಭಾಳ ||

ಅತ್ತಿಯ ಹಣ್ಣನ್ನು ಒಡೆದುನೋಡುವ ಹವ್ಯಾಸ ಮಾಡಿದ್ದೇ ತಪ್ಪು. ಹುಳಕಾಣಿಸಬಾರದಾಗಿದ್ದರೆ, ಹಣ್ಣನ್ನು ಒಡೆಯದೆ ಕಣ್ಣುಮುಚ್ಚಿ ನುಂಗುವುದೇ ಸರಳೋಪಾಯ. ಹಣ್ಣು ಕಪ್ಪೇ ಇರಲಿ, ಕೆಂಪೇ ಇರಲಿ, ಅದು ಹೆಸರುಬೇಳೆಯಿದ್ದಂತೆ. ಆ ಹೆಣ್ಣನ್ನು ಮುದುಕನಿಗೆ ಮಾತ್ರ ಕೊಡಬಾರದೆಂದು ಗರತಿ ಗಟ್ಟಿಸಿ ಹೇಳುತ್ತಾಳೆ.

ಹೆಸರಬ್ಯಾಳಿ ಒಯ್ದು ಕೆಸರ ಕಲೆಸಿದಂಗ
ಹಸುಮಗಳನೊಯ್ದು ಮುದಕಗ| ಕೊಟ್ಟರ
ದುಸ್ಮಾನದವರು ತವರವರು||

ಇಂಥ ಕೆಲಸ ಮಾಡುವವರು ತವರವರಂತೂ ಅಲ್ಲ. ವೈರಿಗಳು ಮಾತ್ರ ಮಾಡಬಹುದಾಗಿದೆ. ಸವತಿಯುಳ್ಳ ಮನೆಗೆ ಹೆಣ್ಣು ಕೊಡಬಾರದು, ಮಲಮಕ್ಕಳಿದ್ದ ಮನೆಗೂ ಕೊಡಬಾರದು. ಕೆಂಪು ಹೆಂಡತಿ ಒಳ್ಳೆಯವಳೆಂದು ಹೇಳುವುದು ಹೇಗೆ ? ಕೊಡುಗೂಸನ್ನು ಮುದಿಮಗನಿಗೆ ಕೊಡುವುದೆಂದರೆ, ಹೆಸರುಬೇಳೆಯನ್ನು ಕೆಸರಲ್ಲಿ ಕಲೆಸಿದಂತೆ. ಕೆಂಪು ಬಣ್ಣದವಳು ಚೆಲುವೆಯೋ ಕಪ್ಪು ಬಣ್ಣದವಳು ಚೆಲುವೆಯೋ? ಚೆಲುವಿಕೆ ಕೆಂಪು-ಕಪ್ಪು ಬಣ್ಣದಲ್ಲಿರುವದಿಲ್ಲ. ತ್ವಚವು ಕೆಂಪಗಿರಲಿ, ಕಪ್ಪಗಿರಲಿ ಒಳಗಿನ ಪರಿಶುದ್ಧ ರಕ್ತದ ತೇಜವೇ ಚೆಲುವಿಕೆಯನ್ನು ತರುವದೆಂದು ಹೇಳಲಡ್ಡಿಯಿಲ್ಲ. ಜಾನಪದರು ಶಿವನ ಹೆಂಡತಿ ಪಾರ್ವತಿಯನ್ನು ವರ್ಣಿಸಿದಂತೆ, " ನೆಟ್ಟನ ಮೂಗಿನಾಕಿ| ಬಟ್ಟಲಗಣ್ಣಿನಾಕಿ| ಚೆಲುವೆಯೋ? ಚೆಲ್ವಿಕೆಯನ್ನು

ನಿರ್ಣಯಿಸುವ ಅಭಿರುಚಿಯು ಪ್ರತಿಯೊಬ್ಬರಲ್ಲಿ ಬೇರೆ ಬೇರೆ ಆಗಿರುತ್ತದೆ. ಮೊಂಡ ಮೂಗು, ಹಾಯ್ದು ಹಲ್ಲು ಒಬ್ಬರಿಗೆ ಚೆಲುವಾಗಿ ಕಾಣಿಸಬಹುದು. ಇನ್ನೊಬ್ಬರಿಗೆ ಆನೆಕಣ್ಣು, ರಂಜಣಿಗೆಯಂಚಿನ ತುಟಿಗಳು ಸೌಂದರ್ಯವನ್ನು ತಂದೊಡ್ಡಬಹುದು. ಏನೇ ಆಗಲಿ, ಚೆಲುವೆಯೆಂದು ನಿರ್ಣಯಿಸಿದರೆ ತೀರಲಿಲ್ಲ; ಒಳಗಿನ ಗುಣವನ್ನೂ ಪರಿಶೀಲಿಸಬೇಕಾಗುತ್ತದೆ.

**ಚೆಲುವಿ ಚೆಲುವಿಯಂತ ಅತಿಬಾಯಿ ಬಿಡಬೇಡ**
**ಚೆಲುವಿದ್ದರೇನು ಗುಣವಿಲ್ಲ । ಕೊಳೆನೀರ ।**
**ತಿಳಿಯಿದ್ದರೇನು ರುಚಿಯಿಲ್ಲ ॥**

ಅಂತೆಯೆ ಹೇಳುತ್ತಾರೆ-ಮನೆ ಕಟ್ಟಿನೋಡು, ಮದುವೆ ಮಾಡಿ ನೋಡು. ಹೆಣ್ಣು ಕೊಡುವುದು ಒಂದು ದಿಗಿಲಾದರೆ, ಹೆಣ್ಣು ತಗೆದು ಕೊಳ್ಳುವುದು ಇನ್ನೊಂದು ದಿಗಿಲು. ತೋರಿಸುವ ಹೆಣ್ಣು ಒಂದು, ಮದುಮಗಳಾಗುವುದು ಇನ್ನೊಂದು ಹೆಣ್ಣು. ಹರೆಯದವನನ್ನು ತೋರಿಸಿ, ಮುದುಕನಿಗೆ ಗಂಟುಹಾಕುವ ಯುಕ್ತಿಯನ್ನೂ ಕೆಲವರು ಮಾಡುವುದುಂಟು. ಅದೂ ಪುಣ್ಯದ ಕೆಲಸವೆಂದೇ ಭಾವಿಸಿರಬಹುದು. " ಮುದುಕ ಗಂಡನ ಮದುವ್ಯಾಗಿ ಆ ಬಾಲಿ ಇದ್ದ ಬಂಗಾರ ಇಡವ್ವೊಳ್ಳ" ವಸ್ತ್ರವೊಡವೆ ಧರಿಸುವುದನ್ನು ಬಿಟ್ಟಾಗಲಾದರೂ ಮುದುಕಗಂಡನಿಗೆ ಒಪ್ಪುವ ಮಡದಿಯಂತೆ ಕಾಣಿಸಬಹುದೆಂದು ಆಕೆ ಲೆಕ್ಕಿಸುತ್ತಾಳೇನೋ.

ಕತ್ತೆಮಾನವರೂ ಕೆಲವರಿರುತ್ತಾರೆಂದು ತೋರುತ್ತದೆ.ಕೊಟ್ಟಿಗೆಯಲ್ಲಿ ತಂದು ಕಟ್ಟಿನಿಲ್ಲಿಸಿ ದವಣಿಯಲ್ಲಿ ಹುಲ್ಲುಕಣಿಕೆ ಹಾಕಿದರೆ,ಕತ್ತೆ ತಿಂದು ಸಂತಸಪಡದು. " ಕತ್ತೆಗೆ ಹೂರಣಮೇಸಿದಂತೆ" ಎಂಬ ಗಾದೆಯಿದೆ. ಕತ್ತೆಜಾತಿಯ ಹೆಣ್ಣಿಗೆ ಹೂರಣದೂಟ ಆಗಿಬರದು. ಆಕೆಗೆ ಕಾಮನಂಥ ಚೆಲುವಾದ ಗಂಡ ದೊರೆತರೂ ಮಾವಿನ ಹಣ್ಣಿಗಿಂತ ಬೆಳವಲಕಾಯಿಯೇ ಬಾಯಿಗೆ ರುಚಿಯೆನ್ನುವವರಂತೆ, ಬೇರೊಬ್ಬ ಅಷ್ಟದರಿದ್ರನನ್ನು ಹುಡುಕುತ್ತ ಹೋಗುವುದೂ ಉಂಟು. ಸಿರಿಗೇಡಿಗೆ ಸೀರೆಯುಡಿಸಿದರೆ ಹೊಲಗೇರಿಗೆ ಹೇಳಲಿಕ್ಕೆ ಹೋಯಿತಂತೆ.

**ಬೇಲಿಮ್ಯಾಲಿನ ಹೂವ ಬೆಳ್ಳಗಿದ್ದರ ಛಾಯು**
**ಮಲ್ಲಿಗಿ ಹೂವಿನಂಥ ಮದವಿಗಂಡಾನ ಬಿಟ್ಟು**
**ಹುಲ್ಲಕೊಯ್ಯುವನ ಹುಡುಕ್ಯಾಳ||**

ಮಲ್ಲಿಗೆ ಹೂವಿನಂಥ ಗಂಡ; ಕಂಪುಬೀರುವ ವಸ್ತು. ಹೂಗಾರ ಮನೆಯಲ್ಲಿ ವಸತಿಮಾಡಿದ ನೆರೆಹಳ್ಳಿಯ ಮೀನುಗಾರ್ತಿಗೆ, ಮಲ್ಲಿಗೆ-ಗುಲಾಬಿ ಹೂಗಳ ಕಂಪೊಸರುವಲ್ಲಿ ನಿದ್ರೆಯೆ ಹತ್ತಲಿಲ್ಲವಂತೆ. ಕೊನೆಗೆ ಮೀನುಗಳನ್ನು ಕಟ್ಟಿತಂದಿದ್ದ ಅರಿವೆಯನ್ನು ಮುಖದಮೇಲೆ ಹಾಕಿಕೊಂಡು ಮಲಗಿದಾಗ ಗಡದು ನಿದ್ದೆ ಹತ್ತಿತಂತೆ. ಇನಿಗಂಪನ್ನೆಲ್ಲ ನುಂಗಿ. ಮೀನವಾಸನೆಯನ್ನೇ ಮೂಗಿಗೆ ಕಳಿಸುವ ಅರಿವೆಯಿಂದ ಮುಸುಕುಹಾಕಿಕೊಂಡ ಕೂಡಲೇ ಆಕೆಗೆ ನಿದ್ರೆಹತ್ತಿತಲ್ಲವೇ ? ಮಲ್ಲಿಗೆ ಹೂವಿನಂಥ ಮದುವೆಗಂಡನನ್ನು ಒಲ್ಲಗ-ಳೆದು ಹುಲ್ಲುಕೊಯ್ಯುವ ಕೊರವನನ್ನು ಹುಡುಕುವವಳ ಅಭಿರುಚಿಯನ್ನು ಯಾರುಬಲ್ಲರು?

" ಹಾಲಾಬೋನವುಂಡು ಹಾಸಹೊಯ್ಯೋ ಮಗಳೇ ಅಂದರೆ ಊರ ಮಿಂಡರೊಡನೆ ನೀರು ಹೊರ್ತೆನೆ ಅಂದಳಂತೆ" ಇಂಥ "ಅಸಲಜಾತ್ರ" ಹೆಣ್ಣುಗಳಲ್ಲದೆ ಇನ್ನೂ ಹಲವಾರು ಜಾತಿಯ ಹೆಣ್ಣುಗಳು ನೋಡಸಿಗುತ್ತವೆ, ಗಂಡನಲ್ಲಿ ವಿವಿಧ ಸ್ವಭಾವಗಳ ಜಾತಿಯಿರುವಂತೆ.

**ತಿಂದೋಡಿ ನಿನಗಂಡ ತಿಂದೇನು ಮಾಡಂದ**
**ತಿಂದೇಳು ಮನೆಯ ತಿರುಗೆಂದ| ಉಟ್ಟಶಾಲಿ**
**ಉಂಗುಟಕ ಹಾಕಿ ಹರಿಯಂದ||**

ಈ ತಿಂದೋಡಿಯದೂ ಒಲ್ಲದ ಒಗೆತನವೇ. ಅದಕ್ಕೆಂದೇ ಆಕೆಯಗಂಡ ನು ಕೊಂಕುನುಡಿಯಲ್ಲಿ ಹೇಳುತ್ತಾನೆ–ಉಟ್ಟಶಾಲಿ ಉಂಗುಟಕ್ಕೆ ಹಾಕಿ ಹರಿ. ಮತ್ತು ತಿಂದು ತಿಂದು ಏಳುಮನೆಯ ತಿರುಗು" ಈ ಎಡಹುರಿ ಬಲಹುರಿ ಎಳೆಗಳನ್ನು ಒಂದಾಗಿ ಹೊಸೆಯಲು ಯಾರಿಗೂ ಸಾಧ್ಯವಿಲ್ಲ. ಕೂಡಿದ ಬಳಿಕ ಒಲ್ಲದ ಒಗೆತನ ಕಂಡುಬರುವುದೇ ಹೆಚ್ಚು. "ಚೇಳು ಕಡಿಸಿಕೊಂಡು ಔಷದಿಯ ಖಾತ್ರಿಮಾಡಿಕೊಳ್ಳಿರಿ." ಎನ್ನುತ್ತ ಚೇಳಿನ ಔಷದಿ ಮಾರುವ ವನು, ಔಷಧಿಯೊಂದಿಗೆ ಚೇಳನ್ನು ತಂದಿರುತ್ತಾನೆ. ಬೆಳೆಯುಸಿರಿಯನ್ನು

ಮೊಳಕೆಯಲ್ಲಿಯೇ ತೋರ್ಪಡಿಸುವ ಹೆಣ್ಣುಗಳೂ ಇರುತ್ತವೆ. ಗಂಡುಗಳೂ ಇರುತ್ತವೆ. "ಮೊಟ್ಟೆ ಹೊಡೆಯುವವನ ಆಳಾಗಬಾರದು; ಅಟ್ಟುಂಡವನ ಹೆಂಡತಿಯಾಗಬಾರದು" ಎನ್ನುವಲ್ಲಿ ಹೆಣ್ಣಿನ ಕಸಿವೊಂದೇ ಕಂಡುಬರದೆ, ಗಂಡಿನ ಚೌಕಸಿಯೂ ಗೋಚರಿಸುತ್ತದೆ.

**ಗಂಧ ಹಚ್ಚಕ ಬಲ್ಲಿ ಗಮಕವಮಾಡಾಕ ಬಲ್ಲಿ**
**ಗಂಡನ್ಯಾಕೊಲ್ಲಿ ಗಯ್ಯಾಳಿ। ನಿನಕೆಲಸ।**
**ತಾಸ್ಹೊತ್ತಿನಾಗ ತೀರ್‍ಯಾವ॥**

"ಸುಖದ ಜೀವಕ್ಕೆ ಎಮ್ಮೆಯ ಹಯನು" ಎನ್ನುವಂತೆ, ಒಂಟಿಯಾಗಿ ಆದಷ್ಟು ಮಾಡಿ, ಹೋದಷ್ಟು ತಿಂದು ಸುಖದಿಂದಿರುವುದನ್ನು ಬಿಟ್ಟು, ಗಂಡ-ಗಂಡನ ಬಳಗ, ನಾಳೆಹುಟ್ಟುವ ಮಕ್ಕಳಹಿಂಡು ಇವರೆಲ್ಲರ ತರಡು ತೊಳೆಯುವ ತೊತ್ತುಗೆಲಸ ಯಾರು ಮಾಡಿಯಾರು? ಯಾಕೆ ಮಾಡಬೇಕು? ಇದ್ದ ಒಂದು ಜೀವಬಯ್ದು ಗಟಾರದಲ್ಲಿ ಯಾಕೆ ಚೆಲ್ಲಿಕೊಡಬೇಕು - ಎನ್ನುವ ಕನ್ಯೆಯೋ ಕೊಡಗೂಸೋ ಅಕ್ಕನ ಜಾತಿಗೆಸೇರಿದ ವಿರಾಗಿಣಿಯೇನಲ್ಲ.

ಹಿಂದಿನಿಂದ ನಡೆದುಬಂದ ಅನುಭವ ಪರಂಪರೆಯು ನಮ್ಮವರಿಗೆ ಅವೆಷ್ಟೋ ಬುದ್ಧಿವಂತಿಕೆಗಳನ್ನು ನೀಡಿದ್ದುಂಟು. ಭವಿಷ್ಯದಲ್ಲಿ ಒಲ್ಲದ ಒಗೆತನವಾಗಿ ಮುರಕಳಿಗೆ ಬಂದಾಗ ತಿಣಕುವುದಕ್ಕಿಂತ, ಹೊಳೆಯು ದೂರವಿರುವಾಗಲೇ ಕಾಲ್ಮರೆಗಳನ್ನು ಕೈಯಲ್ಲಿ ಹಿಡಿದುಕೊಳ್ಳುವುದು ಜಾಣತನವೆಂದು ಬಗೆದಿದ್ದಾರೆ. ಆ ಅನುಭವವನ್ನು ಅಲಕ್ಷಿಸಲಾಗದು; ಅಲಕ್ಷಿಸಬಾರದು. ಅಲಕ್ಷಿಸಿದರೆ ಇರಳುಕಂಡ ಭಾವಿಗೆ ಹಗಲು ಬಿದ್ದರು ಎನ್ನುವಂತಾಗುತ್ತದೆ.

**ವಾಲಿಕಾರ ನಿನಗ ಒಳ್ಳೆಹೆಂಡತಿ ಯಾಕೊ**
**ನೀಹೋದಿ ದೇಶತಿರುಗುತ। ನಿನನಾರಿ**
**ಬಾಡ್ಯಾಳೊ ಬಾಳೆಸುಳಿಯಾಗಿ॥**

ವಾಲಿಕಾರನಿಗೆ ಹೆಂಡತಿಯೇನೋ ಬೇಕು; ಇದರಲ್ಲಿ ಸಂಶಯವಿಲ್ಲ. ಆದರೆ ಒಳ್ಳೆಯ ಹೆಂಡತಿಯಾಗಿದ್ದರೂ ಬಾಳಿ ಸುಳಿಯಾಗಿ ಬಾಡುವಹೆಣ್ಣು ವಾಲಿಕಾರನ ಜೀವನಕ್ಕೆ ಹೊಂದಿಕೆಆಗಲಾರದು. ವಾಲಿಕಾರನು ದೇಶವನ್ನೆಲ್ಲ ಸುತ್ತಿ ಮನೆಗೆ ಬರುವಹೊತ್ತಿಗೆ ಹೆಣ್ಣೆಂಬ ಜೀನಸು ಆವನ ಕಣ್ಣಗೆಬಿದ್ದರೆ ಸಾಕು. ಒಲ್ಲದ ಒಗೆತನವು ಸಲ್ಲದ ಒಗೆತನವಾಗಿ, ಗಂಡನಿದ್ದು ಹೆಣ್ಣು ರಂಡಿ ಆಗುವದಾಗಲಿ, ರಂಡಿತನ ಭೋಗಿಸುವದಾಗಲಿ ಈಪ್ಸಿತವಾಗದು.

**ಕುಂಬಾರ ನಿನಗ್ಯಾಕೋ ಗೊಂಬೆಮಾಟದ ಹೆಣ್ಣ**
**ತುಂಬಿದ ಮಣ್ಣತುಳಿಯೆಂದ| ಮನೆಮನೆಗೆ|**
**ಹೊತ್ತುಮಾರೆಂದ ಹೊಸಮಡಕೆ||**

ಮಣ್ಣನ್ನು ಬುಟ್ಟಿಯಲ್ಲಿ ತುಂಬು. ಮಣ್ಣಿನಲ್ಲಿ ನೀರುಹಾಕಿತುಳಿ. ಮಾಡಿಟ್ಟ ಮಡಿಕೆಗಳನ್ನು ಹೊತ್ತು ಮನೆ ಮನೆಗೆ ಹೋಗಿ ಮಾರಾಟ ಮಾಡು. ಎನ್ನುವಂಥ ನೂರಾರು ಕೆಲಸಗಳನ್ನು ನಿರ್ವಹಿಸಬಲ್ಲಳೇ ಗೊಂಬೆ ಮಾಟದ ಹೆಣ್ಣು? ಆಕೆಯ ಮುಖನೋಡಿದ ಕೂಡಲೇ ಝಳ ಝಳ ಗೊತ್ತಾಗುತ್ತದೆ-ಇದು ಕುಂಬಾರನಿಗೆ ದಕ್ಕುವಂಥ ಕನ್ಯೆಅಲ್ಲ ಎಂದು, ಆ ಗೊಂಬೆಮಾಟದ ಹೆಣ್ಣು ಕುಂಬಾರರ ಮನೆಯಲ್ಲಿ ಹೇಗೆ ಹುಟ್ಟಿತೋ? ಅವರಲ್ಲಿ ಮಡಕೆಮಾಡುವ ಉದ್ಯೋಗ ಇರಲಿಲ್ಲವೇ? ಇನ್ನು ಆ ಗೊಂಬೆ ಮಾಟದ ಹೆಣ್ಣನ್ನು ಕುಂಬಾರಕಿ ಮಾಡಲಾರದ ಕುಂಬಾರನಿಗೆ ಕೊಟ್ಟಿದ್ದರೆ ಒಗೆತನ ಒಲ್ಲದ್ದಾಗುತ್ತಿರಲಿಲ್ಲ, ಅಡ್ಡ ಹೆಸರಿನ ಕುಂಬಾರ ಸಿಕ್ಕರೆಮಾತ್ರ ಆ ಕೊಡಗೂಸಿನ ದೈವ ತೆರೆಯಿತೆಂದು ತಿಳಿಯಬೇಕು. ದೈವವೆನ್ನುವುದೂ ಮುಚ್ಚಿದ ಮುಷ್ಟಿಯಿದ್ದಂತೆ. ಮುಷ್ಟಿತೆರೆದಾಗ ಗೊತ್ತಾಗುವದು- ಅರ್ಥ ರೇಖೆಯೊಡನೆ ಆಯುಷ್ಯ ರೇಖೆಯೂ ಇದೆಯೋ ಇಲ್ಲವೋ ಎನ್ನುವುದು.

## ೧೯ ಬೇಕಾಗಿ ಇರಬೇಕು.

ಎಲ್ಲರ ಬಾಯಲ್ಲಿಯೂ ಇರುವಂಥ ವ್ಯಕ್ತಿಆಗಬೇಕು. ಬಾಯಲ್ಲಿ ಇದ್ದರೆ ನಾಲಗೆಯ ಮೇಲೆ, ನಾಲಗೆಯಿಂದ ತುಸು ಸರಿದಾಡಿದರೆ ಹಲ್ಲಲ್ಲಿ

ಸಿಕ್ಕುಬೀಳಬೇಕಾಗುತ್ತದೆ. ಇಲ್ಲಿಸಲ್ಲುವರಾಗಬೇಕೆಂದು ಶರಣರು ಹೇಳಿದ್ದಾರೆ.

ಲೋಕದಾಗಿರುತನಕ ಬೇಕಾಗಿ ಇರಬೇಕ
ಸಾಕಾಗಿ ಶಿವನಸದರೀಗಿ। ಹೋಗುವಾಗ
ಎಲ್ಲರೂ ಬರತಾರ ಕಳಿಸಾಕ॥

ಆಗ ಶರಣರವಾಣಿ ಪೂರ್ತಿಗೊಳ್ಳುವದು-ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು. ಶಿವ ಒಬ್ಬನನ್ನು ಒಲಿಸಿಕೊಂಡರೆ, ಇಡಿಯ ಲೋಕವನ್ನೇ ಒಲಿಸಿಕೊಂಡಂತಾಗುವದೋ ಆ ಒಬ್ಬನೆಂದರೆ ಲೋಕಗಳ ತಂದೆ. ಆತನನ್ನು ಪ್ರೀತಿಸು, ಪೂಜಿಸು, ಗಟ್ಟಿಯಾಗಿ ಹಿಡಿದುಕೋ. ತಾಯಿ ಹೇಳುತ್ತಾಳೆ ಮಗಳಿಗೆ—

ದೇವಕಿ ನನ ಮಗಳ ದೇವರಪೂಜಿ ಮಾಡ
ದೇವಕರುಣ ನಿನಮ್ಯಾಲ। ಆದರ
ದೇವರಂಥ ಪತಿಯು ದೊರೆತಾನ॥

ದೇವದೇವನು ಒಲಿದು ಕೃಪೆಮಾಡಿದರೆ, ದೇವರಂಥ ಪತಿಯು ದೊರೆಯುವನೆಂದು ಗರತಿಗಂಗೋತ್ರಿ ಹೇಳುತ್ತಾಳೆ. ಹಾಗೆಪಡೆದ ಪತಿಯನ್ನು ದೇವರೆಂದು ಬಗೆಯುವದೇ ವಾಸ್ತವಿಕ. ದೇವನು ಕರುಣಿಸಿದ ಪತಿಯೆಂದರೆ ದೇವರಂಥಪತಿ. ಅಂಥ ಪತಿದೇವನನ್ನು ಯಾವ ಕಾಲಕ್ಕೂ ಮರೆಯಲಾಗಲ್ಲ. ಪತ್ರಿ ಆಯ್ತು, ಪುಷ್ಪವಾಯ್ತು, ದೀಪವಾಯ್ತು, ಧೂಪವಾಯ್ತು, ದೇವರಲ್ಲಿ ಭಕ್ತಿಯಿರದಿದ್ದರೆ, ಆ ಪತ್ರಿ ಪುಷ್ಪಗಳು ಯಾರಿಗೆ ಸಲ್ಲುವವು? ಆ ದೀಪಗಳು ಯಾರನ್ನು ಬೆಳಗುವವು? ಪತಿಯೆಂದರೆದೇವದೇವನ ಪ್ರತಿನಿಧಿಯಿದ್ದಂತೆ. ಪತಿಯನ್ನು ಪ್ರೀತಿಸಿದ ಸತಿ ದೇವರನ್ನು ಪ್ರೀತಿಸಿದಂತೆ. ಪ್ರೀತನಾದ ದೇವರದೇವ ಮಹಾದೇವನು ಒಲಿಯುವನು. ಮಹಾದೇವನೇ ಒಲಿದಬಳಿಕ ಇಡಿಯ ಜಗತ್ತೇ ಆಕೆಯದಾಗುವುದು.

ಪೂಜಿ ಮಾಡಿದರೇನ ಪತ್ರಿ ಏರ್ಸಿದರೇನ
ಪತಿಮೇಲೆ ಭಕ್ತಿಯಿರದಿದ್ರ। ಗೆಳದೆವ್ವ
ಮಹಾದೇವ ಹ್ಯಾಂಗ ಒಲಿದಾನ॥

ಮಹಾದೇವನೇ ಒಲಿದರೆ ಉತ್ತಮರ ಗೆಳೆತನ ಸಿಗುವುದರಲ್ಲಿ ಸಂಶಯವಿಲ್ಲ; ಅದು ಪುತ್ಥಳಿ ಬಂಗಾರವಿದ್ದಂತೆ. ಸಹವಾಸ, ಪರಿಸರ, ಪರಿವಾರ ಒಳ್ಳೆಯದಿದ್ದರೆ ಒಳ್ಳೆಯ ಬುದ್ಧಿ ಉಂಟಾಗುತ್ತದೆ. ಬುದ್ಧಿ ಒಳ್ಳೆಯದಾದರೆ ಕೃತಿ ಒಳ್ಳೆಯದಾಗುತ್ತದೆ; ನಡತೆ ಒಳ್ಳೆಯದಾಗುತ್ತದೆ. ಸಹಜವಾಗಿಯೇ ನಾಲ್ಕು ಜನರ ಬಾಯಲ್ಲಿ ಉಳಿಯುತ್ತೇವೆ; ಹಲ್ಲಲ್ಲಿ ಸಿಕ್ಕುಬೀಳುವದಿಲ್ಲ.

ಇದ್ದರೆ ಇರಬೇಕು ಬುದ್ಧಿವಂತರ ನೆರೆಯ
ಬುದ್ದರಗೇಡಿ ಕುಲಗೇಡಿ। ನೆರೆಯಿದ್ದು
ಇದ್ದಷ್ಟು ಬುದ್ಧಿ ಕಳಕೊಂಡ॥

ಬುದ್ಧಿ ಕಳಕೊಳ್ಳುವ ದಾರಿಹಿಡಿಯದೆ, ಬುದ್ಧಿವಂತರ ನೆರೆ, ಸಹವಾಸ ಗಳಿಸಿದರೆ ಸುಬುದ್ಧಿ ಸದ್ಬುದ್ಧಿಯುಂಟಾಗುವದು. ಸದ್ಬುದ್ಧಿಯು ಸದಾಚಾರವನ್ನು ಕಲಿಸುವದು.

ಅತ್ತಿಯ ಮನಿಯಾಗ ಹತ್ತಾರುಬಯ್ದರ
ಉತ್ತರಬ್ಯಾಡ ನನಮಗಳೆ। ನಿಮ್ಮತ್ತಿ
ಉತ್ತಮರ ಮಗಳೆಂದು ನುಡಿದಾಳು॥

ಅತ್ತೆಯ ಬಾಯಿಂದ ಉತ್ತಮರ ಮಗಳೆನಿಸುವುದು ಸೊಸೆಯಾದವಳ ಜೀವನಕ್ಕೆ ಸಾರ್ಥಕತೆ. ವಸಿಷ್ಠರಿಂದಲೇ ಬ್ರಹ್ಮರ್ಷಿಯೆನಿಸಿಕೊಳ್ಳಬೇಕೆಂಬ ಉದ್ದೇಶವಿರಿಸಿಕೊಂಡಿರಲಿಲ್ಲವೇ ವಿಶ್ವಾಮಿತ್ರ ರಾಜರ್ಷಿ? ಬ್ರಹ್ಮರ್ಷಿಯೆನಿಸಿಕೊಂಡಾಗಲೇ ವಿಶ್ವಾಮಿತ್ರನ ತಪಸ್ಸು ಸಾರ್ಥಕಗೊಂಡಿತು. ಅದರಂತೆ ಅತ್ತೆಯು ಉತ್ತಮರ ಮಗಳೆಂದಾಗಲೇ ಸೊಸೆಗೆ ಧನ್ಯತೆ. ಆ ಧನ್ಯತೆ ಸೊಸೆಗೆ ಬರುವುದಕ್ಕೆ ಆಕೆಯು ತಾಯಿಕಲಿಸಿದ ಮೂಲ ಮಹಾಮಂತ್ರದ ಪ್ರಭಾವವೇ ಕಾರಣವೆಂದು ಹೇಳಬೇಕು. ಆ ಮಹಾಮಂತ್ರ ಯಾವುದೆಂದರೆ— "ಅತ್ತೀಗಿ ಉತ್ತರ ಕೊಡಬ್ಯಾಡ."

ಗಂಡನ ಮನೆಗೆ ಹೊರಟ ಮೊದಲಗಿತ್ತಿಗೆ ಹೇಳಬಹುದಾದ ಕಿವಿಮಾತುಗಳು ನೂರೆಂಟು ಇರಬಹುದು. ಆದರೆ "ಅತ್ತೆಗೆ ಉತ್ತರ ಕೊಡಬೇಡ"

ಎನ್ನುವ ಮಂತ್ರದಲ್ಲಿರುವಂಥ ಶಕ್ತಿಯಾಗಲಿ ಪ್ರಭಾವವಾಗಲಿ ನೂರೊಂದು ಕಿವಿಮಾತುಗಳಲ್ಲಿ ಇರಲಾರವು.

ಅತ್ತಿಮಾವಗಂಜಿ ಸುತ್ತೇಳು ನೆರಿಗಂಜಿ
ಮತ್ತ ನಲ್ಲನ ಥನಿಗಂಜಿ। ನಡೆದರ।
ಎಂಥಉತ್ತಮರ ಮಗಳೆಂದ॥
ಅತ್ತೀಯ ಮನಿಯಾಗ ಹತ್ತಾರು ಬಯ್ದರ
ಉತ್ತರಬ್ಯಾಡ ನನ ಮಗಳ। ನಿಮ್ಮತ್ತಿ
ಉತ್ತಮರ ಮಗಳೆಂದು ನುಡಿದಾಳ॥

ಉತ್ತಮರ ಮಗಳೆನಿಸುವುದಕ್ಕೆ ಅತ್ತೆಗೆ ಉತ್ತರಕೊಡಬೇಡ-ಎನ್ನುವುದೇ ಮಹಾಮಂತ್ರವಾಗಿದೆ. ಅತ್ತೆಗೆ ಉತ್ತರಕೊಡಬಾರದು- ಅಂದಾಕ್ಷಣವೇ ಬಾಯಿಹೊಲಿದು ಮಾತಾಡದೆ. ಇರಬೇಕೆಂದು ಅರ್ಥವಲ್ಲ. ಕೇಳಿದ್ದಕ್ಕೆ ಮರುನುಡಿಯುವುದೇ ಬೇರೆ, ಉತ್ತರಕೊಡುವುದೇ ಬೇರೆ. ಮರುನುಡಿಯಲ್ಲಿ ಒಪ್ಪಿಗೆಯ ತಿರುಳು ಇರುತ್ತದೆ. ಉತ್ತರಕೊಡುವುದರಲ್ಲಿ ಅಸಮ್ಮತಿಯ ಗೊರಟೆಯಿರುತ್ತದೆ.

ಮೊದಲಗಿತ್ತಿಗೆ ಬುದ್ಧಿ ಹೇಳುವವರಲ್ಲಿ ಸದುದ್ದೇಶವಿರುವುದಾದರೂ ಅತ್ತೆಮನೆಯ ಭಯಾನಕತೆಯ ಗುಮ್ಮನ ಚಿತ್ರವೂ ಅದರಲ್ಲಿ ಮೂಡಿರುತ್ತದೆ. ಅಕ್ಕರೆಯಿಂದ ಸಾಕಿದ ಗಿಳಿಯನ್ನು ಬೆಕ್ಕಿನ ಬಾಯಿಗೆ ಕೊಡುವ ಸಿದ್ಧತೆನಡೆದಂತೆ ಎಂದು ಭಾವಿಸಿ, ಮಗಳು ಅತ್ತೆಯ ಮನೆಗೆ ನಗುತ್ತ ಕಲೆಯುತ್ತ ಹೋಗದೆ ಅಳುತ್ತ ಕರೆಯುತ್ತ ಹೋಗುವ ಪ್ರಸಂಗಗಳನ್ನೇ ಕಾಣುತ್ತೇವೆ.

ಅತ್ತಿಯ ಮನಿಯಾಗ ಮುತ್ತಾಗಿ ಇರಬೇಕ
ಹೊತ್ತ ನೀಡಿದರ ಉಣಬೇಕ। ತವರವರ।
ಉತ್ತಮರ ಹೆಸರ ತರಬೇಕ॥

ಎಂದು ತಾಯಿಯೋ ತಂದೆಯೋ ಹೇಳಿದರೆ, ಅಣ್ಣನು ತಂಗಿಗೆ ಒಂದಿಷ್ಟು ಹಿರಿಯನಾದ್ದರಿಂದ ತಾನು ಒಂದೆರಡು ಮಾತಿನಲ್ಲಿ ಸೊಸೆಯಾಗುವವಳ ಕರ್ತವ್ಯವನ್ನು ಹೇಳಿಕೊಡುತ್ತಾನೆ. ಆ ಮಾತು ಮುಂದೆ ತಂಗಿಗೆ ಹಲವುಸಾರೆ ನೆನೆಪಾಗುತ್ತದೆ.

ಸರದಾರ ನನ್ನಣ್ಣ ಕರೆದು ತಾ ಹೇಳ್ಯಾನ
ನೆರಿ ಹೊರಿಯ ಮನಿಯ ಹೊಗಬೇಡ। ನನತಂಗಿ
ಬರಬ್ಯಾರದ ಮಾತು ಬರತಾವ॥

ಅದೇ ಮಾತನ್ನು ತಾಯಿಯ ಭಾಷೆಯಲ್ಲಿ ಕೇಳೋಣ.

ಗುಂಡ ಮಾರಿಯ ಹೆಣ್ಣ ಚೆಂಡು ಹೂವಿನ ಬಣ್ಣ
ಕಂಡಕಂಡಲ್ಲಿ ನಗಬ್ಯಾಡ। ಎಲಿಮಗಳ
ಬರಬಾರದಪವಾದ ಬಂದಾವ॥

ಅಳುವ ಹೆಂಗಸನ್ನೂ ನಗುವ ಗಂಡಸನ್ನೂ ನಂಬಬಾರದೆಂದು ಹೇಳುತ್ತಾರೆ. ಆದರೆ ಅತ್ತೆ ಮನೆಯ ಸೊಸೆ ನಗುವುದು ಅಪಥ್ಯ. ಅದರರ್ಥವೇ ಬೇರೆ, ಪರಿಣಾಮವೇ ಬೇರೆ. ಮೊದಲೆ ಗುಂಡಮಾರಿಯ ಹೆಣ್ಣು. ಅದಕ್ಕೆ ಚೆಂಡುಹೂವಿನ ಬಣ್ಣ ಬೇರೆ. ಕಂಡಕಂಡಲ್ಲಿ ನಗುವುದರಿಂದ ಏನದಕ್ಕೆ ಅರ್ಥ? ಅನರ್ಥವೇ. ತವರುಮನೆಯಲ್ಲಿ ಆ ನಗೆ, ಆ ಕೇಕೆ ಅದೆಷ್ಟು ಉಕ್ಕಿ ಹರಿದರೂ ಅಲ್ಲಿ ಹೆಸರಿಡುವವರಾರು? ಹೊಸ ನಂಟುತನಕ್ಕಿಂತ ಹಳೆಯನಂಟುತನ ಹಳೆಯ ಜೇನಿನಂತೆ ಸತ್ ಪರಿಣಾಮವನ್ನು ಒದಗಿಸುವದು, ಅಂತೆಯೇ ತಾಯಿ ಹೇಳುತ್ತಾಳೆ ಮಗಳಿಗೆ.

ಸೋದರ ಮಾವನ ಸೊಸಿಯಾಗು ನನಮಗಳ
ಬಿಸಿಲಾಗ ನೀರ ತರಗೊಡನ। ನಿಮ್ಮಾವ
ನೀರ್ಹೊಳಿಗಿ ನಿಂಬಿ ಬನನಿಲುವಿ॥

ಒಟ್ಟಿನಲ್ಲಿ ಹೇಳಬೇಕಾದರೆ, ಲೋಕದಲ್ಲಿ ಎಲ್ಲರಿಗೂಬೇಕಾಗಿ ಇರಬೇಕೆನ್ನುವುದೇ ಮುಖ್ಯಮಾತು. ಅದು ಹೆಂಗಸಿಗಷ್ಟೇ ಹೇಳಿದ್ದಲ್ಲ. ಗಂಡಸಿಗೂ ಗಟ್ಟಿಸಿ ಹೇಳಿದ್ದೆಂದು ತಿಳಿಯಬೇಕು.

## ೨೦ ಸೌಜನ್ಯ ಸಿದ್ಧಿ

ಹೆಣ್ಮಕ್ಕಳ ಹಾಡುಗಳೆಂದರೆ ಅಕ್ಷರಗಳಲ್ಲಿ ಸ್ವರಗಳಿದ್ದ ಹಾಗೆ. ಗಂಡಸರ ಹಾಡುಗಳು ವ್ಯಂಜನಾಕ್ಷರಗಳಿದ್ದಂತೆ. ಮಕ್ಕಳ ಹಾಡು ಆಯೋಗ

ವಾಹ ಅಂದರೆ ಅಂಅಃ ಅಕ್ಷರಗಳಿದ್ದ ಹಾಗೆ. ಸ್ವರಗಳಿಗೆ ಸ್ವತಂತ್ರೋಚ್ಚಾರ ವಿದೆ. ವ್ಯಂಜನಗಳಿಗೆ ಸ್ವರ ಸೇರಿದಾಗಲೇ ಉಚ್ಚಾರಕ್ಕೆ ದಾರಿಯಾಗುತ್ತದೆ. ಸ್ವತಂತ್ರೋಚ್ಚಾರದ ಸ್ವರಗಳಾಗಿ ನಮ್ಮ ಗರತಿಯರ ಪದವಾಡು ಮಂತ್ರ-ವಿದ್ದ ಹಾಗೆ. ಅಂತೆಯೇ ಅವು "ಸಂಸಾರವೇದ" ಅನಿಸಿವೆ. ಆ ಹಾಡುಗಳಲ್ಲಿ ದಿ. ಬೇಂದ್ರೆ ಅವರು ಸೌಜನ್ಯಸಿದ್ಧಿಯನ್ನು ಕಂಡಿದ್ದರಲ್ಲದೆ, ಅದನ್ನು ತಾವೂ ಅಪೇಕ್ಷಿಸಿದ್ದರು. ಅವರಿಗೆ ವಾಂಛಿತವಾದ ಐದು ಮಹತ್ತತ್ವಗಳಲ್ಲಿ ಸೌಜನ್ಯಸಿದ್ಧಿಯೂ ಒಂದಾಗಿದೆ. ಹೆಣ್ಣುಮಕ್ಕಳ ಹಾಡುಗಳಿಗೆ "ಗೃಹಿಣೀ ಗೀತ" ಎಂದು ಹೆಸರಿಡಬೇಕೆಂದವರು, "ಗರತಿಯ ಹಾಡು" ಎಂದು ಕರೆದಿದ್ದಾರೆ. ಗೃಹಿಣಿ ಎಂಬ ಶಬ್ದಕ್ಕಿಂತ ಗರತಿ ಎಂಬ ಶಬ್ದದಲ್ಲಿ ಮಹತ್ತ್ವದ ಅರ್ಥವಿದೆ; ಅದೇ ಸೌಜನ್ಯ ಸಿದ್ಧಿ.

ಗರತಿಗೆ ಕೃಷ್ಣನನ್ನು ಕಾಣುವ ಹಂಬಲವು ಜೀವನದಲ್ಲೆಲ್ಲ ಇಂಬಾಗಿ ಹರಡಿದೆ.

ಕೃಷ್ಣ ಕೃಷ್ಣ ಎಂದು ಮತ್ತ ಬೀದಿಗಿ ಬಂದ
ಕೃಷ್ಣ ನಮಗೆಲ್ಲಿ ದೊರೆತಾನ। ಈ ಪರಿ।
ಎಷ್ಟುದಿನ ಹಿಂಗ ಕಳೆಯಲೀ?

ವರ್ಷದ ಪ್ರತಿಯೊಂದು ದಿನ, ದಿನದ ಪ್ರತಿಯೊಂದು ನಿಮಿಷ ಕೃಷ್ಣನ ಸ್ಮರಣೆ ನಡೆಸುವುದನ್ನು ಬಿಟ್ಟವಳಲ್ಲ. ಆಕೆಗೆ ಕೃಷ್ಣ, ನಾರಾಯಣ ಶಿವ, ಹರಿ ಎಲ್ಲಾ ಒಂದೇ. ಆದರಂತೆ ಬನದಮ್ಮ. ಮಹಾದೇವಿ, ಸತ್ತೆವ್ವ ಜಕ್ಕವ್ವ, ಎಲ್ಲಾ ಒಂದೇ. ಆಕೆಯು ನಂಬಿದ ದೈವತಕ್ಕೆ ಲಿಂಗಭೇದವಿಲ್ಲ. ಒಬ್ಬ ದೇವನ ವಿವಿಧ ರೂಪ-ಕಾರ್ಯಗಳನ್ನು ಗಮನಿಸಿ ಕರೆದ ಹೆಸರುಗಳೇ ದೇವನಾಮಗಳಾಗಿವೆ.

ಮನೆಯ ಬಳಗದಲ್ಲೆಲ್ಲ ತಾಯಿ ಹಿರಿಮೆಯೇ ಹಿರಿಮೆ. ಸರದಾಳಿಯಲ್ಲಿರುವ ತಾಳಿಯೇ ಮಂಗಲಕರ; ಶುಭಕರ; ಸುಖಕರವಾಗಿರುವುದಲ್ಲದೆ, ಭೂಷಣಪ್ರದವೂ ಆಗಿದೆ. ತವರುಮನೆಯ ದೀಪಕ್ಕೆ ಇಡಿಯ ಬಳಗವೇ ಹಣತಿ, ಬತ್ತಿ, ಎಣ್ಣೆ ಆಗಿದ್ದರೆ, ತಾಯಿಯ ನಲುಮೆಯೇ ಆ ದೀಪದ ಜ್ಯೋತಿ. ತವರುಮನೆಯ ಆದೀಪಕ್ಕೆ ಹತ್ತುಬೆರಳು ಹಚ್ಚಿ

ಶರಣೆನ್ನುವ ಕೃತಜ್ಞತೆ ಇನ್ನೆಲ್ಲಿ ಕಾಣಸಿಕ್ಕೀತು? ಕೃತಜ್ಞತೆಯೆ ಮಾನವನ ಹಿರಿಮೆಯನ್ನು ಅಳೆಯುವ ಅಳತೆಗೋಲು. ಅಂಥ ಕೃತಜ್ಞತೆಯನ್ನು ನಾವು ಗರತಿಯಲ್ಲಿ ಕಂಡಷ್ಟು ಇನ್ನಾರಲ್ಲಿಯೂ ಕಾಣಲಾರೆವು.

ತಾಯಿ ತನ್ನ ಸಂತಾನಕ್ಕೆ ಕಣ್ಣೆಂಜಲ ಕಾಡಿಗೆಹಚ್ಚಿ, ನಿತ್ಯವಾದುದನ್ನು ಸತ್ಯವಾದುದನ್ನು ಕಾಣುವ ದೃಷ್ಟಿ ಒದಗಿಸಿದ್ದಾಳೆ. ಅದರಂತೆ ಬಾಯೆಂಜಲ ವೀಳ್ಯವನ್ನು ಸಂತಾನ ವರ್ಗದ ಬಾಯ್ದೆರೆಗೆ ಸವರಿ ಕಂಡ ಸತ್ಯ-ಕಂಡ ನಿತ್ಯಗಳನ್ನು ನಿಚ್ಚಳವಾಗಿಉಸುರುವ ಶಕ್ತಿಯನ್ನು ಎರೆದಿದ್ದಾಳೆ.

ತಂದೆತಾಯಿಗಳ ನೆನಹೆಂದರೆ ಗರತಿಗೆ ಹರಿಗಡಿಯದ ಜೀವರಸವೇ ಆಗಿದೆ. ತಂದೆಯನ್ನು ನೆನೆದರೆ ತಂಗೂಳೂ ಬಿಸಿಯಾಗುವುದೆಂದೂ• ಗಂಗಾದೇವಿ ಹಡೆದವ್ವನ ನೆನೆದರೆ ಮಾಸಿದತಲೆ ಮಡಿಯಾಗುವುದೆಂದೂ, ಎದೆತಟ್ಟಿ ಹೇಳುತ್ತಾಳೆ. ತಾಯಿದ್ದರೆ ತವರು ಹೆಚ್ಚೆಂದೂ ತಂದೆಯಿದ್ದರೆ ಬಳಗಹೆಚ್ಚೆಂದೂ ಕೈಯೆತ್ತಿ ಸಾರುತ್ತಾಳೆ. ಹಡೆದವ್ವನ ಮೋರೆನೋಡಿ ಏನುಂಡರೂ ಮೊಲೆಹಾಲು ಉಂಡಂತೆ. ಅದೇ ಶಾವಿಗೆ - ಸೈದಾನಗಳ ಊಟ; ತಾಯಿಬೇಡಿದ್ದುಣ್ಣುವ ಭೋಜನ. ಅದಕ್ಕಾಗಿ ಗರತಿ ಹೃದಯ ತುಂಬಿ ಹರಸುವದೇನಂದರೆ-

**ಹಾಲುಂಡ ತವರೀಗಿ ಏನೆಂದು ಹಾಡಲೇ**
**ಹೊಳೆದಂಡಿಲಿರುವ ಕರಕೀಯ| ಕುಡಿಯಂಗ|**
**ಹಬ್ಬಲಿ ಅವರ ರಸಬಳ್ಳಿ||**

ಇದಕ್ಕಿಂತ ಮಿಗಿಲಾದ ಸೌಜನ್ಯ ಇನ್ನೇನಿದೆ?

ಗೆಳತಿಯರೊಂದಿಗೆ ವರತಿ ನೀರಿಗೆ ಹೋದಾಗ, ತಾಯಿಯನ್ನು ಕುರಿತ ಪ್ರಸಂಗಗಳು ನೆನಪಾಗುವವು. ಆ ನೆನಹು, ಕರುವನ್ನು ಕಂಡ ಆಕಳು ತೊರೆವು ಬಿಡುವಂತೆ, ಕೂಸನ್ನು ಕಂಡ ತಾಯಿಯ ಮೊಲೆ-ಹಾಲು ವಾತ್ಸಲ್ಯದಿಂದ ಉಕ್ಕಿಬಂದಂತೆ ವರತಿನೀರಿನ ಸೆಲೆಯ ಪುಟಿದೆದ್ದು ಬರುತ್ತದೆಂದರೆ ಆಶ್ಚರ್ಯವೇನು?

ತಾಯಿ ಮನೆಯೇ ಕಾಶಿಕ್ಷೇತ್ರ ಗರತಿಗೆ. ತಾಯಿಯೇ ಕಾಶಿಲಿಂಗ. ಎಲ್ಲವೂ ಕಾಶಿಯೇ. ಕಾಶಿಲಿಂಗ ಅದೆಂಥದೋ ಕಂಡವರಾರು? ಆದರೆ ತವರು ಮನೆಯ ಕಾಶಿಯನ್ನು ಅಲ್ಲಿದ್ದ ಕಾಶಿಲಿಂಗವನ್ನು ಕಾಣುವುದು ಸುಲಭ ಹಾಗೂ ಸುಗಮ.

ಕಾಶೀಗಿ ಹೋಗಲಕ ಏಸೊಂದು ದಿನಬೇಕ
ತಾಸ್ಹೊತ್ತಿನ್ಹಾದಿ ತವರೂರ। ಮನಿಯಾಗ
ಕಾಶಿಕುಂತಾಳ ಹಡೆದವ್ವ॥

ಜಗಜ್ಜನನಿಯ ಪ್ರತಿನಿಧಿಯಾದ ಹಡೆದವ್ವನ ನೆನಪು ಅಡಿಗಡಿಗೆ ಆಗುತ್ತಿರುವುದೇ ಗರತಿಯ ಹಿರಿಮೆಗೆ ಸಾಕ್ಷಿ. "ಹಿಟ್ಟನ್ನೆ ಬೀಸುವಾಗ ರೊಟ್ಟೀನೆ ಮಾಡುವಾಗ ವಿಠಲ ವಿಠಲ ಅನಬಾರದೇ। ಮನಿಯಕೆಲಸದಾಗ ಅದು ಒಂದು ಕೆಲಸೆಂದು ಅನಬಾರದೇ?" ಅನ್ನುವಂತೆ ದಿನನಿತ್ಯದ ಮನೆಗೆಲಸಗಳನ್ನು ನಿರ್ವಹಿಸುತ್ತಿರುವಾಗ ಗರತಿಗೆ ತಾಯಿಯ ಕೂಹು ಫಕ್ಕನೆ ಕಣ್ಣೆದುರಿಗೆ ಬಂದು ಆನಂದಾಶ್ರುವನ್ನು ಸುರಿಸಹಚ್ಚುವುದುಂಟು. ಅಂಥ ಒಂದು ಪ್ರಸಂಗವನ್ನು ಕುರಿತು ಗರತಿ ಹಾಡಿದ್ದು ಹೇಗಂದರೆ–

ಆಕಳ ಕರುಬಂದು ಅಂಬ ಅಂಬಾ ಎಂದು
ತಮ್ಮವ್ವನ ಮೊಲೆಯ ನಲಿನಲಿದು। ಉಂಬಾಗ।
ನಮ್ಮವ್ವನ ಧ್ಯಾನ ನನಗಾಗಿ॥

ಒಬ್ಬ ಮಗಳು ತಾಯಿಯನ್ನು ಇಷ್ಟೊಂದು ನೆನೆಸುತ್ತಿರುವಾಗ, ಆರೆಂಟು ಜನ ಹೆಣ್ಣುಮಕ್ಕಳಿಗೆ ತಾಯಿಯಾದವಳು, ಅವರನ್ನೆಷ್ಟು ನೆನೆಸುತ್ತಿರಬಹುದು? ಆಕೆಯಜೀವ ಆರೆಂಟು ನಿಟ್ಟಿಗೆ ಅದೆಷ್ಟು ಎಳೆಯುತ್ತಿರಬಹುದು? ಅದಕ್ಕಾಗಿ ಅದೆಷ್ಟು ಕಣ್ಣೀರು ಸೂರೆಯಾಗುತ್ತಿರಬಹುದು? ಈ ಸಂಕಟವನ್ನು ಪರಿಹರಿಸುವ ಉಪಾಯವೊಂದು ಇರಲೇಬೇಕಲ್ಲವೇ? ಗರತಿ ಹೇಳುವ ಆ ಉಪಾಯ ಯಾವುದೆಂದರೆ–

ಹೆಣ್ಣುಮಕ್ಕಳ ಕಳುಹಿ ಹೆಂಗಿದ್ದಿ ನಮ್ಮವ್ವ
ಹನ್ನೆರಡಂಕಣದ ಅರಮನೆ। ಗೋಡೆಮೇಲೆ
ನಮ್ಮಂಥ ರೂಪ ಬರಕೋಳೇ॥

" ಅವ್ವಾ! ಅತ್ತರೆ ಕರೆದರೆ ನಾವು ನಿನ್ನ ಹತ್ತಿರ ಇದ್ದಂತಾಗುವದೇ? ಬಂದಂತಾಗುವದೇ? ನೀನು ಹುಚ್ಚಿಯೇನೆ, ಮರುಳಿಯೇನೇ ಅವ್ವಾ? ಹನ್ನೆರಡು ಅಂಕಣದ ಗೋಡೆಗಳ ಮೇಲೆಲ್ಲ ನಿನ್ನ ಹೆಣ್ಣು ಮಕ್ಕಳ ತ್ರಗಳನ್ನು ಬರೆಸಿಡು. ಗೋಡೆಯ ಮೇಲಿನ ಆ ಚಿತ್ರಗಳನ್ನು ನೋಡಿ ಮರೆಯಲಿಕ್ಕಾಗುತ್ತದೆ.

ಹೆಣ್ಣುಮಕ್ಕಳ ದುಃಖ ಅದೆಂಥದಿರುತ್ತದೆಂಬುದು, ತಾಯಿಯನ್ನು ಬಿಟ್ಟರೆ ಇನ್ನಾರಿಗೂ ತಿಳಿಯದು. ಅದು ಹುತ್ತದೊಳಗಿನ ಸರ್ಪವಿದ್ದಹಾಗೆ. ಅದರ ಉದ್ವೆಗವನ್ನು ನೆತ್ತಿಯ ಮೇಲಿರುವ ಶಿವಮಾತ್ರ ಬಲ್ಲ.—ಎಂದು ಗರತಿ ಲೆಕ್ಕಹಾಕುತ್ತಾಳೆ.

ಇದೆಲ್ಲ ಹೆಣ್ಣುಮಕ್ಕಳ ನಾಲ್ಕು ಅವತಾರಗಳಲ್ಲಿ ಮೊದಲನೇ–ದಾದ ಮಗಳ ಅವತಾರವನ್ನು ಕುರಿತು ಹೇಳಿದಂತೆ, ಸೊಸೆ, ಹೆಂಡತಿ, ತಾಯಿ ಎಂಬ ಮೂರು ಅವತಾರಗಳನ್ನು ಕುರಿತು, ಪ್ರಾಸಂಗಿಕವಾಗಿ ಈ ಮೊದಲೇ ವಿವರಿಸಲಾಗಿದೆ. ಲೌಕಿಕ ಜೀವನದ ಯಥಾರ್ಥತೆಯನ್ನು ಯಥಾರ್ಥವಾಗಿ ಹೇಳಬಲ್ಲವಳು ಗರತಿಮಾತ್ರ. ಕುಟುಂಬ ಸಂಸ್ಥೆಯು ನಿಶ್ಚಯಾರ್ಥದಲ್ಲಿ ಒಂದಾಗುವಂತೆ ನಡೆನುಡಿಗಳಿಂದ ಬೋಧಿಸುವ ಜಗ–ದ್ಗುರುವಿನ ಸ್ಥಾನ ಗರತಿಗಲ್ಲದೆ ಇನ್ನಾರಿಗೂದಕ್ಕದು. ತಂದೆ ಸ್ಥೂಲ ಶರೀರ ಮಾತ್ರ. ತಾಯಿ ಒಳಗಿರುವ ಜೀವಸೂತ್ರ ತಾಯಿತಂದೆ ಅಂದರೆ ಉಮಾಪತಿ. ಮೂಲದಲ್ಲಿ ಸ್ವಯಂಭೂ ಎಂದರೂ ಸಾಂಬನೆಂದು ಮೊದಲೆ ಹೇಳಿದೆ.

ಜೀವನದಲ್ಲಿ ಬರುವ ಎಡರುತೊಡರು, ಭಯ ಸಂಕಟಗಳನ್ನು ಗರತಿ ಕಂಡ ಬಗೆ ಹೇಗೆಂದರೆ–

ಒಂದು ಬಂಡಿಲಿ ಕಲ್ಲು, ಒಂದು ಬಂಡಿಲಿ ಮುಳ್ಳು
ಹಿಂದಲ ಬಂಡೀಲಿ ರಣದುರಗಿ। ಕೂತುಕೊಂಡು
ಹೊಕ್ಕಳು ಕೋಣಬಿಗನರಮನೆಗೆ॥

ಇಂಥ ದೈತ್ಯ ಸಂಘಾತವನ್ನು ಕುಟುಂಬ ಸಂಸ್ಥೆಯ ಅಧ್ಯಕ್ಷಳಾದ ಗರತಿ; ತಿಳುವಳಿಕೆಯಿಂದತುಂಬೆದಸಾಗೂಸಜೀವವಾದ ಏಕತೆಯಿಂದ ಎದುರಿಸಿ

ಗೆಲ್ಲಬಲ್ಲಳು. ಗೆಲುವೆನೆಂಬ ಭಾಷೆಹೊತ್ತ ಭಕ್ತಳು ಮಾತ್ರ ತನ್ನ ಹೂಣಿಕೆಯನ್ನು ಪೂರ್ಣಗೊಳಿಸಬಲ್ಲಳು. " ಗರತಿಯ ಹಾಡು" ಕುಟುಂಬ-ಸಂಸ್ಥೆಗೆ ದಿನನಿತ್ಯದ ಪಾರಾಯಣಗೀತೆಯಾಗಿ ಮೊದಲಿನಂತೆ ಪ್ರಯೋಜನಕ್ಕೊಳಪಟ್ಟರೆ, ಸಂಸಾರವು ಅಸಾರವೆನಿಸಿದೆ ಸಂಸ್ಕಾರವಾಗಿಯೇ ಪರಿಣಮಿಸಬಲ್ಲದೆಂದು ಆಶಿಸಲು ಅಡ್ಡಿಯಿಲ್ಲ.

ಓಂ! ಭಗವತೀ!!





ಕನ್ನಡದ । ಕವಿರಾಜ
ನನ್ನಪ್ಪ ।ಲಿಂಗರಾಜ
ಸಿಂಪಿ ಎಂಬಾ । ಸುಧೆಯು
ಸೂಸಿಹುದು ನಾಡೆಲ್ಲ ॥

ಕವಿಗಳಲಿ । ಅಗ್ರಜ
ನಿನ ಕೀರ್ತಿ । ದಿಗ್ವಜ
ಡಾಳಿಸಿ ನೀ । ಹಚ್ಚಿದ ದೀಪ
ಬೆಳಗಲಿ ಜಗವೆಲ್ಲ ॥

ಅಪ್ಪ ನಿನಗ । ಆಯುಷ್ಯ
ನೂರು ಹತ್ತು । ವರುಷಿರಲಿ
ಕರ ಮುಗಿದು । ಬೇಡುವೆ
ಅರವಿಂದ ಗುರುವಿನಲಿ ॥

ಬಲ್ಲವಳು । ನಾನಲ್ಲ
ಎಳ್ಳಷ್ಟು । ಕಲಿತಿಲ್ಲ
ಮಂದಮತಿ । ನಾನಹುದು
ಸಿಂಪಿಯಾ ಸುತೆ ಮಾತ್ರ ॥

ಹುಟ್ಟೂರು । ಚಡಚಣ
ಕನ್ನಡದ । ಕವಿತಾಣ
ತಾ ಹರಿದು । ಬರುತಿಹುದು
ತಂದೆಯೊಲವಿನ ಸೂತ್ರ ॥

—ಜೀಜಾಬಾಯಿ ಪವಾರ,

ಕಲಾದಗಿ